# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು : ಎಂ.ಎಸ್. ವಿಕಾಸ್

ದಾವಣಗೆರೆ
ಶನಿವಾರ, ನವೆಂಬರ್ 16, 2024

ಸಂಪುಟ : 51 ಸಂಚಿಕೆ : 183 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




**ತೇರು..** ಹರಪನಹಳ್ಳಿ ಪಟ್ಟಣದ ಹಳೆಬಸ್ ನಿಲ್ದಾಣದ ಸಾರಿ ಬಯಲಿನಲ್ಲಿ ಶ್ರೀವೀರಭದ್ರೇಶ್ವರ ಸ್ವಾಮಿ ರಥೋತ್ಸವ ಶುಕ್ರವಾರ ಸಂಜೆ ಅಪಾರ ಭಕ್ತರ ಮಧ್ಯೆ ಸಂಭ್ರಮದಿಂದ ಜರುಗಿತು.

# ಅಜಾಗರೂಕ ಚಾಲನೆ, ಅನುಚಿತ ವರ್ತನೆ

## ಬಸ್, ಆಟೋ ಚಾಲಕರಿಗೆ ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಎಚ್ಚರಿಕೆ

ದಾವಣಗೆರೆ, ನ. 15 - ಸರ್ಕಾರಿ ಹಾಗೂ ಖಾಸಗಿ ಬಸ್ ಚಾಲಕರು ಅಜಾಗರೂಕತೆಯಿಂದ ವಾಹನ ಚಲಾಯಿಸುವ ಮೂಲಕ ಜನರ ಜೀವಕ್ಕೆ ಅಪಾಯ ಎದುರಾಗುತ್ತಿದೆ. ಈ ಬಗ್ಗೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಸೂಚಿಸಿದ್ದಾರೆ.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಕರೆಯಲಾಗಿದ್ದ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರಿ ಹಾಗೂ ಖಾಸಗಿ ಬಸ್‌ಗಳ ಚಾಲಕರು ಅಜಾಗರೂಕತೆಯಿಂದ ವಾಹನ ಚಲಾಯಿಸುತ್ತಿದ್ದಾರೆ. ಇಂತಹ ಬಸ್‌ಗಳನ್ನು ಮುಲಾಜಿಲ್ಲದೇ ವಶಕ್ಕೆ ತೆಗೆದುಕೊಳ್ಳಬೇಕು ಎಂದು ಅಧಿಕಾರಿಗಳಿಗೆ ತಿಳಿಸಿದರು.

ಕೆ.ಎಸ್.ಆರ್.ಟಿ.ಸಿ. ಬಸ್ ಚಾಲಕರಿಗೆ ಈ ಬಗ್ಗೆ ಅರಿವು ಮೂಡಿಸಲು ಸಭೆ ಕರೆಯಬೇಕು. ಇಷ್ಟಾದ ನಂತರವೂ ಬೇಜವಾಬ್ದಾರಿಯಿಂದ ಬಸ್ ಚಲಾಯಿಸಿದರೆ, ಬಸ್‌ಗಳನ್ನು ವಶಕ್ಕೆ ತೆಗೆದುಕೊಳ್ಳಲಾಗುವುದು ಎಂದು ಜಿಲ್ಲಾಧಿಕಾರಿ ಎಚ್ಚರಿಸಿದರು.

ಈ ರೀತಿಯ ಕಠಿಣ ಕ್ರಮ ತೆಗೆದುಕೊಂಡರೆ, ಅದು ಉಳಿದವರಿಗೂ ಎಚ್ಚರಿಕೆಯಾಗಲಿದೆ. ನಾಲ್ಕೈದು ದಿನ ಬಸ್‌ಗಳನ್ನು ವಶಕ್ಕೆ ತೆಗೆದುಕೊಂಡರೆ ಮಾಲೀಕರಿಗೆ ಅರಿವಾಗಲಿದೆ ಎಂದು ಗಂಗಾಧರಸ್ವಾಮಿ ಹೇಳಿದರು.



### ಹರಿಹರದ ಈ ರಸ್ತೆ ಯಾರದು ?

**ಹರಿಹರದಲ್ಲಿ ಮುಖ್ಯ ರಸ್ತೆಯಲ್ಲಿ ವಾಹನ ದಟ್ಟಣೆ ತಪ್ಪಿಸಲು ಪರ್ಯಾಯ ಮಾರ್ಗ ಕಲ್ಪಿಸಬೇಕಿದೆ. ಅಮರಾವತಿಯಿಂದ ಗುತ್ತೂರಿನವರೆಗೆ ಹೊಸ ರಸ್ತೆ ನಿರ್ಮಿಸಿದರೆ ಈ ಸಮಸ್ಯೆಗೆ ಪರಿಹಾರ ಸಿಗಬಹುದು ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು. ಆದರೆ, ಈ ರಸ್ತೆ ನಗರಸಭೆ ವ್ಯಾಪ್ತಿಗೆ ಬರುತ್ತದೆಯೋ ಅಥವಾ ಗ್ರಾಮೀಣಾಭಿವೃದ್ಧಿ ಇಲಾಖೆ ವ್ಯಾಪ್ತಿಗೆ ಬರುತ್ತದೆಯೋ ಎಂಬ ಬಗ್ಗೆ ಅಧಿಕಾರಿಗಳೇ ಅನುಮಾನ ವ್ಯಕ್ತಪಡಿಸಿದರು.**

**ಈ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿದ ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ರಸ್ತೆಯ ಕುರಿತ ಮಾಹಿತಿಯನ್ನು ಪರಿಶೀಲಿಸಿ ತಮಗೆ ಸಲ್ಲಿಸುವಂತೆ ಸೂಚಿಸಿದರು.**

### ವರ್ಷದಲ್ಲಿ 320 ಸಾವು

**ಕಳೆದ ವರ್ಷ ಜಿಲ್ಲೆಯಲ್ಲಿ ಅಪಘಾತಗಳಿಂದ 320 ಸಾವುಗಳು ಸಂಭವಿಸಿವೆ. ಈ ಸಾವುಗಳನ್ನು ತಡೆಯಲು ಅಪಘಾತ ವಲಯಗಳನ್ನು ಸರಿಪಡಿಸಬೇಕಿದೆ ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಹೇಳಿದರು.**

**ಅಪಘಾತಗಳಲ್ಲಿ ಹೆಚ್ಚು ಸಾವುಗಳು ಸಂಭವಿಸಿದಾಗ ಆ ಬಗ್ಗೆ ಕೇಂದ್ರ ಸರ್ಕಾರ ರಚಿಸಿರುವ ಉನ್ನತ ಆಯೋಗ ಪರಿಶೀಲಿಸುತ್ತದೆ. ಅಪಘಾತ ವಲಯಗಳ ಬಗ್ಗೆ ಕೇಂದ್ರ ಸರ್ಕಾರ ಗಂಭೀರವಾಗಿದೆ ಎಂದು ತಿಳಿಸಿದರು.**

### ತಿಂಗಳ ಅಂತ್ಯದೊಳಗೆ ರಸ್ತೆ ಗುಂಡಿಗಳಿಗೆ ಮುಕ್ತಿ

**ಮಳೆಗಾಲದಲ್ಲಿ ರಸ್ತೆಗಳಿಗೆ ಬಿದ್ದಿರುವ ಗುಂಡಿಗಳನ್ನು ಈ ತಿಂಗಳ ಅಂತ್ಯದೊಳಗೆ ಮುಚ್ಚಲಾಗುವುದು ಎಂದು ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ಜಿ. ನರೇಂದ್ರ ಬಾಬು ತಿಳಿಸಿದರು.**

**ತ್ವರಿತವಾಗಿ ರಸ್ತೆ ಗುಂಡಿಗಳನ್ನು ಮುಚ್ಚಬೇಕು. ಯಾವುದೇ ಕಾರಣಕ್ಕೂ ವಿಳಂಬ ಮಾಡಬಾರದು ಎಂದು ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ತಾಕೀತು ಮಾಡಿದರು.**

ಈ ಸಂದರ್ಭದಲ್ಲಿ ಮಾತನಾಡಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ನನ್ನ ಮಕ್ಕಳೇ ಇತ್ತೀಚೆಗೆ ಖಾಸಗಿ ಬಸ್ ಒಂದರ ಬೇಜವಾಬ್ದಾರಿ ಚಾಲನೆಯಿಂದ ಅಪಾಯಕ್ಕೆ ಸಿಲುಕಿದ್ದರು. ಮಕ್ಕಳು ಉಳಿದಿದ್ದೇ ಪುಣ್ಯ ಎಂದು ಹೇಳಿದರು.

ಆಟೋ ರಿಕ್ಷಾದ ಹಲವಾರು ಚಾಲಕರು ಅನುಚಿತವಾಗಿ ವರ್ತಿಸುತ್ತಿದ್ದಾರೆ. ಜನನಿಬಿಡ ತಾಣಗಳಲ್ಲಿ ಮಹಿಳೆಯರ ಎದುರಿಗೇ ವಾಹನ ಚಾಲಕರು ಮೂತ್ರ ವಿಸರ್ಜನೆ ಮಾಡುವ ವಿಡಿಯೋ ಒಂದನ್ನು **(4ನೇ ಪುಟಕ್ಕೆ)**

# ಮುಡಾದಲ್ಲಿ ಅಧಿಕಾರಿಗಳ ಲೋಪ

## ಲೋಕಾಯುಕ್ತ ಸಲ್ಲಿಸಿದ ಸದ್ಯದ ಸ್ಥಿತಿ ವರದಿಯಲ್ಲಿ ಮಾಹಿತಿ

ಬೆಂಗಳೂರು, ನ. 15 - ಮುಖ್ಯಮಂತ್ರಿ ಸಿದ್ದರಾಮಯ್ಯ ಕುಟುಂಬಕ್ಕೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) 14 ನಿವೇಶನಗಳ ಬಿಡಿ ಹಂಚಿಕೆಯಲ್ಲಿ ಅಧಿಕಾರಿಗಳು ಭಾರೀ ಲೋಪ ಎಸಗಿದ್ದಾರೆ ಎಂದು ಲೋಕಾಯುಕ್ತ 'ಸದ್ಯದಸ್ಥಿತಿ' (ಸ್ಟೇಟಸ್ ರಿಪೋರ್ಟ್) ವರದಿಯಲ್ಲಿ ತಿಳಿಸಿದೆ ಎಂದು ಮೂಲಗಳು ತಿಳಿಸಿವೆ.

ನ್ಯಾಯಾಲಯದ ಆದೇಶದಂತೆ ಬಿಡಿ ನಿವೇಶನಗಳ ಹಂಚಿಕೆ ಕುರಿತು ತನಿಖೆ ನಡೆಸುತ್ತಿರುವ ಮೈಸೂರು ಲೋಕಾಯುಕ್ತ ಎಸ್‌ಪಿ ಉದೇಶ್, ಸದ್ಯದ ತನಿಖಾ ಹಂತದ ವರದಿಯನ್ನು ಕೇಂದ್ರ ಕಚೇರಿಗೆ ತಲುಪಿಸಿದ್ದಾರೆ.

ಕಳೆದ ಕೆಲವು ದಿನಗಳ ಹಿಂದೆ ಲೋಕಾಯುಕ್ತ ಐಜಿ ಸುಬ್ರಹ್ಮಣ್ಯೇಶ್ವರ ರಾವ್ ಅವರನ್ನು ಭೇಟಿ ಮಾಡಿದ ಎಸ್‌ಪಿ ಅವರು, ತನಿಖೆ ಆರಂಭದಿಂದ ಇದುವರೆಗೂ ನಡೆದಿರುವ ಎಲ್ಲಾ ಹಂತದ ತನಿಖಾ ವರದಿಯ ಮಾಹಿತಿ ಮತ್ತು ದಾಖಲೆಗಳನ್ನು ಸಲ್ಲಿಸಿದ್ದಾರೆ.

ಆದರೆ, ಈ ವಿಚಾರದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಸ್ತಕ್ಷೇಪ ಮಾಡಿರುವುದಕ್ಕೆ ಎಲ್ಲಿಯೂ ದಾಖಲೆಗಳಿಲ್ಲ, ಅವರ ಪಾತ್ರ ಇದೆ ಎಂಬುದು ಎಲ್ಲಿಯೂ ಪ್ರಾಥಮಿಕ ತನಿಖೆಯಿಂದ ಕಂಡುಬಂದಿಲ್ಲ ಎಂಬ ಸದ್ಯದ ಸ್ಥಿತಿ ವರದಿ ನೀಡಿದ್ದಾರೆ.

ನಿವೇಶನ ಹಂಚಿಕೆ ಪ್ರಕರಣವನ್ನು ಮೂರು ಭಾಗಗಳಾಗಿ ವಿಂಗಡಿಸಿ ತನಿಖೆ ನಡೆಸಿದ್ದು, ಈಗಾಗಲೇ ಎರಡು ಭಾಗ ಪೂರ್ಣಗೊಂಡಿದೆ. ಮೂರನೇ ಭಾಗದ ತನಿಖೆ ಯಾವ ರೀತಿ ನಡೆಸಬೇಕು **(4ನೇ ಪುಟಕ್ಕೆ)**

## ವಕ್ಫ್ : ನೈಜ ವರದಿ ಸಂಗ್ರಹಿಸಲು ಬಿಜೆಪಿಯಿಂದ ಮೂರು ಸಮಿತಿ

ಬೆಂಗಳೂರು, ನ. 15 – ವಕ್ಫ್ ವಿವಾದದ ಹಿನ್ನೆಲೆಯಲ್ಲಿ ನೈಜ ವರದಿ ಸಂಗ್ರಹಿಸಲು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು 'ನಮ್ಮ ಭೂಮಿ – ನಮ್ಮ ಹಕ್ಕು' ಎಂಬ ಘೋಷವಾಕ್ಯದಡಿ ಮೂರು ತಂಡಗಳನ್ನು ರಚಿಸಿದ್ದಾರೆ.

ಈ ತಂಡಗಳು ಆಯಾಯ ಜಿಲ್ಲಾ ಕೇಂದ್ರಗಳಿಗೆ ಭೇಟಿ ನೀಡಿ ವಿಸ್ತೃತ ಮಾಹಿತಿ ಸಂಗ್ರಹಿಸಲಿವೆ.

ದಾವಣಗೆರೆ ಜಿಲ್ಲೆಗೆ ಭೇಟಿ ನೀಡಲಿರುವ ತಂಡದಲ್ಲಿ ಬಿಜೆಪಿ ಮುಖಂಡರಾದ ಚಲವಾದಿ ನಾರಾಯಣಸ್ವಾಮಿ, ಡಿ.ವಿ. ಸದಾನಂದ ಗೌಡ, ವಿ. ಸೋಮಣ್ಣ, ಸಿ.ಟಿ. ರವಿ, ನಳಿನ್ ಕುಮಾರ್ ಕಟೀಲ್, ಅರವಿಂದ ಲಿಂಬಾವಳಿ, ಎಸ್. ಮುನಿಸ್ವಾಮಿ, ಆರಗ ಜ್ಞಾನೇಂದ್ರ, ಬಿ.ಸಿ. ಪಾಟೀಲ್, ವೈ.ಎ. ನಾರಾಯಣಸ್ವಾಮಿ, ವಿವೇಕ್ ಸುಬ್ಬಾರೆಡ್ಡಿ ಅವರಿದ್ದಾರೆ. ವಿ. **(4ನೇ ಪುಟಕ್ಕೆ)**

## ವಕ್ಫ್ ಜಮೀನಿನಲ್ಲಿ ಉಳುಮೆ : ರೈತರ ವಿರುದ್ಧ ಪ್ರಕರಣ, ಟ್ರ್ಯಾಕ್ಟರ್ ವಶ

ಚಿಕ್ಕಬಳ್ಳಾಪುರ, ನ. 15 - ಚಿಕ್ಕಬಳ್ಳಾಪುರದ ಚಿಂತಾಮಣಿ ತಾಲೂಕಿನ ತಿಮ್ಮಸಂದ್ರ ಗ್ರಾಮದಲ್ಲಿ ವಕ್ಫ್ ಎಂದು ನಮೂದಾದ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದ ರೈತರ ಟ್ರ್ಯಾಕ್ಟರ್ ಅನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ಪ್ರಕರಣ ದಾಖಲಿಸಿದ್ದಾರೆ.

ರೈತರಾದ ಟಿ.ಎನ್ ಬೈರಾರೆಡ್ಡಿ, ಎನ್. ಮುನಿರೆಡ್ಡಿ, ಎನ್ ಚನ್ನಕೃಷ್ಣಪ್ಪ, ಲಕ್ಷ್ಮಿದೇವಮ್ಮ, ನಾರಾಯಣಪ್ಪ, ವೆಂಕಟರೆಡ್ಡಿ, ಶ್ರೀರಾಮರೆಡ್ಡಿ, ನಾಗಮ್ಮ, ಕೆ.ಲಕ್ಷ್ಮಮ್ಮ, ಮುನಿಲಕ್ಷ್ಮಮ್ಮ ಸೇರಿದಂತೆ 10ಕ್ಕೂ ಹೆಚ್ಚು **(4ನೇ ಪುಟಕ್ಕೆ)**

# ಮಹಾನಗರ ಪಾಲಿಕೆ ಎಲ್ಲಾ ನಾಲ್ಕೂ ಸ್ಥಾಯಿ ಸಮಿತಿಗಳಿಗೆ ಮಹಿಳೆಯರ ಸಾರಥ್ಯ






ದಾವಣಗೆರೆ, ನ.15- ಕಾಂಗ್ರೆಸ್ ಪಕ್ಷದ ಆಡಳಿತ ಹೊಂದಿರುವ ದಾವಣಗೆರೆ ಮಹಾನಗರ ಪಾಲಿಕೆಯ ಎಲ್ಲಾ ನಾಲ್ಕೂ ಸ್ಥಾಯಿ ಸಮಿತಿಗಳಿಗೆ ಅಧ್ಯಕ್ಷರುಗಳನ್ನಾಗಿ ಮಹಿಳಾ ಸದಸ್ಯರನ್ನು ನೇಮಕ ಮಾಡುವುದರ ಮೂಲಕ ಆ ಪಕ್ಷದ ವರಿಷ್ಠರು ನಾರಿಯರನ್ನು ಮುಂಚೂಣಿಗೆ ತಂದಿದ್ದಾರೆ.

ಹಿರಿಯ ಶಾಸಕ ಶಾಮನೂರು ಶಿವಶಂಕರಪ್ಪ, ಜಿಲ್ಲಾ ಉಸ್ತುವಾರಿ ಸಚಿವ ಶಾಮನೂರು ಮಲ್ಲಿಕಾರ್ಜುನ್, ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ಅವರುಗಳ ಶಿಫಾರಸ್ಸಿನ ಮೇರೆಗೆ ಪಾಲಿಕೆ ಮಹಾಪೌರರಾದ ಕೆ. ಚಮನ್ ಸಾಬ್ ಅವರ ನೇತೃತ್ವದಲ್ಲಿ ಪಾಲಿಕೆ ಕಾಂಗ್ರೆಸ್ ಸದಸ್ಯರು ಎಲ್ಲಾ ನಾಲ್ಕೂ ಸ್ಥಾಯಿ ಸಮಿತಿಗಳಿಗೆ ಮಹಿಳೆಯರನ್ನು ಅಧ್ಯಕ್ಷರುಗಳನ್ನಾಗಿ ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ.

ಪಟ್ಟಣ ಯೋಜನೆ ಮತ್ತು ಸುಧಾರಣೆ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ, ಸಾರ್ವಜನಿಕ ಆರೋಗ್ಯ, ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಶ್ರೀಮತಿ ಆಶಾ ಉಮೇಶ್ ಆಯ್ಕೆಯಾಗಿದ್ದಾರೆ.

ಅದೇ ರೀತಿ ಲೆಕ್ಕಪತ್ರ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಶ್ರೀಮತಿ ಸುಧಾ ಮಂಜುನಾಥ್ ಇಟ್ಟಿಗುಡಿ ಮತ್ತು ತೆರಿಗೆ ಸುಧಾರಣೆ, ಹಣಕಾಸು ಮತ್ತು ಅಪೀಲುಗಳ ಸ್ಥಾಯಿ ಸಮಿತಿ ಅಧ್ಯಕ್ಷರಾಗಿ ಶ್ರೀಮತಿ ಹುರುಬಾನು (ಪಂಡಿತ್) ಅವರುಗಳು ಆಯ್ಕೆಯಾಗಿದ್ದಾರೆ.

## ಅಪ್ರಾಪ್ತೆ ಪತ್ನಿ ಜೊತೆ ಬಲವಂತವಾಗಿ ಸೇರುವುದು ಅತ್ಯಾಚಾರ : ಹೈಕೋರ್ಟ್

ಮುಂಬೈ, ನ. 15 – ಅಪ್ರಾಪ್ತ ಪತ್ನಿಯ ಜೊತೆ ಬಲವಂತವಾಗಿ ಸೇರುವುದು ಅತ್ಯಾಚಾರ ಎಂದು ಬಾಂಬೆ ಹೈಕೋರ್ಟ್ ಹೇಳಿದೆ. ಈ ಅಪರಾಧಕ್ಕಾಗಿ ವ್ಯಕ್ತಿಯೊಬ್ಬನಿಗೆ 10 ವರ್ಷ ಜೈಲು ಶಿಕ್ಷೆ ನೀಡಿದ್ದನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

2021ರಲ್ಲಿ ಸೆಷನ್ಸ್ ನ್ಯಾಯಾಲಯವು 24 ವರ್ಷದ ವ್ಯಕ್ತಿಗೆ ಜೈಲು ಶಿಕ್ಷೆ ವಿಧಿಸಿತ್ತು. ಈ ಶಿಕ್ಷೆ ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ಮೇಲ್ಮನವಿ ದಾಖಲಿಸಲಾಗಿತ್ತು.

ಪತ್ನಿ ಜೊತೆ ಲೈಂಗಿಕ ಸಂಬಂಧ ಬೆಳೆಸಿದ್ದನ್ನು ಅತ್ಯಾಚಾರ ಎಂದು ಪರಿಗಣಿಸಲಾಗದು ಎಂದು ವ್ಯಕ್ತಿ ಅರ್ಜಿ ದಾಖಲಿಸಿದ್ದ. ಆದರೆ, ಪತ್ನಿ 18 ವರ್ಷದ ಒಳಗಿನವಳಾಗಿರುವ ಕಾರಣ, ಅತ್ಯಾಚಾರ ಎಂದು **(2ನೇ ಪುಟಕ್ಕೆ)**

## ವಿವಾದಿತ ಹೇಳಿಕೆ : ಈಶ್ವರಪ್ಪ ವಿರುದ್ಧ ಪ್ರಕರಣ

ಶಿವಮೊಗ್ಗ, ನ. 15 – ವಕ್ಫ್ ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ ವಿವಾದಿತ ಹೇಳಿಕೆ ನೀಡಿದ ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ವಿರುದ್ಧ ಶಿವಮೊಗ್ಗದ ಜಯನಗರ ಠಾಣೆಯಲ್ಲಿ ಪೊಲೀಸರು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಶಿವಮೊಗ್ಗದಲ್ಲಿ ನಡೆಸಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ್ದ ಈಶ್ವರಪ್ಪ, ಸಮಾಜದಲ್ಲಿ ಅಶಾಂತಿ ಸೃಷ್ಟಿಗೆ ಯತ್ನಿಸಿದ್ದಾರೆ ಎಂದು ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

# ಹೆಚ್ಚಾಗುತ್ತಿರುವ ನಾಯಿ ಕಡಿತ

## ಎರಡು ತಿಂಗಳಲ್ಲಿ ನಾಯಿ ದಾಳಿಗೆ ತುತ್ತಾದವರ ಸಂಖ್ಯೆ 281

ದಾವಣಗೆರೆ: '281' ಕಳೆದ ಎರಡು ತಿಂಗಳ ಅವಧಿಯಲ್ಲಿ ನಾಯಿ ಕಡಿತದಿಂದ ನಗರದ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದವರ ಸಂಖ್ಯೆ ಇದು. ಇದಲ್ಲದೇ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದವರೂ ಇರಬಹುದು.

ಒಟ್ಟಾರೆ ಬೀದಿ ನಾಯಿಗಳ ಹಾವಳಿಗೆ ದಾವಣಗೆರೆ ನಗರವೂ ಸೇರಿದಂತೆ ಜಿಲ್ಲೆಯ ಜನತೆ ರೋಸಿ ಹೋಗಿದ್ದಾರೆ. ಇವುಗಳ ಉಪಟಳಕ್ಕೆ ಪರಿಹಾರವೇ ಇಲ್ಲವೇ? ಎಂದು ಪ್ರಶ್ನಿಸುತ್ತಿದ್ದಾರೆ. ದಂಡಿಗೆ, ದಾಳಿಗೆ ಹೆದರದೇ ಇದ್ರೂ, ಬೀದಿ ನಾಯಿಗಳಿಗೆ ಹೆದರಬೇಕಾದ ಪರಿಸ್ಥಿತಿ ದಾವಣಗೆರೆ ಜನತೆಯದ್ದು.

ಪ್ರತಿ ದಿನ ಎರಡರಿಂದ ಮೂರು ಪ್ರಕರಣಗಳು ಜಿಲ್ಲಾಸ್ಪತ್ರೆಯಲ್ಲಿ ಕಾಣಿಸಿಕೊಳ್ಳುತ್ತವೆ. 2024ರಲ್ಲಿ ಜನವರಿಯಿಂದ ಅಕ್ಟೋಬರ್ ಕೊನೆಯವರೆಗೆ 735 ಜನರು ನಾಯಿ ಕಚ್ಚಿದಕ್ಕೆ ಚಿಕಿತ್ಸೆ ಪಡೆದಿದ್ದಾರೆ. ಕಳೆದ 2023ರ ಜನವರಿ ಯಿಂದ ಡಿಸೆಂಬರ್‌ವರೆಗೆ 434 ಜನರು ನಾಯಿ ಕಡಿತಕ್ಕೊಳಗಾಗಿ ಚಿಗಟೇರಿ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ.

ಆಶ್ಚರ್ಯವೆಂದರೆ ಕಳೆದ ಆಗಸ್ಟ್ ತಿಂಗಳಲ್ಲಿ 77, ಸೆಪ್ಟೆಂಬರ್ ತಿಂಗಳಲ್ಲಿ ಅತಿ ಹೆಚ್ಚು ಅಂದರೆ 166 ಹಾಗೂ ಅಕ್ಟೋಬರ್ ತಿಂಗಳಲ್ಲಿ 115 ಜನರಿಗೆ ನಾಯಿಗಳು ಕಚ್ಚಿದ್ದು, ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ಅಂಕಿ-ಅಂಶಗಳ ಪ್ರಕಾರ ಕಳೆದ ಕೆಲವು ತಿಂಗಳಿನಿಂದ ನಾಯಿ ಕಡಿತದ ಪ್ರಕರಣಗಳು ಹೆಚ್ಚಾಗುತ್ತಲೇ ಇವೆ.

ಸ್ಮಾರ್ಟ್ ಸಿಟಿ ದಾವಣಗೆರೆ ನಗರದಲ್ಲಂತೂ ಹತ್ತಾರು ನಾಯಿಗಳ ಹಿಂಡು ಪ್ರತಿ ಬಡಾವಣೆಯ ಪ್ರತಿ ಬೀದಿಗಳಲ್ಲೂ ಕಾಣ ಸಿಗುತ್ತವೆ. ರಾತ್ರಿಯಾಗುತ್ತಲೇ ಸೈಕಲ್, ಬೈಕ್ ಸವಾರರ ಬೆನ್ನತ್ತುವೆ. ಅಂದ ಹಾಗೆ ಈ ಬೀದಿ ನಾಯಿಗಳಿಗೆ ಪೊಲೀಸ್, ಪತ್ರಕರ್ತ, ಪಾಲಿಕೆ ಸದಸ್ಯ, ಅಧಿಕಾರಿ, ಸಾಮಾನ್ಯ ನಾಗರಿಕ ಎಂಬ ಯಾವ ಬೇಧವೂ ಇಲ್ಲ ಅನ್ನಿ. ಎಲ್ಲರೂ ನಾಯಿ ಉಪಟಳ ಅನುಭವಿಸಿದವರೇ.


ಚಿಕ್ಕಮಕ್ಕಳು, ವೃದ್ಧರಂತೂ ಬೀದಿಯಲ್ಲಿ ಓಡಾಡಲು ಭಯ ಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಕುರಿತು ಮಾಧ್ಯಮಗಳು ಎಚ್ಚರಿಸಿದರೂ, ಮಹಾನಗರ ಪಾಲಿಕೆಯಿಂದ ಮಾತ್ರ 'ನಮ್ಮಿಂದ ಏನು ಮಾಡಲೂ ಸಾಧ್ಯವಿಲ್ಲ' ಎಂಬ ಉತ್ತರ ಬರುತ್ತದೆ.

ಪಾಲಿಕೆ ಸಿಬ್ಬಂದಿಗಳಿಂದಲೇ ನಡೆದಿರುವ ಇತ್ತೀಚಿನ ಸರ್ವೇ ಪ್ರಕಾರ ದಾವಣಗೆರೆ ಪಾಲಿಕೆ ವ್ಯಾಪ್ತಿಯಲ್ಲಿ 16 ಸಾವಿರ ನಾಯಿಗಳಿವೆ. ಪ್ರತಿ ವರ್ಷ ನಾಯಿಗಳಿಗೆ ಸಂತಾನ ಹರಣ ಚಿಕಿತ್ಸೆ ಹಾಗೂ ರೇಬಿಸ್ ನಿರೋಧಕ ವ್ಯಾಕ್ಸಿನ್ ಕೊಡಲು ಟೆಂಡರ್ ಕರೆಯಲಾಗುತ್ತದೆ. ನಿರಂತರವಾಗಿ ಸಂತಾನ ಹರಣ ಚಿಕಿತ್ಸೆ ನೀಡುತ್ತಿರುವುದರಿಂದ ಸದ್ಯ ಬೆಳವಣಿಗೆ ನಿಂತಿದೆ ಎನ್ನುತ್ತಾರೆ ಪಾಲಿಕೆ ಅಧಿಕಾರಿಗಳು.

ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗೆಂದು ದಾಖಲಾಗುವ ಎಲ್ಲರೂ ಪಾಲಿಕೆ ವ್ಯಾಪ್ತಿಯಲ್ಲಿ ಇರುವುದಿಲ್ಲ ಎಂದು ಪಾಲಿಕೆ ಅಧಿಕಾರಿಗಳು ಹೇಳಬಹುದು. ಆದರೆ ಬಹುತೇಕವಾಗಿ ದಾಖಲಾಗುವ ಪ್ರಕರಣಗಳು ಪಾಲಿಕೆ ವ್ಯಾಪ್ತಿಯಲ್ಲಿವೇ ಹಾಗೂ ನಗರದ ಐದಾರು ಕಿಲೋ ಮೀಟರ್ ಸುತ್ತಲಿನ ಪ್ರದೇಶಗಳಿಂದ ಬಂದವರೇ ಎನ್ನುತ್ತವೆ ಆಸ್ಪತ್ರೆಯ ಮೂಲಗಳು.

### ಈ ವರ್ಷ 2 ಸಾವು

**ಕಳೆದ ಮಾರ್ಚ್ 14ರಂದು ಜಗಳೂರು ತಾಲ್ಲೂಕಿನ ಹನುಮಾಪುರದ ಹಳ್ಳಪ್ಪ ರಂಗಪ್ಪ ಎಂಬ 33 ವರ್ಷದ ಯುವಕ ನಾಯಿ ಕಚ್ಚಿ ರೇಬಿಸ್‌ನಿಂದ ಮೃತಪಟ್ಟಿದ್ದ. ಇನ್ನು ಕಳೆದ ಅಕ್ಟೋಬರ್‌ನಲ್ಲಿ ನಾಯಿ ಕಚ್ಚಿ ದಾವಣಗೆರೆ ಆಜಾದ್ ನಗರದಲ್ಲೂ ಒಂದು ಸಾವು ಸಂಭವಿಸಿದೆ. ಆದರೆ ಅದು ರೇಬಿಸ್‌ನಿಂದ ಎಂಬುದು ಇನ್ನೂ ದೃಢಪಟ್ಟಿಲ್ಲ.**





### ಪರಿಹಾರಕ್ಕೆ ಪ್ರಚಾರದ ಕೊರತೆ

**ಸರ್ಕಾರವು ಬೀದಿ ನಾಯಿಗಳ ದಾಳಿಗೆ ತುತ್ತಾಗಿ ಗಾಯಗೊಂಡವರಿಗೆ ಐದು ಸಾವಿರ ಹಾಗೂ ಮೃತಪಟ್ಟವರಿಗೆ 5 ಲಕ್ಷ ರೂ.ಪರಿಹಾರ ನೀಡುವಂತೆ ಆದೇಶಿಸಿದೆ.**


**ಆದರೆ ದಾವಣಗೆರೆ ಪಾಲಿಕೆ ವ್ಯಾಪ್ತಿಯಲ್ಲಿ ಪ್ರಸಕ್ತ ವರ್ಷ ಪರಿಹಾರ ಪಡೆದವರು ಮಾತ್ರ ಐದು ಜನ. ಪರಿಹಾರ ಸಿಗುವ ಬಗ್ಗೆ ಅನೇಕರಿಗೆ ಅರಿವಿಲ್ಲ. ಅರಿವು ಮೂಡಿಸುವ ಬಗ್ಗೆ ಪಾಲಿಕೆ ಅಧಿಕಾರಿಗಳೂ ಮುಂದಾಗಿಲ್ಲ. ನಾಯಿ ಕಚ್ಚಿ ಚಿಕಿತ್ಸೆ ಪಡೆದವರು ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಬೇಕು. ಅರ್ಜಿ ಜೊತೆ ಸರ್ಕಾರಿ ಆಸ್ಪತ್ರೆಯಿಂದ ಮೆಡಿಕಲ್ ರಿಪೋರ್ಟ್ ಬೇಕು. ಪೊಲೀಸ್ ಇಲಾಖೆಯಿಂದ ಎನ್‌ಸಿಆರ್ ವರದಿ ಪಡೆದು ಸಲ್ಲಿಸಬೇಕು. ಇನ್ನು ಪರಿಹಾರ ಪ್ರಕ್ರಿಯೆಗಳೂ ವಿಳಂಬ ಈ ಕಾರಣಕ್ಕಾಗಿ ಜನರೂ ಸಹ ಅರ್ಜಿ ಸಲ್ಲಿಸದೇ ಇರುವುದಕ್ಕೆ ಕಾರಣ ಇರಬಹುದು.**

### ನಾಯಿ ಕಡಿದರೆ ನಿರ್ಲಕ್ಷ್ಯ ಬೇಡ

**ರೇಬಿಸ್ ಸೋಂಕು ತಗುಲಿದರೆ ಸಾವು ನಿಶ್ಚಿತ. ರೇಬಿಸ್ ನಾಯಿ ಕಡಿತದಿಂದ ಶೇ 97ರಷ್ಟು ಪ್ರಮಾಣದಲ್ಲಿ ಬಂದರೆ, ಬೆಕ್ಕು ಹಾಗೂ ಕಾಡುಪ್ರಾಣಿಗಳ ಕಚ್ಚುವಿಕೆಯಿಂದ ಇನ್ನುಳಿದ ಶೇ 3ರಷ್ಟು ಬರುತ್ತದೆ. ಸಾರ್ವಜನಿಕರಲ್ಲಿ ಈ ಬಗ್ಗೆ ಅರಿವು ಮೂಡಬೇಕು. ಸಾಕು ಪ್ರಾಣಿಗಳಿಗೂ ಕಡ್ಡಾಯವಾಗಿ ವ್ಯಾಕ್ಸಿನ್ ಹಾಕಿಸಬೇಕು ಎನ್ನುತ್ತಾರೆ ವೈದ್ಯರು.**

**ನಾಯಿ, ಬೆಕ್ಕು ಸೇರಿದಂತೆ ಯಾವುದೇ ಪ್ರಾಣಿ ಕಚ್ಚಿದರೂ ಆ ಜಾಗವನ್ನು ಮೊದಲು ಸೋಪು ಇಲ್ಲವೇ ಡೆಟಾಲ್ ಹಚ್ಚಿ ಚೆನ್ನಾಗಿ ತೊಳೆಯಬೇಕು. ಅಲ್ಲಿಯೇ ಯಾವುದೇ ಪಟ್ಟಿ ಕಟ್ಟುವುದು ಸಲ್ಲದು. ನಾಟಿ ವೈದ್ಯರ ಬಳಿಗೆ ಹೋಗದೇ, ಏಳು ದಿನಗಳ ಒಳಗೆ ರೇಬಿಸ್ ಪ್ರತಿರೋಧಕ ಚುಚ್ಚುಮದ್ದು ಪಡೆಯಬೇಕು.**

# ಮಲ್ಲಿಕಾರ್ಜುನ ಕಡಕೋಳ ಅವರಿಗೆ ಮಹಲಿಂಗರಂಗ ಜಿಲ್ಲಾ ಸಾಹಿತ್ಯ ಪ್ರಶಸ್ತಿ



ದಾವಣಗೆರೆ, ನ.15- ಶ್ರೀಮತಿ ಗೌರಮ್ಮ ಪಿ. ಮೋತಿ ರಾಮರಾವ್ ಚಾರಿಟಬಲ್ ಟ್ರಸ್ಟ್ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಸ್ಥಾಪಿಸಿರುವ 2024 ರ ಸಾಲಿನ 'ಮಹಲಿಂಗರಂಗ ಜಿಲ್ಲಾ ಸಾಹಿತ್ಯ ಪ್ರಶಸ್ತಿ'ಗೆ ಹಿರಿಯ ರಂಗಕರ್ಮಿ ಹಾಗೂ ಸಾಹಿತಿ ಮಲ್ಲಿಕಾರ್ಜುನ ಕಡಕೋಳ ಆಯ್ಕೆಯಾಗಿದ್ದಾರೆ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ವಾಮದೇವಪ್ಪ ಹಾಗೂ ಶ್ರೀಮತಿ ಗೌರಮ್ಮ ಪಿ ಮೋತಿ ರಾಮರಾವ್ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಮೋತಿ ಆರ್. ಪರಮೇಶ್ವರರಾವ್ ತಿಳಿಸಿದ್ದಾರೆ.

ಶ್ರೀಮತಿ ಗೌರಮ್ಮ ಪಿ ಮೋತಿ ರಾಮರಾವ್ ಗೌರವಾರ್ಥ 2002 ರಲ್ಲಿ ಸ್ಥಾಪಿತವಾದ ಪ್ರತಿಷ್ಠಿತ 'ಮಹಲಿಂಗರಂಗ ಜಿಲ್ಲಾ ಸಾಹಿತ್ಯ ಪ್ರಶಸ್ತಿ'ಯು ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸೇವೆ ಸಲ್ಲಿಸಿದ ಸಾಹಿತಿಗಳಿಗೆ ಕೊಡಲಾಗುತ್ತದೆ.

ಕುವೆಂಪು ಕನ್ನಡ ಭವನದಲ್ಲಿ ನಡೆದ ಪ್ರಶಸ್ತಿಯ ಆಯ್ಕೆ ಸಮಿತಿಯ ಸಭೆಯಲ್ಲಿ ಮಲ್ಲಿಕಾರ್ಜುನ ಕಡಕೋಳರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಯಿತು. ಪ್ರಶಸ್ತಿಯು ರೂ.15000 ನಗದು ಹಾಗೂ ಸನ್ಮಾನ ಪತ್ರವನ್ನು ಒಳಗೊಂಡಿದೆ. ಮಲ್ಲಿಕಾರ್ಜುನ ಕಡಕೋಳರು ಕಳೆದ 4 ದಶಕಗಳಿಂದ ಸಾಹಿತ್ಯ ಕ್ಷೇತ್ರದ ಸೇವೆಯ ಮೂಲಕ ರಾಜ್ಯಾದ್ಯಂತ ಹೆಸರಾಗಿದ್ದಾರೆ.

ವಿಶೇಷವಾಗಿ ರಂಗಭೂಮಿ ಕ್ಷೇತ್ರದ ಕುರಿತಾದ ಅವರ ಸಂಶೋಧನೆ ಹಾಗೂ ಲೇಖನಗಳು ಹೆಚ್ಚು ಜನಪ್ರಿಯವಾಗಿವೆ. ಪ್ರಸ್ತುತ ಕಡಕೋಳರು ದಾವಣಗೆರೆಯ ವೃತ್ತಿ ರಂಗಭೂಮಿ **(2ನೇ ಪುಟಕ್ಕೆ)**

# ಸುಪ್ರೀಂ ಕೋರ್ಟ್ ತೀರ್ಪು ಮಾದಿಗ ಸಮುದಾಯದ ಸಮಗ್ರ ಪ್ರಗತಿಗೆ ರಹದಾರಿ



ದಾವಣಗೆರೆ, ನ.15- ಒಳ ಮೀಸಲಾತಿ ಜಾರಿಗೊಳಿಸುವ ಅಧಿಕಾರ ರಾಜ್ಯ ಸರ್ಕಾರಗಳಿಗಿದೆ ಎಂಬ ಸುಪ್ರೀಂಕೋರ್ಟ್ ತೀರ್ಪು ಮಾದಿಗ ಸಮುದಾಯದ ಸಮಗ್ರ ಪ್ರಗತಿಗೆ ರಹದಾರಿ ಹಾಗಿದೆ ಎಂದು ಮಾಜಿ ಸಚಿವ ಹೆಚ್. ಆಂಜನೇಯ ಅವರು ಇಂದಿಲ್ಲಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಇದೀಗ ಕೋರ್ಟ್ ತೀರ್ಪಿನ ನಂತರ ರಾಜ್ಯ ಸರ್ಕಾರದ ಅಂಗಳದಲ್ಲಿ ಸಾಮಾಜಿಕ ನ್ಯಾಯ ಕಲ್ಪಿಸುವ ಚೆಂಡು ಇದೆ. ಅನೇಕ ಸಮಸ್ಯೆಗಳ ಸುಳಿಗೆ ಸಿಲುಕಿದ್ದ ಮಾದಿಗ ಮತ್ತು ಸಹೋದರ ಜಾತಿಗಳಿಗೆ ಒಳ ಮೀಸಲಾತಿ ವರವಾಗಿ ಪರಿಣಮಿಸಲಿದೆ ಎಂದರು.

ಸಾಮಾಜಿಕ ನ್ಯಾಯದ ಹರಿಕಾರರೂ, ಅಹಿಂದ ನಾಯಕ ಎಂದೇ ಬಿಂಬಿತವಾಗಿರುವ ಮುಖ್ಯಮಂತ್ರಿ ಸಿದ್ಧರಾಮಯ್ಯ ಈ ವಿಷಯದಲ್ಲಿ ದಿಟ್ಟ ನಿರ್ಧಾರ ಕೈಗೊಂಡು ಒಳಮೀಸಲಾತಿ ಜಾರಿಗೊಳಿಸಿ, ದಲಿತರ ಕಣ್ಮಣಿ ಆಗುವ ಅವಕಾಶ ನೀಡಿದೆ ಎಂದು ಹೇಳಿದರು.

ಕಳೆದ ಮೂರು ದಶಕಗಳ ಹೋರಾಟದ ಫಲವಾಗಿ ಮತ್ತು ಸರ್ವ ಪಕ್ಷಗಳ ಸರ್ಕಾರಗಳ ಸಹಕಾರ, ಬದ್ಧತೆ ಕಾರಣಕ್ಕೆ ಪರಿಶಿಷ್ಟ ಜಾತಿ ಗುಂಪಿನಲ್ಲಿ ಒಳ ಮೀಸಲಾತಿ ಜಾರಿಗೊಳಿಸುವ ಸಂದರ್ಭ ಎದುರಾಗಿದೆ ಎಂದರು.

ಯಾರ ಒತ್ತಡಕ್ಕೂ ಮಣಿಯದೇ ಒಳ ಮೀಸಲಾತಿ ಜಾರಿಗೊಳಿಸುವ ನಿರ್ಣಯ ಕೈಗೊಂಡಿದ್ದು, ಅದರ ಮೊದಲ ಹೆಜ್ಜೆಯಾಗಿ ದತ್ತಾಂಶ ಸಂಗ್ರಹಕ್ಕೆ ಆಯೋಗ ರಚಿಸಿ, ಅಧ್ಯಕ್ಷರನ್ನಾಗಿ ನ್ಯಾಯಮೂರ್ತಿ ನಾಗಮೋಹನ್ ದಾಸ್ ಅವರನ್ನು ನೇಮಕ ಮಾಡಿರುವುದು ಪರಿಶಿಷ್ಟ ಸಮುದಾಯದಲ್ಲಿ ಆಶಾಕಿರಣ ಮೂಡಿಸಿದೆ ಎಂದು ಹೇಳಿದರು.

ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡಬೇಕೆಂಬ ಹೋರಾಟದ ಪರಿಣಾಮ ಈ ಹಿಂದೆ ರಚನೆಗೊಂಡಿದ್ದ ನಾಗಮೋಹನ್ ದಾಸ್ ನೇತೃತ್ವದಲ್ಲಿ ಆಯೋಗ ಎಸ್ಸಿಗೆ 15 ರಿಂದ 17, **(4ನೇ ಪುಟಕ್ಕೆ)**

# ರಾಸಾಯನಿಕ ಬಳಕೆಯಿಂದ ಮಣ್ಣು, ನೀರು ಕಲುಷಿತ

ಹರಿಹರ



> ದೇಶದಲ್ಲಿನ ಅನೇಕ ರೈತರು ಸಾವಯವ ಕೃಷಿ ಕಡೆಗೆ ಹೆಚ್ಚು ಒಲವು ತೋರದೇ ಹಣದ ದುರಾಸೆಗೆ ವಿವಿಧ ರೀತಿಯ ರಾಸಾಯನಿಕ ಗೊಬ್ಬರ ಬಳಸುತ್ತಿರುವುದರಿಂದ ಮಣ್ಣು ಮತ್ತು ನೀರು ಕಲುಷಿತವಾಗಿದ್ದು, ಇದರಿಂದ ಮನುಷ್ಯನ ಆಯಸ್ಸು ದಿನದಿಂದ ದಿನಕ್ಕೆ ಕಡಿಮೆ ಆಗುತ್ತಿರುವುದಕ್ಕೆ ಕಾರಣವಾಗಿದೆ.
>
> -ಶ್ರೀ ವಚನಾನಂದ ಮಹಾಸ್ವಾಮೀಜಿ, ಪೀಠಾಧ್ಯಕ್ಷರು, ಪಂಚಮಸಾಲಿ ಸಮಾಜ

ಹರಿಹರ, ನ.15- ಮನುಷ್ಯನ ನರನಾಡಿಗಳು ಆಶಕ್ತವಾದರೆ ದೇಹ ಅನಾರೋಗ್ಯಕ್ಕೆ ತುತ್ತಾಗುತ್ತದೆ. ಹಾಗೆಯೇ ದೇಶದಲ್ಲಿನ ನದಿಗಳು ಕಲುಷಿತವಾದರೆ ದೇಶವು ಬಡತನದಿಂದ ನರಳುವಂತಾಗುತ್ತದೆ. ಆದ್ದರಿಂದ ದೇಶದಲ್ಲಿನ ಜನರ ಜೀವನ ಶ್ರೀಮಂತಿಕೆಯ ಕಡೆಗೆ ಸಾಗಬೇಕಾದರೆ ನದಿ, ಗಾಳಿ, ಮಣ್ಣು, ಆಕಾಶ ಶುದ್ಧವಾಗಿರಬೇಕು ಎಂದು ಪಂಚಮಸಾಲಿ ಗುರುಪೀಠಾಧ್ಯಕ್ಷರಾದ ಶ್ರೀ ವಚನಾನಂದ ಮಹಾಸ್ವಾಮೀಜಿ ಅಭಿಪ್ರಾಯಪಟ್ಟರು.

ನಗದ ತುಂಗಭದ್ರಾ ನದಿಯ ದಂಡೆಯ ತುಂಗಾರತಿ ಕಾರಿಡಾರ್ ಸ್ಥಳದ ಆವರಣದಲ್ಲಿ ರಾಷ್ಟ್ರೀಯ ಸ್ವಾಭಿಮಾನ ಆಂದೋಲನ, ನವದೆಹಲಿ ಪರ್ಯಾವರಣ ಟ್ರಸ್ಟ್, ಹಾಗೂ ನಿರ್ಮಲ ತುಂಗಭದ್ರಾ ಅಭಿಯಾನ ಕರ್ನಾಟಕ ವತಿಯಿಂದ ಜಲ ಜಾಗೃತಿ, ಜನಜಾಗೃತಿ ಪಾದಯಾತ್ರೆಯ ಸಮಾರೋಪ ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ನದಿಯಲ್ಲಿ ತ್ಯಾಜ್ಯ ಹರಿದು ಬರುವುದರಿಂದ ಹರಿಯುವ ನೀರು ಬಹಳಷ್ಟು ಕಲುಷಿತ ವಾಗುತ್ತಿದ್ದು, ಇದರಿಂದಾಗಿ ಪ್ರಾಣಿ, ಪಕ್ಷಿಗಳೂ ಸಹ ಸಂಕಷ್ಟಕ್ಕೆ ಸಿಲುಕಿ ನಾಶವಾಗುವಂತಹ ವಾತಾವರಣ ಸೃಷ್ಟಿಯಾಗುತ್ತಿದ್ದು, ಅದನ್ನು ತಡೆಯಲು ನದಿಯಲ್ಲಿ ಹರಿಯುವ ನೀರನ್ನು ಶುದ್ಧೀಕರಣ ಮಾಡಿದರೆ ಮುಂದಿನ ಜನತೆಯ ಭವಿಷ್ಯಕ್ಕೆ ಒಳ್ಳೆಯದಾಗುತ್ತದೆ ಎಂದು ಹೇಳಿದರು.

ಇತ್ತೀಚೆಗೆ ಬೆಳಗ್ಗೆ ಟಿ.ವಿ. ಮಾಧ್ಯಮದಲ್ಲಿ ಬರುವಂತಹ ಕೆಲವು ಜೋತಿಷ್ಯರು ನದಿಯಲ್ಲಿ ಹಳೆಯ ಬಟ್ಟೆಗಳನ್ನು ಬಿಟ್ಟರೆ ಪಾಪಗಳು ಪರಿಹಾರವಾಗಿ, ಉದ್ದಾರ ಆಗುತ್ತೀರಿ ಎಂದು ಹೇಳುತ್ತಿರುವುದರಿಂದ ನದಿ ದಂಡೆಯ ಮೇಲೆ ಟನ್ ಗಳಷ್ಟು ಹಳೆಯ ಬಟ್ಟೆಗಳನ್ನು ಕಾಣಬಹುದಾಗಿದೆ. ಅದೇ ರೀತಿ ತಾಲ್ಲೂಕಿನ ಪ್ರಸಿದ್ಧ ಉಕ್ಕಡಗಾತ್ರಿ ಕರಿಬಸವೇಶ್ವರ ದೇವಸ್ಥಾನದಲ್ಲಿ ಪ್ರತಿ ಅಮಾವಾಸ್ಯೆ ದಿನದಂದು ಹಳೆ ಬಟ್ಟೆಗಳನ್ನು ಸ್ವಚ್ಛತೆಗೆ 2 ಜೆಸಿಬಿ ಯಂತ್ರಗಳ ವ್ಯವಸ್ಥೆ ಮಾಡಲಾಗಿದೆ.

ಮನುಷ್ಯನು ನದಿಯಲ್ಲಿ ಜಳಕ ಮಾಡಿ ಮನಸ್ಸಿನಲ್ಲಿರುವ ಕೆಟ್ಟ ಗುಣಗಳನ್ನು ತೊಲಗಿಸಲು ಮುಂದಾದರೆ ಬದುಕಿನಲ್ಲಿ ಬದಲಾವಣೆ ಆಗುತ್ತದೆ. ಜೊತೆಗೆ ಪವಿತ್ರ ದಾರಿಯಲ್ಲಿ ಸಾಗಬಹುದು. ಅದನ್ನು ಬಿಟ್ಟು ಹಳೆಯ ಬಟ್ಟೆಗಳನ್ನು ಬಿಡುವುದರಿಂದ ಪಾಪ ಕಡಿಮೆ ಆಗುವುದಿಲ್ಲ ಎಂದು ಹೇಳಿದರು.

ನಿರ್ಮಲ ತುಂಗಭದ್ರಾ ಅಭಿಯಾನದ ಪ್ರಮುಖ ಐ.ಐ.ಟಿ. ಪ್ರಾಧ್ಯಾಪಕ ಎಲ್.ಕೆ. ಶ್ರೀಪತಿ ಪ್ರಾಸ್ತಾವಿಕ ಮಾತನಾಡಿದರು.

ಶಾಸಕ ಬಿ.ಪಿ. ಹರೀಶ್ ಮಾತನಾಡಿ, ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಕೊಳಚೆ ನೀರು ಜೊತೆಗೆ ಜಮೀನಿಗೆ ಬಳಸುವ ರಾಸಾಯನಿಕ ಗೊಬ್ಬರ ಬಳಕೆ ಮಾಡಿದಾಗ ಮಳೆಯಿಂದಾಗಿ ಮತ್ತು ಪೂಜೆ ಹೆಸರಿನಲ್ಲಿ ಉಪಯೋಗಿಸುವ ವಸ್ತುಗಳಿಂದ ನದಿಯ ನೀರು ಕಲುಷಿತವಾಗಿ ಅನೇಕ ರೀತಿಯ ಸಮಸ್ಯೆಗಳನ್ನು ಕಾಣುತ್ತೇವೆ ಎಂದು ಹೇಳಿದರು.

ಮಾಜಿ ಶಾಸಕ ಮಹಿಮಾ ಪಟೇಲ್, ಬಸವರಾಜ್ ಪಾಟೀಲ್ ವೀರಾಪುರ ಇತರರು ಮಾತನಾಡಿದರು.

ಈ ಸಂದರ್ಭದಲ್ಲಿ ಸೂರ್ಯೋದಯ ಮಠದ ಶ್ರೀ ಶಿವಕುಮಾರ ಸ್ವಾಮಿ, ರಾಷ್ಟ್ರೀಯ ಸ್ವಾಭಿಮಾನಿ ಆಂದೋಲನದ ಸಂಚಾಲಕ ಬಸವರಾಜ್ ಪಾಟೀಲ್, ಬಿ.ಎಂ. ಕುಮಾರ ಸ್ವಾಮಿ ಶಿವಮೊಗ್ಗ, ಮಾಜಿ ಶಾಸಕ ಮಹಿಮಾ ಪಟೇಲ್, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಜಿಪಂ. ಮಾಜಿ ಅಧ್ಯಕ್ಷ ಎಸ್.ಎಂ. ವೀರೇಶ್, ಮಾಧವನ್ ಜಿ. ಗಿರೀಶ್ ಪಾಟೀಲ್, ಪತ್ರಕರ್ತರ ಸಂಘದ ಅಧ್ಯಕ್ಷೆ ಶಾಂಭವಿ ನಾಗರಾಜ್, ನಿರ್ಮಲ ತುಂಗಭದ್ರಾ ಅಭಿಯಾನದ ತಾಲ್ಲೂಕು ಸಂಚಾಲಕ ವೀರೇಶ್ ಅಜ್ಜಣ್ಣನವರ್, ಸಂಯೋಜಕಿ ಕೆ.ಸಿ. ಶಾಂತಕುಮಾರಿ, ವಿವೇಕ್ ತ್ಯಾಗಿ, ಸುರೇಂದ್ರ ಸಿಂಗ್ ಭೀಷ್ಮ, ಮಾಧವನ್ ಜೀ, ಕರಿಬಸಪ್ಪ ಕಂಚಿಕೇರಿ, ಸಿಂಗಾಡಿ ಹನುಮಂತ್, ಉಪನ್ಯಾಸಕ ಗುರುಬಸವರಾಜ್ ವಾಸಪ್ಪ ಮತ್ತು ಇತರರು ಉಪಸ್ಥಿತರಿದ್ದರು.

ಅರ್ಪಿತ ಪ್ರಾರ್ಥಿಸಿದರು. ವೀರೇಶ್ ಅಜ್ಜಣ್ಣನವರ್ ಸ್ವಾಗತಿಸಿದರು. ಗುರುಬಸವರಾಜ್ ನಿರೂಪಿಸಿದರು. ಕಂಚಿಕೇರಿ ಕರಿಬಸಪ್ಪ ವಂದಿಸಿದರು.

# ಕುಣೆಬೆಳಕೆರೆಯಲ್ಲಿ ಸಂಭ್ರಮದ ದೊಡ್ಡ ಎಡೆ ಜಾತ್ರೆ





ಮಲೇಬೆನ್ನೂರು, ನ.15- ಕುಣೆಬೆಳಕೆರೆ ಗ್ರಾಮದ ಆರಾಧ್ಯ ದೈವ ಶ್ರೀ ಬೀರಲಿಂಗೇಶ್ವರ ಸ್ವಾಮಿಯ ಮರಿಬನ್ನಿ ಅಂಗವಾಗಿ ದೊಡ್ಡ ಎಡೆ ಜಾತ್ರೆಯು ಶುಕ್ರವಾರ ಅಪಾರ ಭಕ್ತರ ಸಮ್ಮುಖದಲ್ಲಿ ಸಂಭ್ರಮದಿಂದ ಜರುಗಿತು.

ದಾವಣಗೆರೆ, ಚಿತ್ರದುರ್ಗ, ವಿಜಯನಗರ, ಹಾವೇರಿ ಮತ್ತು ಶಿವಮೊಗ್ಗ ಜಿಲ್ಲೆಗಳ ಸಾವಿರಾರು ಭಕ್ತರು ಈ ದೊಡ್ಡ ಎಡೆ ಜಾತ್ರೆಯಲ್ಲಿ ಪಾಲ್ಗೊಂಡಿದ್ದರು. ಬೆಳಗ್ಗೆ ದೇವಸ್ಥಾನದಲ್ಲಿ ಮಹಾಮಂಗಳಾರತಿ. ನಂತರ ನಡೆದ ಸಾಮೂಹಿಕ ವಿವಾಹದಲ್ಲಿ 4 ಜೋಡಿ ವಧು-ವರರು ದಾಂಪತ್ಯ ಜೀವನಕ್ಕೆ ಕಾಲಿಟ್ಟರು. ಬಳಿಕ ಈರಗಾರರಿಂದ ಸ್ವಾಮಿಗೆ ದೊಡ್ಡ ಎಡೆ ಪೂಜೆ ಶ್ರದ್ಧಾ-ಭಕ್ತಿಯಿಂದ ನೆರವೇರಿತು. ನಂತರ ಮಹಾ ಅನ್ನ ಸಂತರ್ಪಣೆಗೆ ಚಾಲನೆ ನೀಡಲಾಯಿತು.

# ಬಗರ್‌ಹುಕ್ಕು ಸಾಗುವಳಿದಾರರಿಗೆ ಹಕ್ಕು ಪತ್ರ ನೀಡುವಂತೆ ಆಗ್ರಹ



ಮಲೇಬೆನ್ನೂರು

ಮಲೇಬೆನ್ನೂರು, ನ.15- ಮಲೇಬೆನ್ನೂರು ಹೋಬಳಿಯ ಕೊಮಾರನಹಳ್ಳಿ, ದಿಬ್ಬದಹಳ್ಳಿ, ಕೊಪ್ಪ ಮತ್ತು ಕೊಕ್ಕನೂರು ಸೇರಿದಂತೆ ಇತರೆ ಗ್ರಾಮಗಳಲ್ಲಿ ಬ ಗ ರ್ ಹು ಕ್ಕು ಂ ಸಾಗುವಳಿದಾರರಿಗೆ ಕೂಡಲೇ ಹಕ್ಕುಪತ್ರ ನೀಡುವಂತೆ ಆಗ್ರಹಿಸಿ ಶುಕ್ರವಾರ ಮಲೇಬೆನ್ನೂರಿನಲ್ಲಿ ರೈತ ಸಂಘದಿಂದ ಉಪತಹಶೀಲ್ದಾರ್ ಆರ್. ರವಿ ಅವರ ಮೂಲಕ ಜಿಲ್ಲಾಧಿಕಾರಿಗಳಿಗೆ ಮತ್ತು ಕಂದಾಯ ಸಚಿವರಿಗೆ ಮನವಿ ಪತ್ರ ಸಲ್ಲಿಸಲಾಯಿತು.

ಕಳೆದ 25-30 ವರ್ಷಗಳಿಂದ ನೂರಾರು ರೈತರು ಸರ್ಕಾರಿ ಗೋಮಾಳ ಜಮೀನಿನಲ್ಲಿ ಉಳುಮೆ ಮಾಡಿಕೊಂಡು ಜೀವನ ನಡೆಸುತ್ತಿದ್ದು, ಈ ಹಿಂದಿನ ಸರ್ಕಾರದ ಆದೇಶಗಳ ಪ್ರಕಾರ ಉಳುಮೆ ಮಾಡುತ್ತಿರುವ ರೈತರಿಗೆ ಬಗರ್‌ಹುಕ್ಕುಂ ಸಾಗುವಳಿ ಹಕ್ಕು ಪತ್ರ ನೀಡಬೇಕಿತ್ತು. ಆದರೆ, ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಇದುವರೆಗೂ ಸಾಗುವಳಿ ಹಕ್ಕು ಪತ್ರ ನೀಡಿಲ್ಲ. ಈ ಬಗ್ಗೆ ನಾವು ಸಾಕಷ್ಟು ಬಾರಿ ರೈತರೊಂದಿಗೆ ಪ್ರತಿಭಟನೆ ಮಾಡಿ ಮನವಿ ಸಲ್ಲಿಸಿದ್ದರೂ ಯಾವುದೇ ಪ್ರಯೋಜನ ಆಗಿಲ್ಲ ಎಂದು ರೈತ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಬಲ್ಲೂರು ರವಿಕುಮಾರ್ ಮತ್ತು ದಾವಣಗೆರೆ ಕಾರ್ಯದರ್ಶಿ ಕೋಗಳಿ ಮಂಜುನಾಥ್ ದೂರಿದ್ದಾರೆ. ಹಾಲಿವಾಣದ ಎಸ್. ರೇವಣಪ್ಪ, ಫೈಜುಲ್ಲಾ, ದೇವೇಂದ್ರಪ್ಪ, ಆರ್. ಮಂಜುನಾಥ್ ಸೇರಿದಂತೆ ಇನ್ನೂ ಅನೇಕರು ಈ ವೇಳೆ ಹಾಜರಿದ್ದರು.

## ನಗರದಲ್ಲಿ ಇಂದು ಭಗವದ್ಗೀತೆ ಸ್ಪರ್ಧೆ

ಬ್ರಾಹ್ಮಣ ಸಮಾಜ ಸೇವಾ ಸಂಘದ ಮಹಿಳಾ ವಿಭಾಗದಿಂದ ಗೀತಾ ಜಯಂತಿ ಅಂಗವಾಗಿ ಭಗವದ್ಗೀತೆ ಸ್ಪರ್ಧೆಯನ್ನು ಇಂದು ಬೆಳಿಗ್ಗೆ 12 ಗಂಟೆಗೆ ನಗರದ ಶ್ರೀ ಶಾರದಾಂಬ ದೇವಸ್ಥಾನದಲ್ಲಿ ಏರ್ಪಡಿಸಲಾಗಿದೆ.

**ಸ್ಪರ್ಧೆಯ ವಿವರ:** ಅಧ್ಯಾಯ ಒಂಭತ್ತು, ರಾಜ ವಿದ್ಯಾ ರಾಜಗುಹ್ಯ ಯೋಗಃ ಒಂದರಿಂದ 6 ವರ್ಷದ ಮಕ್ಕಳಿಗೆ ಮೊದಲಿಂದ 5 ಶ್ಲೋಕ, ಏಳರಿಂದ 12 ವರ್ಷದ ಮಕ್ಕಳಿಗೆ ಮೊದಲಿಂದ 10 ಶ್ಲೋಕ, 13 ರಿಂದ 20 ವರ್ಷದವರಿಗೆ ಮೊದಲಿಂದ 15 ಶ್ಲೋಕ. ದಾವಣಗೆರೆ ತಾಲ್ಲೂಕಿನವರು ಮಾತ್ರ ಭಾಗವಹಿಸಲು ಅವಕಾಶವಿದ್ದು, 15 ನಿಮಿಷ ಮುಂಚಿತ ವಾಗಿ ಬಂದು ಹೆಸರು ನೋಂದಾಯಿಸ ಬೇಕು. ವಿವರಗಳಿಗೆ ಶ್ರೀಮತಿ ಚಂದ್ರ ಶೇಖರ ಅಡಿಗ (9964027146), ಶ್ರೀಮತಿ ನಳಿನಿ ಅಚ್ಯುತ್ (988605 8866)ಗೆ ಸಂಪರ್ಕಿಸಬಹುದು.

## ಬಲವಂತವಾಗಿ ಸೇರುವುದು ಅತ್ಯಾಚಾರ

**(1ನೇ ಪುಟದಿಂದ)** ಪರಿಗಣಿಸುವುದಾಗಿ ಹೈಕೋರ್ಟ್ ಹೇಳಿದೆ. 2019ರಲ್ಲಿ ದೂರು ದಾಖಲಿಸಿದ್ದ ಮಹಿಳೆ, ತಾನು ವ್ಯಕ್ತಿಯೋರ್ವನ ಜೊತೆ ಸಂಬಂಧ ಹೊಂದಿದ್ದೆ. ನನ್ನ ವಿರೋಧದ ನಡುವೆಯೂ ಆತ ಅತ್ಯಾಚಾರ ಎಸಗಿ ಗರ್ಭಿಣಿಯಾಗಿ ಮಾಡಿದ್ದ. ನಂತರ ನಾವಿಬ್ಬರೂ ಮದುವೆಯಾಗಿದ್ದವು. ಆದರೆ, ವ್ಯಕ್ತಿ ಭ್ರೂಣಹತ್ಯೆಗೆ ಒತ್ತಾಯಿಸಿದ್ದ. ಪದೇ ಪದೇ ಅತ್ಯಾಚಾರ ಹಾಗೂ ದೈಹಿಕ ಹಲ್ಲೆ ನಡೆಸುವ ಮೂಲಕ ಮದುವೆಯನ್ನು ಅಣಕ ಮಾಡಿದ್ದ ಎಂದು ಹೇಳಿದ್ದರು.

# ಆನಂದ ಪಿಯು ಕಾಲೇಜಿನಲ್ಲಿ ಮಾದಕ ವ್ಯಸನ ಜಾಗೃತಿ



ದಾವಣಗೆರೆ, ನ.15- ಮಕ್ಕಳ ದಿನಾಚರಣೆಯ ಪ್ರಯುಕ್ತ ನೆಹರು ಯುವ ಕೇಂದ್ರ ಹಾಗೂ ಆನಂದ್ ಪದವಿ ಪೂರ್ವ ಕಾಲೇಜು ಇವರ ಸಂಯುಕ್ತಾಶ್ರಯದಲ್ಲಿ ಮಾದಕ ದ್ರವ್ಯ ವಿರೋಧಿ ಜಾಗೃತಿ ಕಾರ್ಯಕ್ರಮವನ್ನು ನಡೆಸಲಾಯಿತು.

ಪೊಲೀಸ್ ಅಧಿಕಾರಿ ಶ್ರೀಮತಿ ಶಿಲ್ಪ ಅವರು ಮುಖ್ಯ ಅತಿಥಿಯಾಗಿ ಪಾಲ್ಗೊಂಡು, ವಿದ್ಯಾರ್ಥಿಗಳಿಗೆ ಮಾದಕ ದ್ರವ್ಯಗಳ ದುಷ್ಪರಿಣಾಮಗಳ ಕುರಿತು ವಿಚಾರಗೋಷ್ಠಿ ನಡೆಸಿದರು. ಮಾದಕ ದ್ರವ್ಯ ಸೇವನೆಯಿಂದ ಬರುವ ಶಾರೀರಿಕ ಮತ್ತು ಮಾನಸಿಕ ಹಾನಿಯನ್ನು ತಡೆಗಟ್ಟಲು ಯುವಕರು ಜಾಗೃತರಾಗಬೇಕೆಂದು ಅವರು ಮನವಿ ಮಾಡಿದರು. ಮಾದಕ ವಸ್ತುಗಳ ವ್ಯಸನಿಗಳಾಗದೇ ಭಾರತದ ಸತ್ಪ್ರಜೆಗಳಾಗಲು ಯುವಜನತೆ ಪಾತ್ರ ಅಗತ್ಯ ಎಂದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲ ಅವಿನಾಶ್ ಜೆ. ನಾಯ್ಕ್ ವಹಿಸಿಕೊಂಡು, ವಿದ್ಯಾರ್ಥಿಗಳಲ್ಲಿ ಮಾದಕ ವ್ಯಸನಕ್ಕೆ ದಾಸರಾಗದೆ ಮಾನಸಿಕ ಶಕ್ತಿ ಮತ್ತು ಜೀವನ ಮೌಲ್ಯಗಳನ್ನು ಉಳಿಸಿಕೊಳ್ಳುವಂತೆ ಪ್ರೇರೇಪಿಸಿದರು.

ಕಾಲೇಜಿನ ಮುಖ್ಯಸ್ಥರಾದ ಆನಂದ್ ಪೋತಿನ ತಮ್ಮ ಭಾಷಣಗಳಲ್ಲಿ ಮಾದಕ ದ್ರವ್ಯಗಳ ಕಾನೂನು ಬಾಹಿರತೆಯ ಬಗ್ಗೆ ಚರ್ಚಿಸಿದರು. ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ, ಅವರ ಪ್ರಶ್ನೆಗಳಿಗೆ ಸ್ಪಷ್ಟೀಕರಣ ನೀಡಿದರು.

ವಿದ್ಯಾರ್ಥಿಗಳ ಬದ್ಧತೆಯನ್ನು ದೃಢಪಡಿಸಲು ನೆಹರು ಯುವ ಕೇಂದ್ರದ ಅಧಿಕಾರಿ ಸಂಜೀವ್ ಅವರು ಪ್ರತಿಜ್ಞಾ ವಿಧಿ ಬೋಧಿಸಿದರು. ಈ ಸಂದರ್ಭದಲ್ಲಿ ನಿರ್ದೇಶಕರಾದ ಗಿರಿಬಾಬು ಕಿರಣ್ ಪೋತಿನ ಹಾಗೂ ಇತರರು ಉಪಸ್ಥಿತರಿದ್ದರು.

## ಎಕ್ಕೆಗೊಂದಿ : ಇಂದು ಗೋಪಾಳ, ಪಡ್ಲಿಗೆ ತುಂಬುವ ಕಾರ್ಯಕ್ರಮ



**ಮಲೇಬೆನ್ನೂರು :** ಎಕ್ಕೆಗೊಂದಿ ಗ್ರಾಮದ ಬಳಿ ಶಿವಮೊಗ್ಗ ರಸ್ತೆಯಲ್ಲಿರುವ ಶ್ರೀ ಸಿಗಂದೂರು ಚೌಡೇಶ್ವರಿ ಮತ್ತು ಶ್ರೀಭೂತನಾಥ ದೇವಸ್ಥಾನದಲ್ಲಿ ಇಂದು ಬೆಳಗ್ಗೆ 11.30ಕ್ಕೆ ಕಾಲಜ್ಞಾನಿ ಡಾ. ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಅವರ ಸಾನ್ನಿಧ್ಯದಲ್ಲಿ ಗೋಪಾಳ ಮತ್ತು ಪಡ್ಲಿಗೆ ತುಂಬಿಸುವ ಕಾರ್ಯಕ್ರಮ ನಡೆಯಲಿದೆ.


ತೀರ್ಥ-ಪ್ರಸಾದ, ಮಹಾಮಂಗಳಾರತಿ ಮತ್ತು ಪೂರ್ಣಾವತಿ ನಂತರ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ ಎಂದು ದೇವಸ್ಥಾನದ ಸಂಸ್ಥಾಪಕ ಸಂತೋಷ್ ತಿಳಿಸಿದ್ದಾರೆ.

## ಮಲ್ಲಿಕಾರ್ಜುನ ಕಡಕೋಳರಿಗೆ ಪ್ರಶಸ್ತಿ

**(1ನೇ ಪುಟದಿಂದ)** ರಂಗಾಯಣದ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಅತೀ ಶೀಘ್ರದಲ್ಲಿ ದಾವಣಗೆರೆಯ ಕುವೆಂಪು ಕನ್ನಡ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ.

ಆಯ್ಕೆ ಸಮಿತಿಯು ಜಿಲ್ಲಾ ಕಸಾಪ ಅಧ್ಯಕ್ಷ ಬಿ.ವಾಮದೇವಪ್ಪ, ಪ್ರಶಸ್ತಿ ದಾನಿಗಳಾದ ಮೋತಿ ಪರಮೇಶ್ವರ ರಾವ್, ಹಿರಿಯ ಸಾಹಿತಿ ಎನ್. ಟಿ. ಎರ್ರಿಸ್ವಾಮಿ, ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಬಿ. ದಿಳ್ಯಪ್ಪ, ಜಿಲ್ಲಾ ಕಸಾಪ ಗೌರವ ಕೋಶಾಧ್ಯಕ್ಷ ಕೆ. ರಾಘವೇಂದ್ರ ನಾಯರಿ ಹಾಗೂ ತಾಲ್ಲೂಕು ಕಸಾಪ ಅಧ್ಯಕ್ಷೆ ಸುಮತಿ ಜಯಪ್ಪ ಅವರುಗಳನ್ನು ಒಳಗೊಂಡಿತ್ತು ಎಂದು ಬಿ.ವಾಮದೇವಪ್ಪ ತಿಳಿಸಿದ್ದಾರೆ.

# ಹರಿಹರ ನಗರ ದೇವತೆ ಜಾತ್ರೆ, ಕಾಣಿಕೆ ಡಬ್ಬಿ ಗಡಿಗೆಗೆ ಚಾಲನೆ




ಹರಿಹರ, ನ.15- ನಗರದಲ್ಲಿ ಬರುವ ಮಾರ್ಚ್ 18 ರಿಂದ 22 ರವರಿಗೆ ನಡೆಯುವ ಊರಮ್ಮದೇವಿ ಉತ್ಸವದ ಅಂಗವಾಗಿ ಶಿಬಾರ ವೃತ್ತದಲ್ಲಿರುವ ಮೂಲ ಗ್ರಾಮದೇವತೆ ದೇವಸ್ಥಾನದಲ್ಲಿ ಅರ್ಚಕರಾದ ನಾರಾಯಣ ಜೋಯಿಸರು ಮತ್ತು ಚಿದಂಬರ ಜೋಯಿಸರ ನೇತೃತ್ವದಲ್ಲಿ ಡಬ್ಬಿ ಗಡಿಗೆಗೆ ವಿಶೇಷ ಪೂಜೆ ನೆರವೇರಿಸಲಾಯಿತು.

ಇದೇ ಸಂದರ್ಭದಲ್ಲಿ ಜಾತ್ರಾ ಮಹೋತ್ಸವದ ಅಧ್ಯಕ್ಷರಾಗಿ ಹಾರ್ನಳ್ಳಿ ಮಂಜುನಾಥ್, ಪ್ರಧಾನ ಕಾರ್ಯದರ್ಶಿ ಗಿರೀಶ್ ಗೌಡ, ಖಜಾಂಚಿ ಕೆಂಚಪ್ಪ ಹಾಗೂ ಸಹ ಕಾರ್ಯದರ್ಶಿಯಾಗಿ ಸಿದ್ದಪ್ಪನವರ ಹೆಸರನ್ನು, ಕಸಬಾ ಗೌಡ್ರು ಲಿಂಗರಾಜ್ ಪಾಟೀಲ್, ಮಾಜೇನಹಳ್ಳಿ ಗೌಡ್ರು ಚನ್ನಬಸಪ್ಪ ಅವರು ಅಧಿಕೃತವಾಗಿ ಘೋಷಣೆ ಮಾಡಿದರು.

ಈ ವೇಳೆ ಡಬ್ಬಿ ಗಡಿಗೆಗೆ ಕಾಣಿಕೆ ಹಾಕುವ ಮೂಲಕ ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕ ಎಸ್. ರಾಮಪ್ಪ ಚಾಲನೆ ನೀಡಿದರು. ನಂತರ ಡಬ್ಬಿ ಗಡಿಗೆ ಮೊದಲು ಮೂರ್ಕಲ್ ವಂಶದವರ ಮನೆಗೆ ತೆರಳಿತು.

ಈ ಸಂದರ್ಭದಲ್ಲಿ ಬಣಕಾರ ಸಿದ್ದಪ್ಪ, ಆಂಜನೇಯ, ಶಾನಭೋಗರ ಗಿರೀಶ್, ಕೆ.ಜಡಿಯಪ್ಪ, ಬಿ. ರೇವಣಸಿದ್ದಪ್ಪ, ನಂದಿಗಾವಿ ಶ್ರೀನಿವಾಸ್, ವೈ.ಎನ್. ಮಹೇಶ್, ಶಂಕರ್ ಖಟಾವ್ಕರ್, ಕೆ.ಬಿ. ರಾಜಶೇಖರ, ಕೆ. ಅಣ್ಣಪ್ಪ, ಸುರೇಶ್ ಚಂದಾಪೂರ್, ಶೇರಾಪುರ ರಾಜಪ್ಪ, ಎಸ್.ಎಂ. ವಸಂತ್, ಮರಿಯೋಜಿರಾವ್, ರೇವಣಸಿದ್ದಪ್ಪ ಇತರರು ಹಾಜರಿದ್ದರು.


# ದಿಗಂಬರ ಮುನಿಗಳಿಗೆ ಜೈನ್ ಸಮಾಜದಿಂದ ಹರಪನಹಳ್ಳಿಯಲ್ಲಿ ಸ್ವಾಗತ



ಹರಪನಹಳ್ಳಿ, ನ.15- ಮಹಾರಾಷ್ಟ್ರದ ನಾಂದಿನಿ ಕ್ಷೇತ್ರದ ಜೈನ್ ದಿಗಂಬರ ಮುನಿ ಸಂಘದ ಆಚಾರ್ಯ ಶ್ರೀ ವಿಶುದ್ದ ಸಾಗರ ಮಹಾರಾಜ ಮುನಿಗಳು ಹಡಗಲಿಯಿಂದ ಹರಪನಹಳ್ಳಿಗೆ ಆಗಮಿಸಿದಾಗ ಜೈನ್ ಸಮಾಜದ ಬಂಧುಗಳು ಸಕಲ ವಾದ್ಯಗಳೊಂದಿಗೆ ಬರಮಾಡಿಕೊಂಡರು.

ಈ ವೇಳೆ ಜೈನ ಸಮಾಜದ ಅಧ್ಯಕ್ಷ ಎಚ್. ಪದ್ಮನಾಭ, ಕಾರ್ಯದರ್ಶಿ ಯು.ಪಿ. ನಾಗರಾಜ, ಖಜಾಂಚಿ ಬಿ. ಪದ್ಮರಾಜ, ಮುಖಂಡರಾದ ಹೆಚ್.ಜಿನದತ್ತ, ಮಹಾವೀರ ಇಜಾರಿ, ಸುಮೇರಿಮಲ್ ಜೈನ್, ಕಾಂತಿಲಾಲ್ ಜೈನ್, ಉತ್ತಮ ಚಂದ್ ಜೈನ್, ಸಗರಿ ಅನಂತರಾಜ್, ಎಂ.ಜೆ. ಜಿನದತ್ತರಾಯ, ಹೆಚ್.ಚಂದ್ರಗೌಡ, ಆರ್. ಪದ್ಮರಾಜ ಜೈನ್ ಹಾಗೂ ಶ್ವೇತಾಂಬರ ಜೈನ್ ಸಮಾಜದ ಬಂಧುಗಳಿದ್ದರು.

## ನಗರದ ಗುಡ್ಡಾಪುರದ ದಾನಮ್ಮ ದೇವಸ್ಥಾನದಲ್ಲಿ ಇಂದಿನಿಂದ ಪ್ರವಚನ



ದೊಡ್ಡಪೇಟೆಯ ಶ್ರೀ ಬಸವೇಶ್ವರ ಮತ್ತು ಶ್ರೀ ಗುಡ್ಡಾಪುರದ ದಾನಮ್ಮ ದೇವಿ ದೇವಸ್ಥಾನದಲ್ಲಿ ಛಟ್ಟಿ ಅಮಾವಾಸ್ಯೆ ಜಾತ್ರಾ ಮಹೋತ್ಸವದ ಪ್ರಯುಕ್ತ ಇಂದಿನಿಂದ ಇದೇ ದಿನಾಂಕ 30ರ ಶನಿವಾರದವರೆಗೆ ಪ್ರತಿದಿನ ಸಂಜೆ 7ಕ್ಕೆ ಶ್ರೀ ಪುಟ್ಟರಾಜ ಗವಾಯಿಗಳವರಿಂದ ರಚಿತವಾದ ಸಂಗೀತ ಮತ್ತು ಸಾಹಿತ್ಯ, ಜಾನಪದಗಳೊಂದಿಗೆ ಶಿವಶರಣೆ ಗುಡ್ಡಾಪುರದ ದಾನಮ್ಮದೇವಿ ಪುರಾಣ ಪ್ರವಚನ ನಡೆಯಲಿದೆ.

ಬರುವ ಡಿಸೆಂಬರ್ 1ರ ಭಾನುವಾರ ಛಟ್ಟಿ ಅಮವಾಸ್ಯೆ ಪ್ರಯುಕ್ತ ಬೆಳಿಗ್ಗೆ ಶ್ರೀ ದೇವಿಗೆ ಅಭಿಷೇಕ, ಪೂಜೆ, ಮುತ್ತೈದೆಯರಿಗೆ ಉಡಿ ತುಂಬುವುದು, ಮದುವೆ ಆಗುವವರಿಗೆ ಕಂಕಣ ದಂಡಿ ಹಾಕಿಸುವ ಕಾರ್ಯಕ್ರಮ ಜರುಗ ಲಿದೆ. ನಂತರ ಮಧ್ಯಾಹ್ನ 12ಕ್ಕೆ ಭಕ್ತಾದಿಗಳಿಗೆ ದಾಸೋಹ ಏರ್ಪಡಿಸಲಾಗಿದೆ. ಅಥಣಿ ವೀರಣ್ಣ ಮತ್ತು ಸಹೋದರರು ದಾಸೋಹ ಸೇವಾರ್ಥಿಗಳಾಗಿದ್ದಾರೆ.

## ಮೋದಿ ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲಿದ್ದಾರೆ : ಅಮಿತ್ ಷಾ

ಯಾವತ್ಮಲ್, ನ. 15 – ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಕ್ಫ್ ಕಾಯ್ದೆಗೆ ತಿದ್ದುಪಡಿ ತರಲಿದ್ದಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಷಾ ಹೇಳಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ವಕ್ಫ್ ಮಂಡಳಿ ಕಾಯ್ದೆಗೆ ಬದಲಾವಣೆ ತರಲು ಬಯಸಿದ್ದಾರೆ.

ಆದರೆ, ವಿರೋಧ ಪಕ್ಷದ ನಾಯಕರಾದ ಉದ್ಧವ್ ಠಾಕ್ರೆ ಹಾಗೂ ಶರದ್ ಪವಾರ್ ಮತ್ತಿತರರು ವಿರೋಧಿಸುತ್ತಿದ್ದಾರೆ ಎಂದು ಷಾ ಹೇಳಿದರು.

ಉದ್ಧವ್ ಅವರು ಎಷ್ಟೇ ಪ್ರತಿಭಟನೆ ಮಾಡಿದರೂ, ಮೋದಿ ಅವರು ವಕ್ಫ್ ಕಾಯ್ದೆಗೆ ತಿದ್ದುಪಡಿ ತಂದೇ ತರುತ್ತಾರೆ ಎಂದು ಅಮಿತ್ ಷಾ ಹೇಳಿದ್ದಾರೆ. ಮಹಾರಾಷ್ಟ್ರದ ಯಾವತ್ಮಲ್ ಜಿಲ್ಲೆಯ ಉಮರ್‌ಖೇಡ್‌ನಲ್ಲಿ ಆಯೋಜಿಸಲಾಗಿದ್ದ ಸಮಾವೇಶದಲ್ಲಿ ಅವರು ಮಾತನಾಡುತ್ತಿದ್ದರು.

## ಮಲೇಬೆನ್ನೂರಿನಲ್ಲಿ ಇಂದು ಪುರಸಭೆ ಸಭೆ

ಪಟ್ಟಣದ ಪುರಸಭೆಯ ಕೌನ್ಸಿಲ್ ಸಭಾಂಗಣದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಪುರಸಭೆ ಪ್ರಭಾರಿ ಅಧ್ಯಕ್ಷೆ ಶ್ರೀಮತಿ ನಪ್ಸಿಯಾ ಬಾನು ಚಮನ್ ಷಾ ಅವರ ಅಧ್ಯಕ್ಷತೆಯಲ್ಲಿ ಪುರಸಭೆಯ ಸಾಮಾನ್ಯ ಸಭೆಯನ್ನು ಕರೆಯಲಾಗಿದೆ ಎಂದು ಮುಖ್ಯಾಧಿಕಾರಿ ಭಜಕ್ಕನವರ್ ತಿಳಿಸಿದ್ದಾರೆ.

## ಬೆಸ್ಕಾಂ ನಿರ್ಲಕ್ಷ್ಯಕ್ಕೆ ಬಲಿಯಾದ ಇಟ್ಟಿಗೆ ಗ್ರಾಮದ ರೈತ ಸಿದ್ದರಾಮಪ್ಪ

ಚನ್ನಗಿರಿ

ಚನ್ನಗಿರಿ, ನ.15- ತಾಲ್ಲೂಕಿನ ಇಟ್ಟಿಗೆ ಗ್ರಾಮದ ಎಂ. ಸಿದ್ದರಾಮಪ್ಪ ಎಂಬ ರೈತ ತೋಟಕ್ಕೆ ತೆರಳಿದಾಗ ವಿದ್ಯುತ್ ತಂತಿ ತಗುಲಿ ಸಾವಿಗೀಡಾಗಿರುವ ಘಟನೆ ಇಂದು ಮಧ್ಯಾಹ್ನ ಸಂಭವಿಸಿದೆ.

ಇಟಗಿ ಗ್ರಾಮದ ಸಿದ್ದರಾಮಪ್ಪ ಎಂಬುವವರು ತನ್ನ ಅಡಿಕೆ ತೋಟಕ್ಕೆ ತೆರಳಿದ್ದು ಸಂಜೆ ಸುಮಾರು 7 ಗಂಟೆಯಾದರೂ ಮನೆಗೆ ಬಾರದೆ, ಮೊಬೈಲ್ ಕರೆಗೂ ಉತ್ತರಿಸದೇ ಇರುವ ಕಾರಣ ಪತ್ನಿ ಶಶಿಕಲಾ ತನ್ನ ಸಂಬಂಧಿಕರೊಂದಿಗೆ ತೋಟಕ್ಕೆ ಹೋಗಿ ನೋಡಿದಾಗ ಪತಿ ವಿದ್ಯುತ್ ತಂತಿ ತಗುಲಿ ಬಿದ್ದಿರುವುದು ಕಂಡುಬಂದಿರುತ್ತದೆ. ಕೂಡಲೇ ಚನ್ನಗಿರಿ ಸರ್ಕಾರಿ ಆಸ್ಪತ್ರೆಗೆ ಕರೆತಂದರೂ ಸಿದ್ದರಾಮಪ್ಪ ಮೃತಪಟ್ಟಿರುವುದಾಗಿ ವೈದ್ಯರು ತಿಳಿಸಿದ್ದಾರೆ.

ಬೆಸ್ಕಾಂನವರ ದಿವ್ಯ ನಿರ್ಲಕ್ಷಕ್ಕೆ ಮನೆಗೆ ಆಸರೆಯಾಗಿದ್ದ ತನ್ನ ಪತಿ ಸಾವಿಗೀಡಾಗಿರುವುದಾಗಿ ಶಶಿಕಲಾ ಆಕ್ರೋಶ ವ್ಯಕ್ತಪಡಿಸಿದ್ದು, ಮುಂದಿನ ಕಾನೂನು ಕ್ರಮಕ್ಕಾಗಿ ಆರಕ್ಷಕ ನಿರೀಕ್ಷಕರು, ಚನ್ನಗಿರಿ ಪೊಲೀಸ್ ಠಾಣೆ ಇವರಲ್ಲಿ ದೂರು ಸಲ್ಲಿಸಿರುತ್ತಾಳೆ.

ಮೃತ ಸಿದ್ದರಾಮಪ್ಪನವರ ಅಂತ್ಯಕ್ರಿಯೆಯನ್ನು ನಾಳೆ ಶನಿವಾರ ಮಧ್ಯಾಹ್ನ 2.30ಕ್ಕೆ ಸ್ವಗ್ರಾಮದಲ್ಲಿ ಮಾಡಲಾಗುವುದು ಎಂದು ಕುಟುಂಬಸ್ಥರು ತಿಳಿಸಿರುತ್ತಾರೆ.

# ಹರಿಹರದಲ್ಲಿ ಬೃಹತ್ ಜಲ ಜಾಗೃತಿ, ಜನ ಜಾಗೃತಿ ಅಭಿಯಾನಕ್ಕೆ ಅದ್ಧೂರಿ ಸ್ವಾಗತ



ಹರಿಹರ, ನ.15- ರಾಷ್ಟ್ರೀಯ ಸ್ವಾಭಿಮಾನ ಆಂದೋಲನ ನವದೆಹಲಿ ಮತ್ತು ಪರ್ಯಾವರಣ ಟ್ರಸ್ಟ್ (ಶಿವಮೊಗ್ಗ) ಇವರ ವತಿಯಿಂದ ಶೃಂಗೇರಿ ಯಿಂದ ಕಿಷ್ಕಿಂಧವರೆಗೆ ನಿರ್ಮಲ ತುಂಗಭದ್ರಾ ಅಭಿಯಾನದ ಬೃಹತ್ ಜಲ ಜಾಗೃತಿ ಮತ್ತು ಜನ ಜಾಗೃತಿ ಪಾದಯಾತ್ರೆ ನಗರಕ್ಕೆ ಆಗಮಿಸಿತು.

ಶ್ರೀ ಹರಿಹರೇಶ್ವರ ದೇವಸ್ಥಾನ ಮುಂಭಾಗದಿಂದ ಆರಂಭಗೊಂಡ ಪಾದಯಾತ್ರೆಗೆ ಪಂಚಮಸಾಲಿ ಗುರುಪೀಠಾಧ್ಯಕ್ಷ ಶ್ರೀ ವಚನಾನಂದ ಮಹಾಸ್ವಾಮಿಗಳು, ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ ಚಾಲನೆ ನೀಡಿದರು.

ಧರ್ಮಸ್ಥಳ ಸಂಘದ ಕಾರ್ಯಕರ್ತರ ಕುಂಭಮೇಳ, ಶಾಲಾ ವಿದ್ಯಾರ್ಥಿಗಳ ಡ್ರಮ್ ಸೆಟ್, ಸಮಾಳ ಸೇರಿದಂತೆ ಇತರೆ ಕಲಾ ಮೇಳಗಳು ಪಾದಯಾತ್ರೆಗೆ ಮೆರಗು ನೀಡಿದವು. ಮೆರವಣಿಗೆಯಲ್ಲಿ ವಿದ್ಯಾರ್ಥಿಗಳು ನದಿಯ ಪರಿಸರವನ್ನು ಸ್ವಚ್ಛತೆಯಿಂದ ನೋಡಿಕೊಳ್ಳುವಂತೆ ಹಾಗೂ ನೀರು ಕಲುಷಿತವಾಗದಂತೆ ಎಚ್ಚರಿಕೆ ವಹಿಸಬೇಕು ಎಂಬ ಘೋಷಣೆ ಕೂಗಿದರು.

ಪಾದಯಾತ್ರೆಯು ಶ್ರೀ ಹರಿಹರೇಶ್ವರ ದೇವಸ್ಥಾನ ಮುಂಭಾಗದಿಂದ ಆರಂಭಗೊಂಡು ದೇವಸ್ಥಾನ ರಸ್ತೆ, ರಾಣಿ ಚೆನ್ನಮ್ಮ ವೃತ್ತ, ಮುಖ್ಯ ರಸ್ತೆ, ಗಾಂಧಿ ವೃತ್ತ ಹಳೆ ಪಿ.ಬಿ. ರಸ್ತೆಯ ಮೂಲಕ ಹಾದು ತುಂಗಭದ್ರಾ ನದಿಯ ದಡದಲ್ಲಿರುವ ತುಂಗಾರತಿ ಕಾರಿಡಾರ್ ಸ್ಥಳಕ್ಕೆ ಅಂತ್ಯಗೊಂಡಿತು.

ಈ ಸಂದರ್ಭದಲ್ಲಿ ಶಾಸಕ ಬಿ.ಪಿ. ಹರೀಶ್, ಮಾಜಿ ಶಾಸಕರಾದ ಎಸ್.ರಾಮಪ್ಪ, ಮಹಿಮಾ ಪಟೇಲ್, ತಪೋವನ ಛೇರ್ಮನ್ ಶಶಿಕುಮಾರ್ ಮೆಹರ್ವಾಡೆ, ಬಿಜೆಪಿ ಮುಖಂಡ ಚಂದ್ರಶೇಖರ್ ಪೂಜಾರ್, ಜಿಪಂ ಮಾಜಿ ಅಧ್ಯಕ್ಷ ಎಸ್.ಎಂ. ವೀರೇಶ್ ಹನಗವಾಡಿ, ಕಾಂಗ್ರೆಸ್ ಮುಖಂಡರಾದ ನಂದಿಗಾವಿ ಶ್ರೀನಿವಾಸ್, ಗುತ್ತೂರು ಹಾಲೇಶ್ ಗೌಡ್ರು, ಸ್ವಾಭಿಮಾನ ಆಂದೋಲನದ ರಾಷ್ಟ್ರೀಯ ಸಂಚಾಲಕ ಬಸವರಾಜ್ ಪಾಟೀಲ್ ವೀರಾಪುರ, ಡಿ.ಜೆ. ಶಿವಾನಂದಪ್ಪ, ಬಿ.ಎಂ. ಕುಮಾರಸ್ವಾಮಿ ಶಿವಮೊಗ್ಗ ತಾಲ್ಲೂಕು ಸಂಚಾಲಕ ವೀರೇಶ್ ಅಜ್ಜಣ್ಣನವರ್, ಕೆ.ಸಿ. ಶಾಂತಕುಮಾರಿ, ಕರಿಬಸಪ್ಪ ಕಂಚಿಕೇರಿ, ಸಂತೋಷ ಗುಡಿಮನಿ, ತುಳಜಪ್ಪ ಭೂತೆ, ಹಿಂಡಸಗಟ್ಟೆ ಲಿಂಗರಾಜ್, ಸಾಕಮ್ಮ, ಕವಿತಾ, ಮಂಜುಳಾ, ಸುಮಂಗಳಾ, ಜೆ.ಜೆ. ಮೆಹೆಂದಳೆ, ಡಾ. ಅಬ್ದುಲ್ ಖಾದರ್, ಎಂ. ಉಮಣ್ಣ, ಗುರುಬಸವರಾಜ್, ಪ್ರಾಂಶುಪಾಲರಾದ ಸುಜಾತ, ವಿರುಪಾಕ್ಷಪ್ಪ ಇತರರು ಹಾಜರಿದ್ದರು.

# ಜಗಳೂರು : ನಿರಾಶ್ರಿತರಿಗೆ ಸೂರು ಕಲ್ಪಿಸಲು ಜಮೀನು ಮಂಜೂರು



ಜಗಳೂರು, ನ.15- ತಾಲ್ಲೂಕಿನ ಹಿರೇಮಲ್ಲನಹೊಳೆ ಗ್ರಾಮದ ಕೆರೆ ಅಂಗಳದಲ್ಲಿ ಸೂರು ಕಳೆದುಕೊಂಡ ನಿರಾಶ್ರಿತರಿಗೆ ಶಾಶ್ವತ ಸೂರು ಕಲ್ಪಿಸುವ ಉದ್ದೇಶಕ್ಕಾಗಿ ಕಂದಾಯ ಇಲಾಖೆ ವ್ಯಾಪ್ತಿಯ ಸರ್ವೆ ನಂ.89ರಲ್ಲಿ 2 ಎಕರೆ ಸರ್ಕಾರಿ ಜಮೀನು ಮೀಸಲಿರಿಸಲಾಗಿದೆ ಎಂದು ಶಾಸಕ ಬಿ. ದೇವೇಂದ್ರಪ್ಪ ತಿಳಿಸಿದರು.

ಶುಕ್ರವಾರ ಗ್ರಾಮದಲ್ಲಿ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಆದೇಶ ಪತ್ರ ಹಸ್ತಾಂತರಿಸಿ ಮಾತನಾಡಿದ ಶಾಸಕರು, ಹಿರೇಮಲ್ಲನಹೊಳೆ ಕೆರೆ ಅಂಗಳದಲ್ಲಿ ಕಳೆದ ದಶಕಗಳಿಂದ ಗ್ರಾಮದ ವಸತಿ ರಹಿತ ಬಡ ಕೂಲಿ ಕಾರ್ಮಿಕರು ಕೆರೆ ಅಂಗಳದಲ್ಲಿ ತಮ್ಮ ಅವಶ್ಯಕತೆಗಾಗಿ ಸೂರು ನಿರ್ಮಿಸಿಕೊಂಡಿದ್ದರು ಎಂದು ತಿಳಿಸಿದರು.

ಪ್ರಸಕ್ತ ಸಾಲಿನಲ್ಲಿ ಅತಿವೃಷ್ಟಿಯಿಂದ ಕೆರೆ ಕೋಡಿ ಬಿದ್ದ ಹಿನ್ನೆಲೆ ಪ್ರಕೃತಿ ವಿಕೋಪಕ್ಕೆ 35 ಕುಟುಂಬಗಳು ಬೀದಿಗೆ ಬಿದ್ದಿವೆ. ಹಸುಳೆ ಕಂದಮ್ಮ ನೀರಿನಲ್ಲಿ ಮುಳುಗಿ ಬಲಿಯಾಗಿರುವುದು ದುಃಖ ತಂದಿದ್ದು, ಕಳೆದ ಒಂದೂವರೆ ತಿಂಗಳಿನಿಂದ ತಾತ್ಕಾಲಿಕ ಕಾಳಜಿ ಕೇಂದ್ರ ತೆರೆಯಲಾಗಿದೆ ಎಂದರು.

ಕಂದಾಯ ಸಚಿವ ಕೃಷ್ಣ ಭೈರೇಗೌಡರು ಜಿಲ್ಲಾಡಳಿತ ಸಮೇತ ಗ್ರಾಮಕ್ಕೆ ಭೇಟಿ ನೀಡಿದ ವೇಳೆ ನೀಡಿದ ಶಾಶ್ವತ ಸೂರಿನ ಭರವಸೆಯಂತೆ ಇದೀಗ ಸರ್ಕಾರಿ ಜಮೀನು ಮೀಸಲಿರಿಸಲಾಗಿದೆ ಎಂದು ಹೇಳಿದರು.

ಸರ್ಕಾರದ ವಿವಿಧ ವಸತಿ ಯೋಜನೆಗಳಡಿ ಪ್ರಥಮ ಆದ್ಯತೆ ನೀಡಿ ಪ್ರತಿ ಕುಟುಂಬಕ್ಕೂ ಸೂರು ಕಲ್ಪಿಸಲಾಗುವುದು ಎಂದು ಶಾಸಕರು ಭರವಸೆ ನೀಡಿದರು.

ಕಳೆದ ಆಡಳಿತಾವಧಿಯಲ್ಲಿನ ತಾಲ್ಲೂಕು ಆಡಳಿತವಾಗಲಿ, ಆಡಳಿತದಲ್ಲಿದ್ದ ಜನ ಪ್ರತಿನಿಧಿಗಳಾಗಲಿ ಕೆರೆ ಅಂಗಳದಲ್ಲಿ ವಾಸಿಸುತ್ತಿದ್ದ ವಸತಿ ರಹಿತರಿಗೆ ಸರ್ಕಾರಿ ಜಮೀನು ಗುರುತಿಸಿ ವಸತಿ ಯೋಜನೆಯಡಿ ಸೂರು ಕಲ್ಪಿಸಿ, ಸ್ಥಳಾಂತರಿಸಿದ್ದರೆ ಈ ಘಟನೆ ಆಗುತ್ತಿರಲಿಲ್ಲ ಎಂದು ದೂರಿದರು.

ತಹಶೀಲ್ದಾರ್ ಸೈಯದ್ ಕಲೀಂ ಉಲ್ಲಾ ಮಾತನಾಡಿ, 2 ಎಕರೆ ಸರ್ಕಾರಿ ಜಮೀನನ್ನು ಗುರುತಿಸಿ ನಿರಾಶ್ರಿತರ ನಿವೇಶನಕ್ಕೆ ನ.11 ರಂದು ಪ್ರಸ್ತಾವನೆ ಸಲ್ಲಿಸಲಾಗಿತ್ತು. ಶಾಸಕರ ಹಾಗೂ ಜಿಲ್ಲಾಡಳಿತದ ಕಾಳಜಿಯಿಂದ ಒಂದೇ ದಿನದಲ್ಲಿ ಆದೇಶ ಮಂಜೂರಾತಿ ಪತ್ರ ಸಿಕ್ಕಿದೆ ಎಂದು ಹೇಳಿದರು. ಇಂದು ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಆರ್‌ಟಿಸಿ ಹಸ್ತಾಂತರಗೊಳಿಸಲಾಗಿದೆ. ವಸತಿ ಯೋಜನೆಯಡಿ ಶೀಘ್ರವೇ ವಸತಿಗಾಗಿ ಮನೆ ನಿರ್ಮಿಸಲಾಗುವುದು ಎಂದು ಮಾಹಿತಿ ನೀಡಿದರು.

ಈ ವೇಳೆ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಷಂಷೀರ್ ಅಹಮ್ಮದ್, ಗ್ರಾ.ಪಂ ಅಧ್ಯಕ್ಷ ಶ್ರೀನಿವಾಸ್, ಮುಖಂಡರಾದ ಬಿ.ಮಹೇಶ್ವರಪ್ಪ, ತಿಪ್ಪೇಸ್ವಾಮಿ, ಮಂಜುನಾಥ್, ಮಾರುತಿ, ಗಿಡ್ಡನಕಟ್ಟೆ ಕಾಂತರಾಜ್ ಮತ್ತಿತರರಿದ್ದರು.

## ತರಳಬಾಳು ಶ್ರೀಗಳಿಂದ ಬ್ಯಾಡಗಿಯಲ್ಲಿ ಇಂದು ಬಾಗಿನ ಅರ್ಪಣೆ

ಸಿರಿಗೆರೆಯ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಬ್ಯಾಡಗಿ ತಾಲ್ಲೂಕಿನ ಆಣೂರು, ಕೊಲ್ಲಾಪೂರ, ಶಿಡೇನೂರ, ಕೆರವಡಿ, ಹೆಡಿಗ್ಗೊಂಡ, ಹಿರೇನಂದಿಹಳ್ಳಿ ಮತ್ತು ಮಾಸಣಗಿ ಗ್ರಾಮಗಳ ಕೆರೆಗಳಿಗೆ ಇಂದು ಬೆಳಿಗ್ಗೆ 11.30 ಕ್ಕೆ ಬಾಗಿನ ಅರ್ಪಿಸಲಿದ್ದಾರೆ. ಸಂಜೆ 4.30ಕ್ಕೆ ಹಸಿರು ಸೇನೆ ತಾಲ್ಲೂಕು ಘಟಕ ಮಾಸಣಗಿ ಗ್ರಾಮದಲ್ಲಿ ಏರ್ಪಡಿಸಿರುವ ಧರ್ಮ ಸಭೆಯಲ್ಲಿ ಜಗದ್ಗುರುಗಳು ಹಾಗೂ ಶಾಸಕ ಬಸವ ರಾಜ ಶಿವಣ್ಣನವರ, ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಶಿವನಗೌಡ ಪಾಟೀಲ, ಮಾಜಿ ಶಾಸಕ ಸುರೇಶ ಪಾಟೀಲ ಇನ್ನಿತರೆ ಮುಖಂಡರು ಪಾಲ್ಗೊಳ್ಳುವರು.

## ಅಪಾಯಕಾರಿ ರೀಲ್ ಮಾಡುವವರ ವಿರುದ್ಧ ಎಫ್.ಐ.ಆರ್.

ನವದೆಹಲಿ, ನ. 15 – ರೈಲ್ವೆ ಕಾರ್ಯನಿರ್ವಹಣೆಗೆ ಅಪಾಯ ತರುವ ಇಲ್ಲವೇ ಪ್ರಯಾಣಿಕರಿಗೆ ಕಿರಿಕಿರಿ ಮಾಡುವ ರೀತಿ ರೀಲ್ಸ್ ಮಾಡುವವರ ವಿರುದ್ಧ ಎಫ್.ಐ.ಆರ್. ದಾಖಲಿಸುವಂತೆ ರೈಲ್ವೆ ಮಂಡಳಿಯು ಎಲ್ಲಾ ವಲಯಗಳಿಗೆ ತಿಳಿಸಿದೆ. ಇತ್ತೀಚಿನ ದಿನಗಳಲ್ಲಿ ಕೆಲ ಯುವಕರು ಅಪಾಯಕಾರಿ ಸ್ಟಂಟ್ ನಡೆಸುತ್ತಾ ರೀಲ್ ಮಾಡುತ್ತಿದ್ದ ವಿಡಿಯೋಗಳು ವೈರಲ್ ಆಗಿದ್ದವು. ಇಂತಹ ಕೃತ್ಯಗಳಿಂದ ಅವರ ಜೀವಕ್ಕಷ್ಟೇ ಅಲ್ಲದೇ, ರೈಲಿನಲ್ಲಿ ಪ್ರಯಾಣ ಮಾಡುವ ನೂರಾರು ಜನರ ಜೀವಕ್ಕೆ ಅಪಾಯವಿದೆ ಎಂದು ರೈಲ್ವೆಯ ಹಿರಿಯ ಅಧಿಕಾರಿಯೊಬ್ಬರು ಹೇಳಿದ್ದಾರೆ.

# ವೃತ್ತಿ ರಂಗಭೂಮಿ ದಿನ ಆಚರಿಸಲು ಒತ್ತಾಯ

### ರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮದಲ್ಲಿ ಮಲ್ಲಿಕಾರ್ಜುನ ಕಡಕೋಳ ಸರ್ಕಾರಕ್ಕೆ ಒತ್ತಾಯ



ದಾವಣಗೆರೆ, ನ.15- ಸರ್ಕಾರವು ನವೆಂಬರ್ 14ರಂದು ವೃತ್ತಿ ರಂಗಭೂಮಿ ದಿನ ಆಚರಿಸಲು ಮುಂದಾಗಬೇಕು ಎಂದು ವೃತ್ತಿ ರಂಗ ಭೂಮಿಯ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಸರ್ಕಾರಕ್ಕೆ ಒತ್ತಾಯಿಸಿದರು.

ವೃತ್ತಿ ರಂಗಭೂಮಿ ರಂಗಾಯಣ, ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಮತ್ತು ಸಕ್ಕರಿ ಬಾಳಾಚಾರ್ಯ ಟ್ರಸ್ಟಿನ ಸಂಯುಕ್ತಾಶ್ರಯದಲ್ಲಿ ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಕನ್ನಡ ವೃತ್ತಿ ರಂಗಭೂಮಿ ಮತ್ತು ರಾಜ್ಯೋತ್ಸವ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕನ್ನಡ ನಾಡಿನಲ್ಲಿ 1871ರ ನವೆಂಬರ್ 14ರಂದು ಮೊದಲ ಬಾರಿಗೆ ನಾಟಕ ಮೇಳ ಉದಯವಾಗಿತ್ತು, ಆ ವಿಶೇಷ ದಿನದ ಸ್ಮರಣಾರ್ಥವಾಗಿ ವೃತ್ತಿ ರಂಗಭೂಮಿ ದಿನಾಚರಣೆಗೆ ಸರ್ಕಾರ ಅಧಿಕೃತ ಘೋಷಣೆ ಹೊರಡಿಸಬೇಕು ಎಂದು ಆಗ್ರಹಿಸಿದರು.

ಮರಾಠಿ ನಾಟಕಗಳು ಹೆಚ್ಚು ಪ್ರಚಲಿತವಾಗಿದ್ದನ್ನು ಕಂಡು ಕನ್ನಡಿಗರಲ್ಲಿ ಕನ್ನಡ ಪ್ರಜ್ಞೆ ಜಾಗೃತಗೊಳಿಸುವ ನಿಟ್ಟಿನಲ್ಲಿ ಕನ್ನಡದಲ್ಲಿ 70ಕ್ಕೂ ಅಧಿಕ ನಾಟಕಗಳನ್ನು ಸಿದ್ಧಪಡಿಸಿ, ಪ್ರದರ್ಶಿಸುವ ಜತೆಗೆ ನಾಟಕ ಕಂಪನಿ ಕಟ್ಟುವಲ್ಲಿ ಸಕ್ಕರಿ ಬಾಳಾಚಾರ್ಯರು (ಶಾಂತ ಕವಿ) ಮೊದಲಿಗರು ಎಂದರು.

ಕನ್ನಡ ಸಾಹಿತ್ಯ ಕ್ಷೇತ್ರಕ್ಕೂ ಸೇವೆಯನ್ನು ಅರ್ಪಿಸಿದ ಶಾಂತ ಕವಿಗಳು, ಕನ್ನಡಿಗರಲ್ಲಿರುವ ಅಭಿಮಾನ ಶೂನ್ಯತೆಯನ್ನು ಬಡಿದೆಬ್ಬಿಸುವ ಕಾರ್ಯ ಮಾಡಿದ್ದರು ಎಂದು ಅವರನ್ನು ಸ್ಮರಿಸಿದರು.

ವಚನ ಚಳುವಳಿ ಕಾಲದಲ್ಲೇ ವೃತ್ತಿ ರಂಗಭೂಮಿ ಜನಿಸಿದೆ. ಈ ವಚನ ಚಳುವಳಿಯಲ್ಲಿ ಬಹುರೂಪಿ ಚೌಡಯ್ಯ ಎಂಬ ವ್ಯಕ್ತಿಯ ಪರಿಚಯವಾಗುತ್ತದೆ. ಅವರೇ ಪ್ರಪಂಚದ ಮೊಟ್ಟ ಮೊದಲ ವೃತ್ತಿ ರಂಗಭೂಮಿ ಕರ್ಮಿಯಾಗಿದ್ದಾರೆ ಎಂದು ಹೇಳಿದರು.

ಅವಿಭಜಿತ ವಿಜಯಪುರ ಜಿಲ್ಲೆಯು ಕನ್ನಡ ವೃತ್ತಿ ರಂಗಭೂಮಿಗೆ ಬಹುದೊಡ್ಡ ಕೊಡುಗೆ ನೀಡಿದೆ ಎಂದ ಅವರು, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವೃತ್ತಿ ರಂಗಭೂಮಿ ಬಗ್ಗೆ ಹೆಚ್ಚು ಉಲ್ಲೇಖ ದಾಖಲಿಸದೇ ರಂಗಾಯಣಕ್ಕೆ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿದರು.

ಸಾಹಿತ್ಯ ಚರಿತ್ರೆ ಬರೆದಿರುವ ವರ್ಗದ ಬಗ್ಗೆ ನನಗೆ ತುಂಬಾ ಬೇಸರವಿದೆ. ನಾನು ಚರಿತ್ರೆ ಓದಿದ ವಿದ್ವಾಂಸನಲ್ಲ. ಆದರೆ ಸಾಹಿತ್ಯ ಚರಿತ್ರೆಯಲ್ಲಿ ಈ ರೀತಿಯ ಅಪಸವ್ಯಗಳನ್ನು ಬಹಳವಾಗಿ ದಾಖಲಿಸಲಾಗಿದೆ. ಸಾಹಿತ್ಯ ಚರಿತ್ರೆಯಲ್ಲಿ ವೃತ್ತಿ ರಂಗಭೂಮಿ ಮತ್ತು ತತ್ವಪದಗಳಿಗೆ ಅನೂಚಾನವಾಗಿ ಅನ್ಯಾಯ ಮಾಡಲಾಗಿದೆ ಎಂದು ಆರೋಪಿಸಿದರು.

> ದಾವಣಗೆರೆ ಜನತೆ ರಂಗಭೂಮಿಯ ಕಟ್ಟಾ ಸಹೃದಯಿಗಳಾಗಿದ್ದರು. ಈ ನಿಟ್ಟಿನಲ್ಲಿ ದಾವಣಗೆರೆ ಹಾಗೂ ವೃತ್ತಿ ರಂಗಭೂಮಿಗೆ ಶತಮಾನದ ನಂಟಿದೆ.
>
> **- ಮಲ್ಲಿಕಾರ್ಜುನ ಕಡಕೋಳ,**
> ವೃತ್ತಿ ರಂಗಭೂಮಿ ನಿರ್ದೇಶಕ

ಕಾಲೇಜಿನ ಸಾಂಸ್ಕೃತಿಕ ಸಮಿತಿ ಸಂಚಾಲಕ ತೊಪ್ಪಲ ಕೆ. ಮಲ್ಲಿಕಾರ್ಜುನ ಗೌಡ ಪ್ರಾಸ್ತಾವಿಕ ಮಾತನಾಡಿ, ವೃತ್ತಿ ರಂಗಭೂಮಿ ಸಿನಿಮಾ ಜಗತ್ತಿಗೆ ಜನನ ನೀಡಿದೆ. ಡಾ. ರಾಜಕುಮಾರ್ ಅಂತಹ ನಟರೂ ವೃತ್ತಿ ರಂಗಭೂಮಿಯಿಂದಲೇ ಬಂದಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಚಾರ್ಯ ಡಾ.ಎಂ. ಮಂಜಣ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ದೈಹಿಕ ಶಿಕ್ಷಣ ನಿರ್ದೇಶಕಿ ಡಾ. ಶೃತಿ ರಾಜ್, ಐಕ್ಯೂಎಸಿ ಸಂಚಾಲಕ ಡಾ.ಎಂ.ಪಿ. ಭೀಮಪ್ಪ, ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥೆ ಡಾ.ಜಿ. ಕಾವ್ಯಶ್ರೀ, ಡಾ.ಎನ್.ಎಂ. ಅಶೋಕ್ ಕುಮಾರ್, ಗೋವಿಂದ ಸ್ವಾಮಿ, ಡಾ. ಭಾರತಿ ಮತ್ತಿತರರಿದ್ದರು.

# ನಗರದಲ್ಲಿ ಇಂದು ವಿಕರವೇಯಿಂದ ಕರ್ನಾಟಕ ರಾಜ್ಯೋತ್ಸವ ಆಚರಣೆ

ದಾವಣಗೆರೆ, ನ. 15- ವಿಶ್ವ ಕರ್ನಾಟಕ ರಕ್ಷಣಾ ವೇದಿಕೆ ವತಿಯಿಂದ ನಾಳೆ ದಿನಾಂಕ 16 ರ ಸನಿವಾರ ಸಂಜೆ 6 ಗಂಟೆಗೆ ನಗರದ ಶಿವಯೋಗಾಶ್ರಮದ ಆವರಣದಲ್ಲಿ 66 ನೇ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಗುವುದು ಎಂದು ವೇದಿಕೆ ರಾಜ್ಯ ಸಂಘಟನಾ ಕಾರ್ಯದರ್ಶಿ ಸಂತೋಷ್ ದೊಡ್ಡಮನಿ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶ್ರೀ ಬಸವಪ್ರಭು ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದು, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಕಾರ್ಯಕ್ರಮ ಉದ್ಘಾಟಿಸುವರು. ಶಾಸಕ ಡಾ. ಶಾಮನೂರು ಶಿವಶಂಕರಪ್ಪ, ಸಂಸದೆ ಡಾ. ಪ್ರಭಾ ಮಲ್ಲಿಕಾರ್ಜುನ್ ಭುವನೇಶ್ವರಿ ಭಾವಚಿತ್ರ ಅನಾವರಣ ಮಾಡಲಿದ್ದಾರೆ.

ವೇದಿಕೆ ರಾಜ್ಯಾಧ್ಯಕ್ಷ ಕೆ.ಜಿ. ಯಲ್ಲಪ್ಪ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಶಾಸಕರಾದ ಬಿ. ದೇವೇಂದ್ರಪ್ಪ, ಕೆ.ಎಸ್. ಬಸವಂತಪ್ಪ, ಜಿಲ್ಲಾಧಿಕಾರಿ ಜಿ.ಎನ್. ಗಂಗಾಧರಸ್ವಾಮಿ, ಎಸ್ಪಿ ಉಮಾ ಪ್ರಶಾಂತ್, ಮೇಯರ್ ಕೆ. ಚಮನ್ ಸಾಬ್, ಉಪ ಮೇಯರ್ ಸೋಗಿ ಶಾಂತಕುಮಾರ್, ಮಾಜಿ ಶಾಸಕ ಎಸ್.ವಿ. ರಾಮಚಂದ್ರ, ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ನಾಗರಾಜ್ ಎಸ್.ಬಡದಾಳ್, ಬಿಜೆಪಿ ಮುಖಂಡ ಲೋಕಿಕೆರೆ ನಾಗರಾಜ್ ಮುಂತಾದವರು ಭಾಗವಹಿಸಲಿದ್ದಾರೆಂದರು.

ಇದೇ ವೇಳೆ ವಿವಿದ ಕ್ಷೇತ್ರಗಳಲ್ಲಿ ಸಾಧನೆಗೈದ ಹಿರಿಯ ಪತ್ರಕರ್ತ ರಮೇಶ ಜಹಗೀರ್‌ದಾರ್, ಶಿವರಾಜ್ ಈಳಿಗೇರ್, ಜೆ.ಎಸ್. ವೀರೇಶ್ ಸೇರಿದಂತೆ ಅನೇಕರನ್ನು ಗೌರವಿಸಲಾಗುವುದು. ವೇದಿಕೆ ಕಾರ್ಯಕ್ರಮದ ನಂತರ ಭಾರತಿ ವಾದ್ಯವೃಂದದವರಿಂದ ರಸಮಂಜರಿ ಹಾಗೂ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಲಿವೆ ಎಂದು ಮಾಹಿತಿ ನೀಡಿದರು.

ಪತ್ರಿಕಾಗೋಷ್ಠಿಯಲ್ಲಿ ವೇದಿಕೆ ಪದಾಧಿಕಾರಿಗಳಾದ ಅಮ್ಜದ್ ಅಲಿ, ದಯಾನಂದ್, ಬಿ. ಬಾಬುರಾವ್, ಸಿದ್ದೇಶ್, ಮಹಾಲಿಂಗಪ್ಪ, ಎಂ. ರವಿ, ಮಂಜುನಾಥ್, ಗದಿಗೆಪ್ಪ, ಚಂದ್ರು ಉಪಸ್ಥಿತರಿದ್ದರು.

# ವೈವಾಹಿಕ ವಿವಾದದಲ್ಲಿ ನೆಹರು ತರಿಸಿದ್ದ ರೋಲ್ಸ್ ರಾಯ್ಸ್

ನವದೆಹಲಿ, ನ. 15 – ಜವಾಹರಲಾಲ್ ನೆಹರು ಅವರು ಪ್ರಧಾನ ಮಂತ್ರಿಯಾಗಿದ್ದಾಗ ಬರೋಡಾದ ಆಗಿನ ಮಹಾರಾಣಿಗಾಗಿ ತರಿಸಿದ್ದ ರೋಲ್ಸ್ ರಾಯ್ಸ್ ಕಾರು ಈಗ ವೈವಾಹಿಕ ವಿವಾದದಲ್ಲಿ ಸಿಲುಕಿದೆ. ಕರಕೌಶಲ್ಯದಿಂದ ರೂಪಿಸಲಾಗಿದ್ದ ಈ ಕಾರು, ತನ್ನದೇ ಆದ ಹೆಗ್ಗಳಿಕೆ ಹೊಂದಿದ್ದು ಪ್ರಸಕ್ತ ಮಾರುಕಟ್ಟೆ ಮೌಲ್ಯ 2.5 ಕೋಟಿ ರೂ. ಆಗಿದೆ.



(ಸಾಂದರ್ಭಿಕ ಚಿತ್ರ)

ಪ್ರಸಕ್ತ ಮಧ್ಯ ಪ್ರದೇಶದ ಗ್ವಾಲಿಯರ್ ನಿವಾಸಿಯಾದ ಉನ್ನತ ಪ್ರತಿಷ್ಠಿತ ಕುಟುಂಬಕ್ಕೆ ಸೇರಿದವರು ಎನ್ನಲಾಗುತ್ತಿರುವ ಮಹಿಳೆ ಹಾಗೂ ಸೈನ್ಯದ ಹಿನ್ನೆಲೆ ಹೊಂದಿರುವ ಪತ್ನಿ ನಡುವೆ ಈಗ ರೋಲ್ಸ್ ರಾಯ್ಸ್‌ಗಾಗಿ ತಗಾದೆ ಉಂಟಾಗಿದೆ.

ಹೆಚ್.ಜೆ. ಮುಲ್ಲಿನರ್ ಅಂಡ್ ಕಂಪನಿಯು ಬರೋಡಾದ ಮಹಾರಾಣಿ ಚಿಮ್ನ ಬಾಯಿ ಸಾಹಿಬ್ ಗಾಯಕ್ವಾಡ್ ಅವರಿಗಾಗಿ ರೂಪಿಸಿದ್ದ ರೋಲ್ಸ್ ರಾಯ್ಸ್ ಕಾರು ತನಗೆ ವರದಕ್ಷಿಣೆಯಾಗಿ ನೀಡಬೇಕು ಎಂದು ಪತಿ ಒತ್ತಡ ಹೇರುತ್ತಿರುವುದಾಗಿ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಆದರೆ, ಪತಿ ಆರೋಪ ತಳ್ಳಿ ಹಾಕಿದ್ದಾರೆ. ಪತಿ ವಿರುದ್ಧ ಮಹಿಳೆ ದಾಖಲಿಸಿದ್ದ ವರದಕ್ಷಿಣೆ ಹಾಗೂ ಹಿಂಸಾಚಾರ ಪ್ರಕರಣವನ್ನು ಮಧ್ಯ ಪ್ರದೇಶ ಹೈಕೋರ್ಟ್ ತಳ್ಳಿ ಹಾಕಿತ್ತು. ನಂತರ ಪತ್ನಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

ಈ ಬಗ್ಗೆ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ ಹಾಗೂ ಉಜ್ಜಲ್ ಭುಯಾನ್ ಅವರನ್ನು ಒಳಗೊಂಡ ಪೀಠ, ಉಭಯರು ಸಂಧಾನದ ಮೂಲಕ ಇತ್ಯರ್ಥಕ್ಕೆ ಬರುವಂತೆ ತಿಳಿಸಿದೆ. ಅಲ್ಲದೇ, ಹಿರಿಯ ವಕೀಲ ಆರ್. ಬಸಂತ್ ಅವರನ್ನು ಸಂಧಾನಕಾರರಾಗಿ ನೇಮಿಸಿದೆ.

ರೋಲ್ಸ್ ರಾಯ್ಸ್ ಕಾರು ಹಾಗೂ ಮುಂಬೈನ ಒಂದು ಫ್ಲಾಟ್ ನೀಡುವಂತೆ ಒತ್ತಡ ಹೇರಲಾಗಿತ್ತು. ಇದಕ್ಕೆ ಒಪ್ಪದೇ ಇದ್ದಾಗ ನನ್ನ ಮೇಲೆ ಕ್ಷುಲ್ಲಕ ಆರೋಪಗಳನ್ನು ಮಾಡಲಾಗುತ್ತಿದೆ ಎಂದು ಪತ್ನಿ ದೂರಿದ್ದಾರೆ. ಈ ನಡುವೆ, ಪತಿ ತನ್ನ ಹೆಂಡತಿ, ಪೋಷಕರು ಹಾಗೂ ಸಂಬಂಧಿಗಳ ವಿರುದ್ಧ ವಂಚನೆ ಹಾಗೂ ಪೋರ್ಜರಿ ಪ್ರಕರಣ ದಾಖಲಿಸಿದ್ದಾರೆ. ಪತ್ನಿ ದಾಖಲಿಸಿದ್ದ ಎಫ್.ಐ.ಆರ್. ಅನ್ನು ಹೈಕೋರ್ಟ್ ತಳ್ಳಿ ಹಾಕಿತ್ತು.

# ದಾವಣಗೆರೆ ಬೈಸಿಕಲ್ ಕ್ಲಬ್ ವತಿಯಿಂದ ಸಿಗಂದೂರಿಗೆ ನಾಳೆ ಸೈಕ್ಲಿಂಗ್ ಯಾತ್ರೆ

ದಾವಣಗೆರೆ, ನ.15- ದಾವಣಗೆರೆ ಬೈಸಿಕಲ್ ಕ್ಲಬ್ ವತಿಯಿಂದ ಸಿಗಂದೂರಿಗೆ ಸೈಕ್ಲಿಂಗ್ ಯಾತ್ರೆಯನ್ನು ನಾಡಿದ್ದು ದಿನಾಂಕ 17 ರ ಭಾನುವಾರ ಬೆಳಿಗ್ಗೆ 3 ಗಂಟೆಗೆ ಸಂಗೊಳ್ಳಿ ರಾಯಣ್ಣ ವೃತ್ತದಿಂದ ಪ್ರಾರಂಭಿಸಲು ಉದ್ದೇಶಿಸಲಾಗಿರುತ್ತದೆ.

ಸುಮಾರು 170 ಕಿ.ಮೀ. ಪ್ರಯಾಣವನ್ನು ಸೈಕ್ಲಿಂಗ್ ಮೂಲಕ ಕ್ರಮಿಸಿ ಶ್ರೀ ಸಿಗಂದೂರೇಶ್ವರಿ ದೇವಿ ದರ್ಶನ ಪಡೆದು ಹಿಂತಿರುಗಲಿದ್ದಾರೆ ಎಂದು ದಾವಣಗೆರೆ ಬೈಸಿಕಲ್ ಕ್ಲಬ್‌ನ ಅಧ್ಯಕ್ಷ ರಾಜೇಂದ್ರ ಪ್ರಸಾದ್ ತಿಳಿಸಿದ್ದಾರೆ.

ಸೈಕ್ಲಿಂಗ್ ಯಾತ್ರೆಯಲ್ಲಿ ದಾವಣಗೆರೆ ಬೈಸಿಕಲ್ ಕ್ಲಬ್‌ನ ಕಾರ್ಯದರ್ಶಿ ಕೆ.ಎಸ್. ಮಹೇಶ್, ಡಾ. ಸುರೇಶ್, ಡಾ. ನವೀನ್, ಡಾ. ಪಾಟೀಲ್, ಡಾ. ಮಾಲತೇಶ್, ಡಾ. ಸುನಿಲ್ ಬ್ಯಾಡಗಿ, ದೇವರಾಜ್, ಪ್ರಸಾದ್, ಅರ್ಚಿಸ್ ನಾಗರಾಜ್, ಹರೀಶ್ ಕೆ.ಆರ್. ಮತ್ತು ಕಿರಣ್ ಬಾಳೆಹೊಲದ ಸೇರಿದಂತೆ ಇನ್ನೂ ಮುಂತಾದ ಒಟ್ಟು 15 ಸೈಕ್ಲಿಸ್ಟ್‌ಗಳು ಪ್ರಯಾಣಿಸಲಿದ್ದಾರೆ.

ದಾವಣಗೆರೆ-ಸಿಗಂದೂರೇಶ್ವರಿ ಸೈಕಲ್ ಯಾತ್ರೆ ಯಶಸ್ವಿಯಾಗಲೆಂದು ದಾವಣಗೆರೆ ಬೈಸಿಕಲ್ ಕ್ಲಬ್‌ನ ನಿರ್ದೇಶಕರು, ಸದಸ್ಯರು ಮತ್ತು ಹಿಮಾಲಯನ್ ಅಡ್ವೆಂಚರ್ ನೇಚರ್ ಅಕಾಡೆಮಿ ಕೊಟ್ರೇಶ್ ಮತ್ತು ಕರುನಾಡ ಸಮರ ಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ಸುರೇಶ್ ಐಗೂರ್, ಕರುನಾಡ ಸಮರ ಸೇನೆ ರಾಜ್ಯ ವರ್ತಕರ ಘಟಕದ ಅಧ್ಯಕ್ಷರು ಶುಭ ಹಾರೈಸಿದಾರೆ.

ಯಾತ್ರಾ ಮಾರ್ಗ: ದಾವಣಗೆರೆ-ಹರಿಹರ-ಇಟಗಿ-ಹಲಗೇರಿ-ಕೋಡ-ಹಿರೇಕೆರೂರು -ಶಿರಾಳಕೊಪ್ಪ-ತಡಗಣಿ ಕ್ರಾಸ್-ಇಂಡುವಳ್ಳಿ-ಉಳವಿ-ಸಾಗರ-ಇಕ್ಕೇರಿ-ಆವಿನ ಹಳ್ಳಿ-ಹುಲಿ ದೇವರ ಬನ-ಹೊಳೆಬಾಗಿಲು-ಸಿಗಂದೂರು.



## ನಗರದ ಆರ್.ಎಲ್. ಕಾನೂನು ಕಾಲೇಜಿನಲ್ಲಿ ಇಂದು ರಾಜ್ಯೋತ್ಸವ

ಆರ್.ಎಲ್. ಕಾನೂನು ಕಾಲೇಜ್ ವತಿಯಿಂದ ಎ.ವಿ.ಕೆ. ಕಾಲೇಜು ಸಭಾಂಗಣದಲ್ಲಿ ಇಂದು ಬೆಳಗ್ಗೆ 11 ಗಂಟೆಗೆ ಕನ್ನಡ ರಾಜ್ಯೋತ್ಸವ ದಿನಾಚರಣೆ ನಡೆಯಲಿದೆ. ದವನ ಕಾಲೇಜಿನ ಪ್ರಾಚಾರ್ಯ ಪ್ರೊ. ಬಾತಿ ಬಸವರಾಜ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಕಾಲೇಜಿನ ಪ್ರಾಚಾರ್ಯ ಡಾ. ಜಿ.ಎಸ್.ಯತೀಶ್ ಅಧ್ಯಕ್ಷತೆ ವಹಿಸಲಿದ್ದಾರೆ.

ಹಿರಿಯ ಪತ್ರಕರ್ತ ಬಿ.ಎನ್. ಮಲ್ಲೇಶ್, ನಿವೃತ್ತ ಪ್ರಾಧ್ಯಾಪಕ ಎ.ಬಿ. ರಾಮಚಂದ್ರ, ವಕೀಲರ ಸಂಘದ ಜಿಲ್ಲಾದ್ಯಕ್ಷ ಎಲ್.ಹೆಚ್. ಅರುಣ್‌ಕುಮಾರ್, ಸಹಾಯಕ ಪ್ರಾಧ್ಯಾಪಕರಾದ ಬಸವನಗೌಡ ಬಿ.ಪಿ., ವಿದ್ಯಾಧರ ವೇದ ವರ್ಮ ಟಿ., ಡಾ. ಪಂಕಜ ಟಿ.ಸಿ., ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ.

# ರೈಲಿಗೆ ಸಿಲುಕಿದ್ದ ವೃದ್ಧನ ರಕ್ಷಿಸಿದ ರೈಲ್ವೆ ರಕ್ಷಣಾ ದಳ, ಗೃಹ ರಕ್ಷಕ ದಳದ ಸಿಬ್ಬಂದಿ

ದಾವಣಗೆರೆ, ನ.15- ಕಣ್ಣೆದುರಿಗೆ ರೈಲಿನ ಗಾಲಿಗೆ ಸಿಲುಕಿ ಪ್ರಾಣ ಕಳೆದುಕೊಳ್ಳುತ್ತಿದ್ದ ವಯೋವೃದ್ಧನನ್ನು ಹೋಮ್ ಗಾರ್ಡ್ ರಕ್ಷಿಸಿ ಪ್ರಾಣ ಉಳಿಸಿರುವ ಘಟನೆ ಶುಕ್ರವಾರ ಬೆಳಗ್ಗೆ ನಡೆದಿದೆ. ಬೆಂಗಳೂರಿನಿಂದ ಹುಬ್ಬಳ್ಳಿಗೆ ಜನಶತಾಬ್ಧಿ ಎಕ್ಸ್‌ಪ್ರೆಸ್ ರೈಲಿನ ಡಿ-8ರ ಬೋಗಿಯಲ್ಲಿ ಪ್ರಯಾಣಿಸುತ್ತಿದ್ದ ರಾಧಾಕೃಷ್ಣ (64) ಎಂಬುವವರ ಪ್ರಾಣವನ್ನು ಹೋಮ್ ಗಾರ್ಡ್ ಎನ್. ಲಕ್ಷ್ಮಣ್ ನಾಯ್ಕ್ ಅವರು ರಕ್ಷಿಸಿದ ಘಟನೆ ನಡೆದಿದೆ.

ರಾಧಾಕೃಷ್ಣ ಅವರು ರೈಲು ದಾವಣಗೆರೆ ನಿಲ್ದಾಣಕ್ಕೆ ಆಗಮಿಸಿದಾಗ ಬಿಸ್ಕೆಟ್ ಖರೀದಿಸಲು ಕೆಳಗೆ ಇಳಿದು ಹೋಗಿದ್ದಾರೆ. ಅಷ್ಟರಲ್ಲಿ ರೈಲು ಚಲಿಸಲು ಪ್ರಾರಂಭಿಸಿದೆ. ರೈಲು ಚಲಿಸುವುದನ್ನು ನೋಡಿದ ರಾಧಾಕೃಷ್ಣ ಓಡಿ ಬಂದು ಚಲಿಸುವ ರೈಲು ಹತ್ತಲು ಹೋಗಿ ಜಾರಿ ಕೆಳಗೆ ಬಿದ್ದಿದ್ದು, ಇನ್ನೇನು ರೈಲಿನ ಚಕ್ರಕ್ಕೆ ಸಿಲುಕಬೇಕೆನ್ನುವಷ್ಟರಲ್ಲಿ ಎದುರಿಗೆ ನಿಂತಿದ್ದ ಹೋಮ್ ಗಾರ್ಡ್ ಎನ್. ಲಕ್ಷ್ಮಣ್ ನಾಯ್ಕ್ ಕೂಡಲೇ ಕೈಹಿಡಿದು ಎಳೆದಿದ್ದಾರೆ. ಅಷ್ಟರಲ್ಲಿ ಆರ್‌ಪಿಎಫ್ ಮುಖ್ಯ ಪೇದೆ ಅಶೋಕ್ ಓಡಿ ಬಂದು ಗಾಬರಿಗೆ ಒಳಗಾಗಿದ್ದ ವಯೋವೃದ್ಧ ರಾಧಾಕೃಷ್ಣ ಅವರನ್ನು ಸಂತೈಸಿ ಧೈರ್ಯ ತುಂಬಿದ್ದಾರೆ.

ಕೆಳಗೆ ಬಿದ್ದ ಪರಿಣಾಮ ರಾಧಾಕೃಷ್ಣ ಅವರ ಮುಖಕ್ಕೆ ಸಣ್ಣಪುಟ್ಟ ಗಾಯಗಳಾಗಿದ್ದು, ಪ್ರಥಮ ಚಿಕಿತ್ಸೆ ಕೊಡಿಸಿದ್ದಾರೆ. ನಂತರ ಅವರು ಪ್ರಾಣ ಭಯದ ಆಘಾತದಿಂದ ಹೊರ ಬಂದ ಮೇಲೆ ಇನ್ನೊಂದು ರೈಲಿನಲ್ಲಿ ಅವರನ್ನು ಕಳುಹಿಸಿದ್ದಾರೆ.

ಸಮಯ ಪ್ರಜ್ಞೆಯಿಂದ ಜೀವ ಕಳೆದುಕೊಳ್ಳುತ್ತಿದ್ದ ವಯೋವೃದ್ಧನನ್ನು ರಕ್ಷಿಸಿದ ಗೃಹರಕ್ಷಕ ದಳ ಹಾಗೂ ರೈಲ್ವೆ ರಕ್ಷಣಾ ದಳದ ಸಿಬ್ಬಂದಿಗೆ ಸಾರ್ವಜನಿಕರು ಪ್ರಶಂಸೆ ವ್ಯಕ್ತಪಡಿಸಿದ್ದಾರೆ.

# ಕ್ರೀಡೆಯಿಂದ ದೇಹ, ಮನಸ್ಸಿನ ಆರೋಗ್ಯ ವೃದ್ಧಿ

### ಅನ್‌ಮೋಲ್ ಕ್ರೀಡಾಕೂಟದಲ್ಲಿ ಪ್ರಾಂಶುಪಾಲ ಯು. ಕೊಟ್ರೇಶ್



ದಾವಣಗೆರೆ,ನ.15- ಕ್ರೀಡೆಗಳು ನಮ್ಮನ್ನು ಆರೋಗ್ಯಕರವಾಗಿ, ಸಮೃದ್ಧವಾಗಿ ಮತ್ತು ಕ್ರಿಯಾಶೀಲವಾಗಿ ಇರುವಂತೆ ಮಾಡುತ್ತವೆ ಹಾಗಾಗಿ ಆರೋಗ್ಯವಂತ ದೇಹದಿಂದ ಮನಸ್ಸು ಸಹ ಆರೋಗ್ಯವಾಗಿರಲು ಸಾಧ್ಯ ಎಂದು ಅನ್‌ಮೋಲ್ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲ ಯು.ಕೊಟ್ರೇಶ್ ಹೇಳಿದರು.

ಶಿರಮಗೊಂಡನಹಳ್ಳಿಯ ಅನ್‌ಮೋಲ್ ಪಬ್ಲಿಕ್ ಸ್ಕೂಲ್ ಶಾಲಾ ಆವರಣದಲ್ಲಿ ಮಕ್ಕಳ ದಿನಾಚರಣೆಯ ಅಂಗವಾಗಿ ಹಮ್ಮಿಕೊಳ್ಳಲಾಗಿದ್ದ ವಾರ್ಷಿಕ ಕ್ರೀಡಾಕೂಟ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ನಾವು ಎಲ್ಲಾ ಸಮಯದಲ್ಲಿ ನಮ್ಮ ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕಾಪಾಡಿಕೊಂಡಾಗ ಮಾತ್ರ ನಾವು ಜೀವನದಲ್ಲಿ ಉತ್ತಮ ಸಾಧನೆಗಳನ್ನು ಸಾಧಿಸಬಹುದು. ಆದ್ದರಿಂದ ಜೀವನದಲ್ಲಿ ಕ್ರೀಡೆಗಳು ಅವಶ್ಯಕವಾಗಿ ಬೇಕಾಗುತವೆ ಎಂದು ಅವರು ತಿಳಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸಂಸ್ಥೆಯ ಜಂಟಿ ಕಾರ್ಯದರ್ಶಿ ಭೈರೇಶ್ ಕ್ರೀಡಾ ಜ್ಯೋತಿ ಬೆಳಗುವುದರ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಶಾಲೆಯ ಆಂಗ್ಲ ಭಾಷಾ ಶಿಕ್ಷಕ ವಿ.ಎನ್. ಶಿವರಾಜ್ ಮಕ್ಕಳಿಗೆ ಕ್ರೀಡಾ ವಿಧಿಯನ್ನು ಬೋಧಿಸಿದರು. ಉಪ ಪ್ರಾಂಶುಪಾಲ ಆರ್. ಅಣ್ಣಪ್ಪ ಮತ್ತಿತರರು ಭಾಗವಹಿಸಿದ್ದರು.


ಬಾಪೂಜಿ ವಿದ್ಯಾಸಂಸ್ಥೆ (ರಿ)

**ಬಾಪೂಜಿ ಕಾಲೇಜ್ ಆಫ್ ಪಿಸಿಯೋಥೆರಪಿ**

ಎಸ್.ಎಸ್.ಐ.ಎಂ.ಎಸ್. ಕ್ಯಾಂಪಸ್, ರಾಷ್ಟ್ರಿಯ ಹೆದ್ದಾರಿ-4, ಬೈಪಾಸ್‌ರಸ್ತೆ, ದಾವಣಗೆರೆ 577005, ಕರ್ನಾಟಕ.



**Bapuji Educational Association (Regd.)**

**BAPUJI COLLEGE OF PHYSIOTHERAPY**

"Jnanashankara", NH-4, Bypass Road, Davangere - 577 005.

Ph : 08192-266307 / 266305 / 266334, E-mail : bcphy2024@gmail.com,



**ಪ್ರವೇಶ ಪ್ರಕಟಣೆ 2024–25**

'ಬಾಪೂಜಿ ವಿದ್ಯಾ ಸಂಸ್ಥೆ', ದಾವಣಗೆರೆ ಅಡಿಯಲ್ಲಿ 2024–2025 ನೇ ಶೈಕ್ಷಣಿಕ ವರ್ಷದಿಂದ ನೂತನವಾಗಿ ಪ್ರಾರಂಭವಾಗಿರುವ **'ಬಾಪೂಜಿ ಕಾಲೇಜ್ ಆಫ್ ಪಿಸಿಯೋಥೆರಪಿ'** ದಾವಣಗೆರೆ, ಪದವಿ ಕೋರ್ಸ್‌ಗಳಿಗಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ದಿನಾಂಕ 25–11–2024 ಸಂಜೆ 5–00 ಗಂಟೆಯ ಒಳಗಾಗಿ ಖುದ್ದಾಗಿ ಮೇಲ್ಕಂಡ ವಿಳಾಸದಲ್ಲಿ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

| ಕೋರ್ಸ್ ಮತ್ತು ಅವಧಿ | ಅರ್ಹತೆ |
|---|---|
| ಬ್ಯಾಚುಲರ್ ಆಫ್ ಫಿಸಿಯೋಥೆರಪಿ ಒಟ್ಟು 4 ವರ್ಷ 6 ತಿಂಗಳು (6 ತಿಂಗಳು ಇಂಟರ್ನ್‌ಶಿಪ್) | ಪಿ.ಯು.ಸಿ. ಯ ವಿಜ್ಞಾನ ವಿಭಾಗದಲ್ಲಿ ಕನಿಷ್ಟ ಶೇಕಡವಾರು 40 ಅಂಕಗಳನ್ನು ಭೌತಶಾಸ್ತ್ರ, ರಸಾಯನಶಾಸ್ತ್ರ, ಜೀವಶಾಸ್ತ್ರ ಹಾಗೂ ಇಂಗ್ಲೀಷ್ ವಿಷಯಗಳಲ್ಲಿ ಪಡೆದಿರಬೇಕು. ಎಸ್ಸಿ/ಎಸ್ಟಿ ವಿದ್ಯಾರ್ಥಿಗಳು ಮೇಲಿನ ವಿಷಯಗಳಲ್ಲಿ ಕನಿಷ್ಟ ಶೇಕಡವಾರು 35 ಅಂಕಗಳನ್ನು ಪಡೆದಿರಬೇಕು. |

ಪ್ರವೇಶಕ್ಕಾಗಿ ಸಂಪರ್ಕಿಸಿ

**ರವಿ ಆರ್.ಜಿ.**
ವ್ಯವಸ್ಥಾಪಕರು
ಫೋನ್ : 94497 63322
ಕಛೇರಿಯ ಫೋನ್ : 08192–266307

# ಸಹಕಾರ ಚಳುವಳಿ ಗೆಲ್ಲಬೇಕು ಮತ್ತು ಗೆಲ್ಲಿಸಬೇಕು

ವಿಶ್ವ ಮಾನವರ ಆರ್ಥಿಕ ಬದುಕನ್ನು ಪ್ರಜಾಸತ್ತಾತ್ಮಕ ತಳಹದಿಯ ಮೇಲೆ ಸಂಘಟಿಸಲ್ಪಟ್ಟ ಏಕಮೇವ ಪದ್ಧತಿಯೇ ಸಹಕಾರ ಚಳುವಳಿ. ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಎಂಬ ಆಶಯದೊಂದಿಗೆ ಒಬ್ಬನು ಎಲ್ಲರಿಗಾಗಿ,ಎಲ್ಲರೂ ಒಬ್ಬನಿಗಾಗಿ ಎಂಬ ಮೂಲ ತತ್ವದ ಮೇಲೆ ಆರ್ಥಿಕ ವಿಕೇಂದ್ರೀಕರಣದ ಮೂಲಕ ಸಂಪತ್ತಿನ ಸಮಾನ ಹಂಚಿಕೆ, ಸರ್ವರ ಆರ್ಥಿಕ ಸಬಲೀಕರಣ ಹಾಗೂ ಶೋಷಣೆ ರಹಿತ ಸಮಾಜ ನಿರ್ಮಾಣ ಮಾಡಲು ಸಹಕಾರ ಚಳುವಳಿ ಹುಟ್ಟಿಕೊಂಡಿತು.




ರಾಬರ್ಟ್ ಓವೆನ್ ಸಹಕಾರಿ ಆಂದೋಲನದ ಪಿತಾಮಹ. ತನ್ನ ಸರ್ವಸ್ವವನ್ನೇ ತ್ಯಾಗ ಮಾಡಿದ ಮಹಾ ಪುರುಷ. ಇವರ ನೇತೃತ್ವದಲ್ಲಿ ದಿನಾಂಕ 24.10.1844 ರಂದು ಇಂಗ್ಲೆಂಡಿನ ರಾಕ್‌ಡೇಲ್ ಪಟ್ಟಣದ ಟೂಡ್‌ಲೇನ್ ಬೀದಿಯಲ್ಲಿ ರಾಕ್‌ಡೇಲ್ ಇಕ್ವಿಟೇಬಲ್ ಪಯೋನಿಯರ್ಸ್ ಕೋ-ಆಪರೇಟಿವ್ ಸೊಸೈಟಿ ಹೆಸರಿನ ವಿಶ್ವದ ಪ್ರಥಮ ಸಹಕಾರಿ ಸಂಘ ಸ್ಥಾಪನೆಯಾಯಿತು.

ರಾಕ್‌ಡೇಲ್ ಮುಖಂಡರು ಸಂಘದ ಆಡಳಿತ ಮತ್ತು ವ್ಯವಹಾರವನ್ನು ಯಶಸ್ವಿಯಾಗಿ ನಡೆಸಿಕೊಂಡು ಹೋಗಲು ಕೆಲವು ನೀತಿ ಸಂಹಿತೆಗಳನ್ನು ರೂಪಿಸಿಕೊಂಡರು. ನಂತರ ಈ ನೀತಿ ಸಂಹಿತೆಗಳೇ ಕಾಲಾಂತರದಲ್ಲಿ ಸಹಕಾರ ತತ್ವಗಳಾದವು. ನಂತರ ಬೇಸಾಯ ಮತ್ತು ಬೇಸಾಯೇತರ ಸಹಕಾರ ಪತ್ತಿನ ಸಂಘಗಳು ಜರ್ಮನಿಯಲ್ಲಿ 1952ರಲ್ಲಿ ಶೂಲ್ಸ್‌ಡೆಲಿಸ್ ಎಂಬುವರು ನಗರದಲ್ಲಿ ಸ್ಥಾಪಿಸಿದ ಪತ್ತಿನ ಸಂಘ, ಪಟ್ಟಣ ಸಹಕಾರ ಬ್ಯಾಂಕುಗಳೆಂದು, 1854ರಲ್ಲಿ ಫೆಡ್ರಿಕ್ಲ ವೂನ್ ರೆಫಿಜಿನ್ ಸ್ಥಾಪಿಸಿದ ಗ್ರಾಮ ಪತ್ತಿನ ಸಂಘಗಳು ಗ್ರಾಮ ಬ್ಯಾಂಕುಗಳೆಂದು ಖ್ಯಾತಿ ಪಡೆದವು. ಇವರಿಬ್ಬರನ್ನೂ ಸಹಕಾರಿ ಆಂದೋಲನದ ಮೂಲ ಪುರುಷರೆಂದು ಕರೆಯಲಾಗುತ್ತದೆ. ನಂತರ ಫ್ರಾನ್ಸ್‌ನಲ್ಲಿ ಔದ್ಯೋಗಿಕ ಸಹಕಾರ ಸಂಘಗಳು, ಡೆನ್ಮಾರ್ಕಿನಲ್ಲಿ ಹೈನುಗಾರಿಕೆ, ಭಾರತದಲ್ಲಿ ಸಾಲದ ಶೂಲಕ್ಕೆ ಸಿಲುಕಿದ ಕೋಟ್ಯಾಂತರ ರೈತರಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲ ನೀಡಲು ಸಹಕಾರ ಸಂಘಗಳು ಹುಟ್ಟಿಕೊಂಡವು.

ವಿಶ್ವದ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯಲ್ಲಿ ಸಹಕಾರಿ ಸಂಘಗಳ ಪಾತ್ರ ತುಂಬಾ ದೊಡ್ಡದು. ಸಹಕಾರಿ ತತ್ವಗಳ ಮೇಲೆ ರಚನೆಯಾದ ಸಂಘ-ಸಂಸ್ಥೆಗಳನ್ನು ಒಂದುಗೂಡಿಸಿ, ಸಮರ್ಪಕ ಸೇವೆ ಸಲ್ಲಿಸಲು ಹಾಗೂ ಮಾರ್ಗದರ್ಶನಕ್ಕಾಗಿ ಎಡ್ವರ್ಡ್ ವ್ಯಾನ್ಸಿ ಟಾರ್ಚ್ ಸಲಹೆ ಮೇರೆಗೆ ಅಂತರರಾಷ್ಟ್ರೀಯ ಮಟ್ಟದಲ್ಲಿ 1895ರಲ್ಲಿ ಲಂಡನ್‌ನಲ್ಲಿ ಅಂತರರಾಷ್ಟ್ರೀಯ ಸಹಕಾರ ಮೈತ್ರಿ (ICA)ನ್ನು ಸ್ಥಾಪಿಸಲಾಯಿತು. ಇದು ವಿಶ್ವದಾದ್ಯಂತ ICA ನಿಯಂತ್ರಣದಲ್ಲಿ 112 ದೇಶಗಳಲ್ಲಿ 318 ಸಹಕಾರ ಒಕ್ಕೂಟಗಳು /ಸಂಸ್ಥೆಗಳು ಪ್ರತಿನಿಧಿಸಿ ಕಾರ್ಯ ನಿರ್ವಹಿಸುತ್ತವೆ. 1921ರಲ್ಲಿ ICA ಎಲ್ಲಾ ಸಹಕಾರ ಸಂಸ್ಥೆಗಳು ರಾಕ್‌ಡೇಲ್ ತತ್ವಗಳಿಗೆ ಬದ್ಧವಾಗಿರಬೇಕೆಂದು ಆದೇಶಿಸಿತು. ನಂತರ 1995ರಲ್ಲಿ ಸಹಕಾರ ತತ್ವಗಳನ್ನು ವಿಮರ್ಶಿಸಿ, ಪರಿಶೀಲಿಸಿ ಸಾಮಾಜಿಕ ಕಳಕಳಿಯನ್ನು ಸೇರಿಸಿ ಒಟ್ಟು ಏಳು ಸಹಕಾರ ತತ್ವಗಳೆಂದು ಘೋಷಿಸಿತು. ಫ್ರಾನ್ಸಿನ ಆರ್ಥಿಕ ತಜ್ಞ ಚಾರ್ಲ್ಸ್ ಗೌಡ್ ಎರಡು ಹಸ್ತಗಳ ಲಾಘವ ಸಂಕೇತದೊಂದಿಗೆ ವೈವಿಧ್ಯತೆಯಲ್ಲಿ ಏಕತೆಯನ್ನು ಪ್ರತಿನಿಧಿಸುವ ಸಪ್ತ ವರ್ಣಗಳನ್ನು ಒಳಗೊಂಡಿರುವ ಸಹಕಾರ ಧ್ವಜವನ್ನು ರೂಪಿಸಿದ. ಇದನ್ನು 1925ರಲ್ಲಿ ICA ಸಹಕಾರ ಧ್ವಜವೆಂದು ಅಂಗೀಕರಿಸಿತು. ಸಹಕಾರ ಚಳುವಳಿ ಹೊಂದಿರುವ ರಾಷ್ಟ್ರಗಳು, ಹಿಂದಿನ ವರ್ಷಗಳ ಸಾಧನೆ ಮತ್ತು ವೈಫಲ್ಯಗಳನ್ನು ವಿಮರ್ಶಿಸಿ ಮುಂದಿನ ವರ್ಷಕ್ಕೆ ಗುರಿ ಹಾಕಿಕೊಳ್ಳುವ ಮೂಲಕ 7 ದಿನಗಳ ಕಾಲ ಸಹಕಾರ ಸಪ್ತಾಹವನ್ನು ಆಚರಿಸಬೇಕೆಂದು ತೀರ್ಮಾನಿಸಿ, ಜುಲೈ 2ನೇ ಶನಿವಾರದಂದು ಆರಂಭಿಸಿ, 7 ದಿನಗಳವರೆಗೆ ಆಚರಿಸಲಾಗುತ್ತಿತ್ತು. ಭಾರತದಲ್ಲಿ ಮರು ಚಿಂತನೆ ನಡೆದು ಪ್ರಧಾನಿ ಪಂಡಿತ್ ಜವಾಹರ್ ಲಾಲ್ ನೆಹರು ಪ್ರಥಮ ಪಂಚವಾರ್ಷಿಕ ಯೋಜನೆಯಿಂದಲೇ ಸಹಕಾರ ಕ್ಷೇತ್ರಕ್ಕೆ ನೀಡಿದ ಪ್ರೋತ್ಸಾಹಕ್ಕೆ ಮತ್ತು ಬೆಂಬಲಕ್ಕಾಗಿ ಅವರಿಗೆ ಕೃತಜ್ಞತೆ ಸಲ್ಲಿಸಲು. 1979ರಿಂದ ಅವರ ಜನ್ಮ ದಿನ ನವೆಂಬರ್ 14ರಿಂದ ಪ್ರಾರಂಭವಾಗಿ 20ರವರೆಗೆ ನಡೆಸಲಾಗುತ್ತದೆ.

ಭಾರತದಲ್ಲಿ 120 ವರ್ಷಗಳ ಇತಿಹಾಸ ಹೊಂದಿರುವ ಸಹಕಾರ ಚಳುವಳಿ ವಿಶ್ವದಲ್ಲೇ ದೊಡ್ಡದು. 1904 ಮಾರ್ಚ್ 25ರಂದು ಸಹಕಾರ ಪತ್ತಿನ ಕಾಯ್ದೆಯನ್ನು ಕೇಂದ್ರ ಸರ್ಕಾರ ಅಂಗೀಕರಿಸುವ ಮೂಲಕ ಕರ್ನಾಟಕ ರಾಜ್ಯದ ಅಂದಿನ ಧಾರವಾಡ ಜಿಲ್ಲೆ, ಗದಗ ತಾಲ್ಲೂಕಿನ ಕಣಗಿನಹಾಳದಲ್ಲಿ ಮೇ 8, 1905ರಂದು ಶ್ರೀ ಸಿದ್ದನಗೌಡ ಸಣ್ಣ ರಾಮನಗೌಡ ಪಾಟೀಲ್‌ರ ನೇತೃತ್ವದಲ್ಲಿ ಪ್ರಥಮ ಕೃಷಿ ಸಹಕಾರಿ ಪತ್ತಿನ ಸಂಘ ಸ್ಥಾಪನೆಯಾಯಿತು. ಆದ್ದರಿಂದ ಇವರನ್ನು ಭಾರತದ ಸಹಕಾರ ಚಳುವಳಿಯ ಪಿತಾಮಹ ಎಂದು ಕರೆಯಲಾಗುತ್ತದೆ. ಕರ್ನಾಟಕ ರಾಜ್ಯವನ್ನು ಸಹಕಾರಿ ಆಂದೋಲನದ ತೊಟ್ಟಿಲು ಎಂದು ಕರೆಯಲಾಗುತ್ತದೆ. ಬಹುತೇಕ ಸಹಕಾರ ಸಂಘಗಳು ಪ್ರಥಮವಾಗಿ ಕರ್ನಾಟಕದಲ್ಲೇ ಜನ್ಮತಾಳಿವೆ.

21.09.1973ರಂದು ಬೆಟಗೇರಿಯಲ್ಲಿ ಬೇಸಾಯೇತರ ಪತ್ತಿನ ಸಹಕಾರ ಸಂಘ ಸ್ಥಾಪನೆ, ಇದೇ ಮೊದಲ ಪಟ್ಟಣ ಸಹಕಾರ ಬ್ಯಾಂಕು. ಬೆಂಗಳೂರಿನ ಸಿಟಿ ಸಹಕಾರ ಬ್ಯಾಂಕ್ ಎರಡನೇಯದು. 1915ರಲ್ಲಿ ಕರ್ನಾಟಕ ಅಪೆಕ್ಸ್ ಬ್ಯಾಂಕು 21.09.1973ರಲ್ಲಿ ಬಿಡದಿಯಲ್ಲಿ ಪ್ರಥಮ ವ್ಯವಸಾಯ ಸೇವಾ ಸಹಕಾರ ಸಂಘ ಹೀಗೆ ಪ್ರಥಮಗಳು ಕರ್ನಾಟಕದಲ್ಲಿ ಸ್ಥಾಪನೆಗೊಂಡಿವೆ. 1912ರಲ್ಲಿ ಮತ್ತು 1919ರಲ್ಲಿ ಸಹಕಾರ ಕಾಯ್ದೆಗೆ ತಿದ್ದುಪಡಿ ತಂದು ಅನುಕ್ರಮವಾಗಿ ಪತ್ಯೇತರ ಸಹಕಾರ ಸಂಘಗಳ ಸ್ಥಾಪನೆ ಮತ್ತು ಸಹಕಾರ ವಿಷಯಗಳ ಪ್ರಾಂತ್ಯ ಸರ್ಕಾರದ ವ್ಯಾಪ್ತಿಗೆ ತರಲಾಯಿತು. 1954ರಲ್ಲಿ ಎ.ಡಿ. ಗೋರವಾಲ ಅಧ್ಯಕ್ಷತೆಯಲ್ಲಿ ನೇಮಿಸಲ್ಪಟ್ಟ ಅಖಿಲ ಭಾರತ ಗ್ರಾಮೀಣ ಪತ್ತು ಪರಿಶೀಲನಾ ಸಮಿತಿ ಸಹಕಾರ ಚಳುವಳಿ ವಿಫಲವಾಗಿದೆ ಅದು ಗೆಲ್ಲಬೇಕು ಎಂದು ಘೋಷಿಸಿತು. ನಂತರ ಇದರ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತಂದ ಮೇಲೆ ಸಹಕಾರ ಆಂದೋಲನ ಬೃಹದಾಕಾರವಾಗಿ ಬೆಳೆದು ಬಂದಿದೆ.

ಜಗತ್ತಿನ 30 ಲಕ್ಷ ಸಹಕಾರ ಸಂಸ್ಥೆಗಳ ಪೈಕಿ, 8.55 ಲಕ್ಷ ಸಹಕಾರ ಸಂಸ್ಥೆಗಳು ಭಾರತದಲ್ಲಿವೆ. 33 ಕೋಟಿ ಜನರು ನೇರ ಸಹಭಾಗಿತ್ವ ಹೊಂದಿದ್ದು, ಶೇ. 91ರಷ್ಟು ಹಳ್ಳಿಗಳು ಸಹಕಾರ ಸಂಘಗಳ ವ್ಯಾಪ್ತಿಗೆ ಒಳಪಟ್ಟಿವೆ. ಕರ್ನಾಟಕದಲ್ಲಿ ಇಂದು 54 ವಿವಿಧ ಬಗ್ಗೆಯ ಸಹಕಾರ ಸಂಘಗಳು 46917 ಇದ್ದು, ಇದರಲ್ಲಿ 2675 ನಿಷ್ಕ್ರಿಯ, 3406 ಸಮಾಪನೆಗೊಂಡಿದ್ದು, 40836 ಸಂಘಗಳು ಕಾರ್ಯ ನಿರ್ವಹಿಸುತ್ತಿವೆ. ಇವುಗಳಲ್ಲಿ 13869 ಸಂಘಗಳು ನಷ್ಟದಲ್ಲಿವೆ. 27756 ಸಂಘಗಳು ಲಾಭದಲ್ಲಿವೆ. ಜೊತೆಗೆ ಸೌಹಾರ್ದ ಸಹಕಾರ ಸಂಘಗಳು 5918 ಇವೆ. ಸಹಕಾರ ಸಂಘಗಳ ವ್ಯಾಪ್ತಿ ಶೇ. 100 ಗ್ರಾಮಗಳು ಒಳಪಟ್ಟಿವೆ.

**ಸಹಕಾರ ಸಪ್ತಾಹ :** ಕರ್ನಾಟಕದಲ್ಲಿ ಸಹಕಾರ ಶಿಕ್ಷಣ ತರಬೇತಿ ಮತ್ತು ಪ್ರಚಾರದ ಜವಾಬ್ದಾರಿ ಹೊತ್ತು ಸಹಕಾರ ಚಳುವಳಿಗೆ ಶ್ರಮಿಸುತ್ತಿರುವ 1987ರಲ್ಲಿ ಸ್ಥಾಪನೆಯಾದ ಕರ್ನಾಟಕ ರಾಜ್ಯ ಸಹಕಾರ ಮಹಾಮಂಡಳ ಸಹಕಾರ ಸಪ್ತಾಹವನ್ನು 1996ರವರೆಗೆ ಬೆಳಗಾವಿಯಲ್ಲಿ ಮಾತ್ರ ಆಚರಿಸಲಾಗುತ್ತಿತ್ತು. ಅಂದಿನ ಮುಖ್ಯಮಂತ್ರಿ ಹೆಚ್.ಡಿ. ದೇವೇಗೌಡರು ಮೊದಲ ಬಾರಿಗೆ ಗ್ರಾಮೀಣ ಪ್ರದೇಶದಲ್ಲಿ ಆಚರಿಸಬೇಕೆಂದು ತೀರ್ಮಾನಿಸಿ ಅಂಕನಹಳ್ಳಿಯಲ್ಲಿ ಉದ್ಘಾಟನೆಗೊಂಡಿತು. ಅಂದಿನಿಂದ ಪ್ರತಿ ವರ್ಷ ರಾಜ್ಯದ ಬೇರೆ ಬೇರೆ ಸ್ಥಳಲ್ಲಿ ಮುಖ್ಯಮಂತ್ರಿಯವರಿಂದ ಚಾಲನೆಗೊಳ್ಳುತ್ತದೆ.

ಏಳು ತತ್ವಗಳು, ಏಳು ಮೌಲ್ಯಗಳು, ಏಳು ಬಣ್ಣಗಳನ್ನು ಹೊಂದಿರುವ ಮತ್ತು ಏಳು ದಿನಗಳಲ್ಲಿ ನಡೆಯಲಿರುವ 71ನೇ ಅಖಿಲ ಭಾರತ ಸಹಕಾರ ಸಪ್ತಾಹ ನವೆಂಬರ್ 14 ರಿಂದ 20ರವರೆಗೆ ವಿಕಸಿತ ಭಾರತ ನಿರ್ಮಾಣದಲ್ಲಿ ಸಹಕಾರ ಸಂಘಗಳ ಪಾತ್ರ ಮುಖ್ಯ ಧ್ಯೇಯದೊಂದಿಗೆ 7 ದಿನಗಳ ಕಾಲ ವಿವಿಧ ವಿಷಯಗಳ ಮೇಲೆ ಚಿಂತನ-ಮಂಥನ ನಡೆಯುತ್ತದೆ.

ಸಹಕಾರ ಸಪ್ತಾಹದಲ್ಲಿ ಸೋಲು-ಗೆಲುವು, ಕೊರತೆ, ಅವಕಾಶಗಳು, ಸವಾಲುಗಳು, ಸಮಸ್ಯೆಗಳು ಮತ್ತು ಕಾಲಕ್ಕೆ ತಕ್ಕಂತೆ ತುರ್ತು ಅಗತ್ಯತೆಗಳ ಬಗ್ಗೆ ವಿವೇಕಯುತ ವಿಮರ್ಶೆ, ವಿಶ್ಲೇಷಣೆ ನಡೆಯಬೇಕು. ಸಹಕಾರ ಕ್ಷೇತ್ರ ನಿರೀಕ್ಷಿತ ಮಟ್ಟದಲ್ಲಿ ಬೆಳೆಯದೇ ವಿಫಲವಾಗುವುದು ಏಕೆ? ಒಳ್ಳೆಯ ಸಹಕಾರಿಗಳು, ಸಿಬ್ಬಂದಿಗಳು ಇದ್ದರೂ ಸಹಕಾರ ಕಾಳಜಿಗಿಂತ ಸ್ವಲಾಭ ಕೇಂದ್ರೀಕೃತ ಹೆಚ್ಚುತ್ತಿರುವುದು ಮತ್ತು ಸಹಕಾರ ತತ್ವಗಳನ್ನು ತೂರಿ ಮೌಲ್ಯಗಳನ್ನು ಮಾರಿ, ಬದ್ಧತೆಯನ್ನು ಮೀರಿ ಸಾಲ ನೀಡಿಕೆ, ನಕಲಿ ಖಾತೆಗಳ ಸೃಷ್ಟಿ, ದುರಾಡಳಿತದಿಂದಾಗಿ ಹತ್ತಾರು ದೊಡ್ಡ ಸಂಘ/ಬ್ಯಾಂಕುಗಳು ದಿವಾಳಿಯಾಗಿವೆ. ಆದ್ದರಿಂದ ವೃತ್ತಿಪರತೆ, ಶಿಕ್ಷಣ-ತರಬೇತಿ, ಆಧುನಿಕ ತಂತ್ರಜ್ಞಾನ, ಗಣಕೀಕರಣ, ಡಿಜಿಟಲೀಕರಣ, ದಕ್ಷ ನಾಯಕತ್ವ, ದೂರದರ್ಶಿತ್ವ, ಆಧುನಿಕ ಸ್ಪರ್ಷ ಇವೆಲ್ಲವೂ ಸಹಕಾರ ಚಳುವಳಿಗೆ ತುಂಬಾ ಅಗತ್ಯ. ಈಗ ಭಾರತ ಐದನೇ ಅತಿ ದೊಡ್ಡ ಆರ್ಥಿಕತೆಯಿಂದ ಮೂರನೇ ಅತಿ ದೊಡ್ಡ ಆರ್ಥಿಕತೆಯಾಗಲಿಕ್ಕೆ ಸಹಕಾರ ಕ್ಷೇತ್ರದ ಪಾತ್ರ ದೊಡ್ಡದು. co-operatvies in india have failed to raise to toe expectations of many of us. but they shall succeed. 71ನೇ ಅಖಿಲ ಭಾರತ ಸಹಕಾರ ಸಪ್ತಾಹ ಸರ್ವರನ್ನೂ ಹೊಸ ದಿಕ್ಕಿನತ್ತ ಕರೆಯೊಯ್ಯಲಿ.

**- ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ,**
ದಾವಣಗೆರೆ.

## ಮುಡಾದಲ್ಲಿ ಅಧಿಕಾರಿಗಳ ಲೋಪ

**(1ನೇ ಪುಟದಿಂದ)** ಎಂಬ ಬಗ್ಗೆ ಹಿರಿಯ ಅಧಿಕಾರಿಗಳಿಂದ ಉದೇಶ್, ಸಲಹೆ ಮತ್ತು ಮಾರ್ಗದರ್ಶನ ಪಡೆದಿದ್ದಾರೆಂದು ಉನ್ನತ ಮೂಲಗಳು ತಿಳಿಸಿವೆ.

ನಿವೇಶನಗಳ ಹಂಚಿಕೆ ಸಂದರ್ಭದಲ್ಲಿ ಆಯುಕ್ತರಾಗಿ ಸೇವೆ ಸಲ್ಲಿಸಿದ್ದ ನಟೇಶ್ ಮತ್ತು ದಿನೇಶ್ ಅವರುಗಳ ವಿಚಾರಣೆ ಬಾಕಿ ಇದೆ, ಉಳಿದಂತೆ ಪ್ರಕರಣಕ್ಕೆ ಸಂಬಂಧಿಸಿದಂತೆ ಅಧಿಕಾರ ಮತ್ತು ಅಧಿಕಾರೇತರರಿಂದ ದಾಖಲೆ ಮತ್ತು ಮಾಹಿತಿ ಸಂಗ್ರಹಿಸಿರುವ ಬಗ್ಗೆ ವರದಿಯಲ್ಲಿ ತಿಳಿಸಲಾಗಿದೆ.

ಹಿರಿಯ ಅಧಿಕಾರಿಗಳ ವಿಚಾರಣೆ ನಡೆಸಲು ಅನುಮತಿ ನೀಡುವಂತೆ ಮುಖ್ಯಕಾರ್ಯದರ್ಶಿ ಅವರಿಗೆ ಮೂರು ವಾರಗಳ ಹಿಂದೆಯೇ ಪತ್ರ ಬರೆದಿದ್ದರೂ, ಇದುವರೆಗೂ ಅವರಿಂದ ನಮಗೆ ಅನುಮತಿ ದೊರೆತಿಲ್ಲ.

ಅನುಮತಿ ದೊರೆತ ತಕ್ಷಣವೇ ತಾವು ಹಿರಿಯ ಅಧಿಕಾರಿಗಳನ್ನು ಕರೆಸಿ ಅವರಿಂದ ತನಿಖೆಗೆ ಅಗತ್ಯ ಇರುವ ಮಾಹಿತಿ ಪಡೆದುಕೊಳ್ಳುವುದಾಗಿಯೂ ತಿಳಿಸಿದ್ದಾರೆ.

ವಿವಾದಿತ ಜಮೀನು ಡಿನೋಟಿಫೈಗೆ ಮೊದಲು ದೇವರಾಜು ತಂದೆಯಿಂದ ದೇವರಾಜು ಸಹೋದರನಿಗೆ ನಂತರ ದೇವರಾಜುಗೆ ಬಂದಿತ್ತು. ಆದರೆ, ಜಮೀನುಗಳನ್ನು ಕುಟುಂಬಸ್ಥರೇ ವರ್ಗಾವಣೆ ಮಾಡಿಕೊಂಡಿದ್ದರು. ಜಮೀನು ಮಾಲೀಕತ್ವ ವರ್ಗಾವಣೆ ಬಗ್ಗೆ ಸರ್ಕಾರಿ ದಾಖಲೆಯಲ್ಲಿ ನಮೂದಿಸದೇ ಇರುವುದು ಅವರ ಕುಟುಂಬಸ್ಥರು ಮಾಡಿದ್ದ ನಿರ್ಲಕ್ಷ್ಯ ಎಂಬ ಮಾಹಿತಿ ನೀಡಿದ್ದಾರೆ.

ದೇವರಾಜು ತನಗೆ ಬಂದ ಕೃಷಿ ಭೂಮಿಯನ್ನು ಮಲ್ಲಿಕಾರ್ಜುನ ಸ್ವಾಮಿ ಎಂಬುವರಿಗೆ ಮಾರಾಟ ಮಾಡಿದ್ದರು, ಅವರು ಜಮೀನನ್ನು ಭೂ ಪರಿವರ್ತನೆ ಮಾಡಿಸಿಕೊಂಡಿರುತ್ತಾರೆ ಎಂದು ವರದಿಯಲ್ಲಿ ತಿಳಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಮುಡಾ ಹಾಗೂ ಜಿಲ್ಲಾಧಿಕಾರಿ ಕಚೇರಿ ಅಧಿಕಾರಿಗಳು ಭೂ ಪರಿವರ್ತನೆ ಬಗ್ಗೆ ಸರಿಯಾದ ಪರಿಶೀಲನೆ ಮಾಡಿಲ್ಲ, ಪರಿಶೀಲನೆ ನಡೆಸದೇ ಭೂ ಪರಿವರ್ತನೆ ಮಾಡಿದ್ದಾರೆ.

ಭೂ ಪರಿವರ್ತನೆಯಲ್ಲಿ ಮುಖ್ಯಮಂತ್ರಿ ಕುಟುಂಬದ ಹಸ್ತಕ್ಷೇಪವಿಲ್ಲ ಅನ್ನುವುದು ಸ್ಪಷ್ಟವಾಗಿದೆ, ಮಲ್ಲಿಕಾರ್ಜುನಸ್ವಾಮಿ ಮಾರಾಟ ಮಾಡಿದ ಮೇಲೆ ಅವರ ಕುಟುಂಬಕ್ಕೆ ಭೂಮಿ ಬಂತು.

ಮೈಸೂರು ನಗರದ ಪ್ರತಿಷ್ಠಿತ ಬಡಾವಣೆಯಲ್ಲಿ 50:50ರ ಅನುಪಾತದಲ್ಲಿ 14 ಬಿಡಿ ನಿವೇಶನಗಳನ್ನು ಮುಖ್ಯಮಂತ್ರಿ ಅವರ ಕುಟುಂಬಕ್ಕೆ ನೀಡಿ ಮುಡಾ ಅಧಿಕಾರಿಗಳು ತಪ್ಪು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ.

ಈ ನಿವೇಶನ ಪಡೆಯುವ ವೇಳೆ ಮುಖ್ಯಮಂತ್ರಿ ಅವರ ಕುಟುಂಬ ಅಧಿಕಾರ ದುರ್ಬಳಕೆ ಮಾಡಿಕೊಂಡಿದೆಯೇ ಎಂಬ ಬಗ್ಗೆ ಹಿರಿಯ ಅಧಿಕಾರಿಗಳಿಂದ ಮತ್ತಷ್ಟು ಮಾಹಿತಿ ಸಂಗ್ರಹಿಸಬೇಕಿದೆ. ಆದರೆ, ಇದುವರೆಗಿನ ತನಿಖೆಯಲ್ಲಿ ಅವರ ಕುಟುಂಬ ಹಸ್ತಕ್ಷೇಪ ಮಾಡಿರುವ ಮಾಹಿತಿ ಇಲ್ಲ ಎಂದು ತಿಳಿಸಲಾಗಿದೆ.

## ರೈತರ ವಿರುದ್ಧ ಪ್ರಕರಣ, ಟ್ರ್ಯಾಕ್ಟರ್ ವಶ

**(1ನೇ ಪುಟದಿಂದ)** ರೈತರಿಗೆ ಸೇರಿದ ಜಮೀನಿನ ಪಹಣಿಯಲ್ಲಿ ವಕ್ಫ್ ಎಂದು ನಮೂದಿಸಲಾಗಿತ್ತು.

ವಿವಾದಿತ ಜಮೀನುಗಳಲ್ಲಿ ಉಳುಮೆ ಮಾಡಲು ಮುಂದಾಗಿದ್ದಕ್ಕೆ ಚಿಂತಾಮಣಿ ಜಾಮಿಯಾ ಮಸೀದಿ ಕಾರ್ಯದರ್ಶಿ ದೂರು ದಾಖಲಿಸಿದ್ದರು. ಇದರ ಆಧಾರದ ಮೇಲೆ ಪೊಲೀಸರು ಕ್ರಮ ತೆಗೆದುಕೊಂಡಿದ್ದಾರೆ.

## ಅಜಾಗರೂಕ ಚಾಲನೆ, ಅನುಚಿತ ವರ್ತನೆ

**(1ನೇ ಪುಟದಿಂದ)** ಸಾರ್ವಜನಿಕರೊಬ್ಬರು ಇತ್ತೀಚೆಗೆ ತಮಗೆ ಕಳಿಸಿ ದೂರು ನೀಡಿದ್ದರು. ಸರಿಯಾಗಿ ವರ್ತಿಸುವುದನ್ನೂ ಕಲಿಸಿ ಕೊಡಬೇಕಾ? ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಪ್ರಶ್ನಿಸಿದರು.

ಕೆಲ ಆಟೋಗಳಲ್ಲಿ ಮಿತಿ ಮೀರಿ ಮಕ್ಕಳು ಹಾಗೂ ಜನರನ್ನು ಹತ್ತಿಸಿಕೊಳ್ಳಲಾಗುತ್ತಿದೆ. ಮೀಟರ್‌ಗಳನ್ನೂ ಅಳವಡಿಸಿಕೊಳ್ಳುತ್ತಿಲ್ಲ. ನಗರದಲ್ಲಿ ಸಂಚರಿಸುವ ಆಟೋಗಳ ಪಟ್ಟಿಯನ್ನು ಕೊಡುವಂತೆ ಆಟೋ ಸಂಘದವರಿಗೆ ತಿಳಿಸಿದರೆ ಇನ್ನೂ ಪಟ್ಟಿ ಕೊಟ್ಟಿಲ್ಲ. ಇಂತಹ ವರ್ತನೆಯನ್ನು ಬದಲಿಸಿಕೊಳ್ಳಬೇಕು ಎಂದು ಜಿಲ್ಲಾಧಿಕಾರಿ ತಿಳಿಸಿದರು.

ಆಟೋಗಳ ನಿಲುಗಡೆ ಜಾಗಗಳನ್ನು ಸ್ಪಷ್ಟವಾಗಿ ಗುರುತಿಸಬೇಕು. ನಿಲುಗಡೆ ಇಲ್ಲದ ಸ್ಥಳಗಳಲ್ಲಿ ಆಟೋಗಳು ನಿಂತು ಜನರಿಗೆ ಸಮಸ್ಯೆಯಾಗಬಾರದು. ಈ ಬಗ್ಗೆ ಪಾಲಿಕೆ ಕ್ರಮ ತೆಗೆದುಕೊಳ್ಳಬೇಕು ಎಂದು ಸೂಚಿಸಿದರು.

ಬಹಳಷ್ಟು ಆಟೋಗಳಿಗೆ ಎಫ್.ಸಿ. ಇಲ್ಲ, ಇವುಗಳು 15 ವರ್ಷ ಮೀರಿವೆ ಎಂದು ಆರ್.ಟಿ.ಓ. ಪ್ರಮುತೇಶ್ ತಿಳಿಸಿದಾಗ, ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿ ಸೂಚಿಸಿದರು.

ಜಗಳೂರು ರಸ್ತೆ ಕಿಷ್ಕಿಂಧೆಯಂತಾಗಿದೆ. ಈ ಸಮಸ್ಯೆ ಬಗೆಹರಿಸಲು ರಿಂಗ್ ರಸ್ತೆ ನಿರ್ಮಿಸಬೇಕಿದೆ. ಇಲ್ಲವೇ ಮುಖ್ಯ ರಸ್ತೆಯಲ್ಲಿ ವಾಹನಗಳ ನಿಲುಗಡೆ ತಪ್ಪಿಸಿ, ಬೇರೆಡೆ ನಿಲುಗಡೆಗೆ ವ್ಯವಸ್ಥೆ ಮಾಡಬೇಕಿದೆ. ಈ ಬಗ್ಗೆ ಶಾಸಕರ ಜೊತೆ ಚರ್ಚಿಸಿ ಮುಂದಿನ ಕ್ರಮ ತೆಗೆದುಕೊಳ್ಳುವಂತೆ ಜಿಲ್ಲಾಧಿಕಾರಿ ತಿಳಿಸಿದರು.

ಸಭೆಯಲ್ಲಿ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ವೀರೇಶ್ ಕುಮಾರ್, ಎಎಸ್‌ಪಿ ವಿಜಯ ಕುಮಾರ್ ಸಂತೋಷ್, ಸೈಬರ್ ಅಪರಾಧ ಠಾಣೆಯ ಡಿವೈಎಸ್‌ಪಿ ಪದ್ಮಶ್ರೀ ಮತ್ತಿತರರು ಉಪಸ್ಥಿತರಿದ್ದರು.

## ವಕ್ಫ್ : ನೈಜ ವರದಿ ಸಂಗ್ರಹಿಸಲು ಬಿಜೆಪಿಯಿಂದ ಮೂರು ಸಮಿತಿ

**(1ನೇ ಪುಟದಿಂದ)** ಅವರಿದ್ದಾರೆ. ವಿ. ಸುನೀಲ್ ಕುಮಾರ್ ಸಂಚಾಲಕರು ಹಾಗೂ ಅಶ್ವಥ್ ನಾರಾಯಣ, ತಮ್ಮೇಶ್ ಗೌಡ ಹಾಗೂ ಅಂಬಿಕಾ ಹುಲಿನಾಯ್ಕರ್ ಸಂಯೋಜಕರಾಗಿದ್ದಾರೆ. ಇತ್ತೀಚಿಗೆ ರಾಜ್ಯಾದ್ಯಂತ ರೈತರು ಹಾಗೂ ಮಠಗಳ ಪಹಣಿಯಲ್ಲಿ ಸರ್ಕಾರದಿಂದ ವಕ್ಫ್ ಆಸ್ತಿ ಎಂದು ನಮೂದಿಸಿರುವುದರ ನೈಜ ವರದಿಯನ್ನು ಸಂಗ್ರಹಿಸಲು ಈ ಸಮಿತಿ ರಚಿಸಿರುವುದಾಗಿ ಬಿಜೆಪಿ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

## ಸುಪ್ರೀಂ ತೀರ್ಪು ಮಾದಿಗ ಸಮುದಾಯದ ಸಮಗ್ರ ಪ್ರಗತಿಗೆ ರಹದಾರಿ

**(1ನೇ ಪುಟದಿಂದ)** ಎಸ್ಸಿಗೆ ಶೇ. 3 ರಿಂದ 7 ಒಟ್ಟು 18 ರಿಂದ ಶೇ. 24 ಕ್ಕೆ ಎಸ್ಸಿ-ಎಸ್ಟಿ ಮೀಸಲಾತಿ ಪ್ರಮಾಣ ಏರಿಕೆಯಾಗಿದೆ. ಆದ್ದರಿಂದ ಸಾಮಾಜಿಕ, ಜಾತಿ ವ್ಯವಸ್ಥೆ, ಹಿಂದುಳಿದ ವರ್ಗದ ಜನರ ಕುರಿತು ಹೆಚ್ಚು ಕಾಳಜಿ ಹೊಂದಿರುವ ನಾಗಮೋಹನ್ ದಾಸ್ ನೇಮಕ ಅತ್ಯಂತ ಉತ್ತಮ ನಿರ್ಧಾರವಾಗಿದೆ ಎಂದರು.

ರಾಜ್ಯದೆಲ್ಲೆಡೆ ಮಾದಿಗ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿದ್ದು, ಕೆಲವು ಜಿಲ್ಲೆಗಳಲ್ಲಿ ಮಾದಿಗ ಹಾಗೂ ಛಲವಾದಿ ಸಮುದಾಯದವರು ಆದಿ ಕರ್ನಾಟಕ ಎಂದು ಗುರುತಿಸಿಕೊಂಡಿದ್ದು, ಗೊಂದಲ ಉಂಟು ಮಾಡಿದೆ. ಆದ್ದರಿಂದ ನಾಗಮೋಹನ್ ದಾಸ್ ಅವರು ಈ ವಿಷಯದಲ್ಲಿ ಆಳವಾದ ಅಧ್ಯಯನ ನಡೆಸಿ, ಮಾದಿಗ ಮತ್ತು ಅದರ ಉಪ ಜಾತಿಗಳಿನ್ನು ಗುರುತಿಸಿ, ನೊಂದ ಜನರಿಗೆ ಸಾಮಾಜಿಕ ನ್ಯಾಯ ಒದಗಿಸುವ ವಿಶ್ವಾಸ ತಮ್ಮದಾಗಿದೆ ಎಂದು ಹೇಳಿದರು.

2011 ರಲ್ಲಿ ಕೇಂದ್ರ ಸರ್ಕಾರ ನಡೆಸಿದ ಎಲ್.ಜಿ.ಹಾವನೂರ್, ನ್ಯಾಯಮೂರ್ತಿ ಸದಾಶಿವ, ಕಾಂತರಾಜ್ ಆಯೋಗಗಳ ವರದಿಗಳನ್ನು ಅಧ್ಯಯನ ನಡೆಸಿದರೆ ದತ್ತಾಂಶ ಮಾಹಿತಿ ದೊರೆಯಲಿದೆ. ಜೊತೆಗೆ ಒಳ ಮೀಸಲಾತಿ ಜಾರಿಗೆ ಇರುವ ಸಣ್ಣ ಪುಟ್ಟ ಅಡ್ಡಿಗಳನ್ನು ತಕ್ಷಣ ನಿವಾರಿಸಬಹುದು ಎಂದು ತಿಳಿಸಿದರು.

ಭಾರತದಲ್ಲೆ ಮೊದಲ ಬಾರಿಗೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸುವ ನಿರ್ಧಾರವನ್ನು ಅಂದು ಸಮಾಜ ಕಲ್ಯಾಣ ಸಚಿವನಾಗಿದ್ದ ಸಂದರ್ಭದಲ್ಲಿ ನಾನು ಹೆಚ್ಚು ಕಾಳಜಿಯಿಂದ ವರದಿ ತಯಾರಿಸಲಾಗಿತ್ತು. ಇದೇ ದೇಶದಲ್ಲಿಯೇ ಐತಿಹಾಸಿಕ ನಿರ್ಧಾರವಾಗಿದೆ ಎಂದು ಹೇಳಿದರು.

ಈ ನಿಟ್ಟಿನಲ್ಲಿ ಕಾಂತರಾಜ್ ಆಯೋಗ ನಡೆಸಿದ ಸಮೀಕ್ಷೆಯಲ್ಲಿ 1 ಲಕ್ಷದ 50 ಸಾವಿರ ಶಿಕ್ಷಕರು ಪಾಲ್ಗೊಂಡಿದ್ದರು. ತಹಶೀಲ್ದಾರ್, ಜಿಲ್ಲಾಧಿಕಾರಿಗಳು, ಐಎಎಸ್ ಅಧಿಕಾರಿಗಳು ಉಸ್ತುವಾರಿ ವಹಿಸಿಕೊಂಡಿದ್ದರು. ಇದಕ್ಕಾಗಿ ರಾಜ್ಯ ಸರ್ಕಾರ 180 ಕೋಟಿ ರೂ. ವೆಚ್ಚ ಮಾಡಿ ಅತ್ಯಂತ ವೈಜ್ಞಾನಿಕವಾಗಿ ವರದಿ ಸಿದ್ಧಪಡಿಸಿದೆ. ಪ್ರತಿ ಮನೆಗೂ ಭೇಟಿ ನೀಡಿ ಸಂಪೂರ್ಣ ಮಾಹಿತಿ ಸಂಗ್ರಹಿಸಿದೆ. ಈ ವರದಿಯಿಂದಾಗಿ ಎಲ್ಲಾ ವರ್ಗಗಳ ನೊಂದ ಜನರಿಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸಲು ಸಹಕಾರಿಯಾಗಲಿದೆ ಎಂದರು.

ಕಾಂತರಾಜ್ ಆಯೋಗ ಅತ್ಯಂತ ವೈಜ್ಞಾನಿಕವಾಗಿ ತಯಾರಿಸಿರುವ ವರದಿ ಕುರಿತು ಯಾವುದೇ ರೀತಿಯ ಟೀಕೆ, ಆರೋಪ, ಬೆದರಿಕೆ , ವಿರೋಧ ವ್ಯಕ್ತವಾದರೂ ಸಿದ್ಧರಾಮಯ್ಯ ಜಗ್ಗಬಾರದು. ವರದಿಯನ್ನು ಸಚಿವ ಸಂಪುಟದಲ್ಲಿ ಮಂಡಿಸಿ, ಚರ್ಚಿಸಿ ವರದಿಯನ್ನು ಬಹಿರಂಗಪಡಿಸಬೇಕು. ಬಳಿಕ ಸಣ್ಣಪುಟ್ಟ ಲೋಪದೋಷಗಳಿದ್ದರೆ ಸರಿಪಡಿಸಬಹುದು. ಈ ಮೂಲಕ ಸಾಮಾಜಿಕ ನ್ಯಾಯ ಕಲ್ಪಿಸಬೇಕೆಂದು ಆಗ್ರಹಿಸಿದರು.

ಅನಗತ್ಯ ಟೀಕೆ, ಆರೋಪ ಮಾಡುವುದು ಸರಿಯಲ್ಲ. ಸರ್ಕಾರದ ಅಡಿಯಲ್ಲಿ ಲಕ್ಷಕ್ಕೂ ಹೆಚ್ಚು ಸರ್ಕಾರಿ ನೌಕರರು, ಶಿಕ್ಷಕರು, ಜಿಲ್ಲಾಧಿಕಾರಿಗಳು, ತಹಶೀಲ್ದಾರ್‌ಗಳು ಸೇರಿದಂತೆ ಅನೇಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಶ್ರಮವನ್ನು ಗೌರವಿಸಬೇಕೆಂದರು.

ವರದಿ ಬಹಿರಂಗಗೊಂಡ ಬಳಿಕ ವಿರೋಧ ಮಾಡುವವರು ತಪ್ಪುಗಳನ್ನು ಗುರುತಿಸಿ ಹೇಳಲಿ. ಇಂತಹ ಪ್ರದೇಶಗಳಲ್ಲಿ ಸರ್ವೇ ಆಗಿಲ್ಲ ಎಂದು ಹೇಳಲಿ. ಆಗ ಅದು ಸತ್ಯವೇ ಆಗಿದ್ದರೆ ಆ ಪ್ರದೇಶಗಳಲ್ಲಿ ಮರು ಸಮೀಕ್ಷೆ ನಡೆಸಲು ಸರ್ಕಾರಕ್ಕೆ ಒತ್ತಡ ಹಾಕೋಣ. ಈ ಸಂಬಂಧ ನಾವೆಲ್ಲರೂ ಬೆಂಬಲವಾಗಿ ನಿಲ್ಲುತ್ತೇವೆ ಎಂದರು.

ಬಹಿರಂಗಕ್ಕೂ ಮುನ್ನವೇ ವಿರೋಧ ಮಾಡಿದರೆ ನಾವು ಸಹಿಸುವುದಿಲ್ಲ. ಅತ್ಯಂತ ವೈಜ್ಞಾನಿಕವಾಗಿ ತಯಾರಿಸಿರುವ ವರದಿ ಸ್ವೀಕಾರ, ಮಂಡನೆ, ಬಹಿರಂಗಗೊಳಿಸುವುದು ತುರ್ತು ಅಗತ್ಯವಿದೆ ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಶಾಸಕ ಕೆ.ಎಸ್. ಬಸವಂತಪ್ಪ, ಆಶ್ರಯ ಸಮಿತಿ ಸದಸ್ಯ ಕಣ್ಣಾಳ ಅಂಜಿನಪ್ಪ, ಎಸ್. ಮಲ್ಲಿಕಾರ್ಜುನ್, ಅಳಗವಾಡಿ ನಿಂಗಪ್ಪ, ಈರಣ್ಣ ಉಪಸ್ಥಿತರಿದ್ದರು.

**ಸೈಟ್ ಮಾರಾಟಕ್ಕೆ (KHB)**
ಕರ್ನಾಟಕ ಗೃಹ ಮಂಡಳಿ 40X60 ಉತ್ತರ, ಕಮರ್ಷಿಯಲ್ ಆಗುವಂತಹ, ಡಬಲ್ ರೋಡ್‌ಗೆ (84 ಲಕ್ಷ)
ಕಿರಣ್ ಬೂಸ್ನೂರ್ (ಏಜೆಂಟ್)
98440-63409, 97315-63409

**ಕಮರ್ಷಿಯಲ್ ಸೈಟುಗಳು ಮಾರಾಟಕ್ಕಿವೆ**
22 1/2x40, 22 1/2x40 South ಅಕ್ಕ-ಪಕ್ಕ, ಭಗೀರಥ ಸರ್ಕಲ್ ಹತ್ತಿರ 25x50 South ನೂತನ ಕಾಲೇಜ್ ರೋಡಿಗಿದೆ.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಕನ್‌ವೆನ್ಷನ್ ಹಾಲ್ ಹಿಂಭಾಗ ಹೊಸ ಬಡಾವಣೆಗಳಲ್ಲಿ 30x50 ಉತ್ತರ, 30x40 ಪಶ್ಚಿಮ, 30x5 ಪೂರ್ವ, 30x50 ಉತ್ತರ-ಪಶ್ಚಿಮ ಕಾರ್ನರ್.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟ್, ಮನೆ, ಜಮೀನು**
ಅರ್ಧ (1/2%) ಪರ್ಸೆಂಟ್ ಕಮಿಷನ್‌ಗೆ ಕೊಡಿಸುತ್ತೇನೆ, ಮಾರಿಸುತ್ತೇನೆ.
ಕಿರಣ್ ಬೂಸ್ನೂರ್ (ಏಜೆಂಟ್)
98440 63409, 97315 63409
(ದಯವಿಟ್ಟು ನಿಮ್ಮ ಸ್ನೇಹಿತರಿಗೆ. ಬಂಧು-ಬಳಗದವರಿಗೆ ತಿಳಿಸಿರಿ)

**ಸೈಟುಗಳು ಮಾರಾಟಕ್ಕಿವೆ**
ಶಾಮನೂರು ಹತ್ತಿರ ಡಾಲರ್ಸ್‌ಕಾಲೋನಿಯಲ್ಲಿ 40x60, 40x60 North ಅಕ್ಕ-ಪಕ್ಕ, 40 ಅಡಿ ರೋಡಿಗಿದೆ, 30x44 North, 30x44 North, 30x50 South, 30x40 South, 30x40 North.
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**FOR RENT**
Owner Name : Dakshayini S.N. 1BHK (20x50) For Rent First floor and 2 BHK for rent 3rd Floor, Face : Poorva, KB Extn. 2nd main, 2nd Cross, Near BJP Office, Davanagere. Owner Number :
77605 34680

**ಸೈಟ್, ಮನೆ ಮಾರಾಟಕ್ಕಿದೆ**
ಡಾಲರ್ಸ್ ಕಾಲೋನಿ ಮನೆ (2400 Sq.ft) 30x50, ಪಶ್ಚಿಮ, ಡಾಲರ್ಸ್ ಕಾಲೋನಿ ಸೈಟ್ 40x51
91481 25125

**ಸೈಟು ಮಾರಾಟಕ್ಕಿದೆ**
ಭೂಮಿಕಾ ನಗರದಲ್ಲಿ ದಕ್ಷಿಣಾಭಿಮುಖವಾಗಿರುವ ಮತ್ತು ಉದ್ಯಾನವನ ಎದುರಿಗೆ ಇರುವ 34 x 73 ಸೈಟು ಮಾರಾಟಕ್ಕಿದೆ. ಸಂಪರ್ಕಿಸಿ
94485 89727

**ಮನೆ ಬಾಡಿಗೆಗೆ ಇದೆ**
ವಿವೇಕಾನಂದ ಬಡಾವಣೆಯಲ್ಲಿ ಡಬಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ಸಂಪರ್ಕಿಸಿ :
99456 13469

**ಆಟೋ ಮಾರಾಟಕ್ಕಿದೆ**
2023 ಸೆಪ್ಟೆಂಬರ್ ತಿಂಗಳಿನ ಬಜಾಜ್ ಮ್ಯಾಕ್ಸಿಮಾ Z ಆಟೋ ಮಾರಾಟಕ್ಕಿದೆ. (16,500 ಕಿಮೀ) ಆಸಕ್ತರು ಸಂಪರ್ಕಿಸಿ :
ಸತೀಶ್-82772 91873

**HOUSE TO-LET**
with three bedrooms in the ground floor near swimming pool in MC Colony, 'B' block Davangere.
99721 02927

**ಕೆಲಸ ಖಾಲಿ ಇದೆ**
ಮೆಡಿಕಲ್ ಶಾಪ್ ನಲ್ಲಿ ಕೆಲಸ ಖಾಲಿ ಇದೆ. (ಹುಡುಗರಿಗೆ ಮಾತ್ರ) ಕರೆ ಮಾಡಿ:
74066 59695, 79751 77934

**ಮನೆ ಬಾಡಿಗೆಗೆ ಇದೆ**
ಮೊದಲನೇ ಮಹಡಿ, 2 BHK ಜೆ.ಹೆಚ್. ಪಟೇಲ್ ಬಡಾವಣೆ 'ಸಿ' ಬ್ಲಾಕ್, 2ನೇ ಮೇನ್ ಶಾಮನೂರು.
98863 84948

**ಮನೆಗಳು ಮಾರಾಟಕ್ಕಿವೆ**
ಭಗೀರಥ ಸರ್ಕಲ್ ನಿಟ್ಟುವಳ್ಳಿ ದಾವಣಗೆರೆ ಹತ್ತಿರ ಇರುವ 20x30 ಸೈಜಿನ ಮನೆಗಳು ಮಾರಾಟಕ್ಕೆ ಇವೆ. ಸಂಪರ್ಕಿಸಿ.
94484 39639

**ಬೇಕಾಗಿದ್ದಾರೆ**
ಕೌಂಟರ್‌ನಲ್ಲಿ ಮಾರಾಟ ಮಾಡುವುದಕ್ಕೆ (Preferbly Female) ಮತ್ತೆ ಡೆಲಿವರಿ ಸಿಬ್ಬಂದಿ. ಸಮಯ : 6Am ರಿಂದ 3Pm ಅಥವಾ 3 Pm ರಿಂದ 9Pm. ವೇತನ : 9000/- ತಿಂಗಳು, ಅಂಗವಿಕಲ ಅಭ್ಯರ್ತಿಗೆ 12000 / ತಿಂಗಳು. Contact : Down to Earth
96327 99723

**ಮಳಿಗೆಗಳು ಬಾಡಿಗೆಗೆ ಇವೆ**
ಗಡಿಯಾರ ಕಂಬದ ಪಕ್ಕ, ನೆಲ ಮಳಿಗೆ ಮತ್ತು 1ನೇ ಮಹಡಿ ಮಳಿಗೆಗಳು ಬಾಡಿಗೆಗೆ ಇವೆ. ಅಳತೆ 11x50 ಅಡಿ
ವಿ.ಸೂ. : ಎರಡು ಮಳಿಗೆಗಳು ಒಬ್ಬರಿಗೇ ಬೇಕಾದವರು ಸಂಪರ್ಕಿಸಿ :
93422 18596

**ಸೈಟು ಮಾರಾಟಕ್ಕಿದೆ**
ಎಂ.ಸಿ.ಸಿ. ಬಿ ಬ್ಲಾಕ್‌ನ ಹಾರ್ಟ್ ಹಾಸ್ಪಿಟಲ್ ರಸ್ತೆಗೆ ಪೂರ್ವ ಮುಖವಾಗಿ 47x60 ಅಡಿ ಅಳತೆ ಇದ್ದು, ಸ್ವತ್ತಿನ ದಾಖಲೆಯಲ್ಲಿ ಕಡಿಮೆ ಇರುತ್ತದೆ. ದಾಖಲೆಯಲ್ಲಿ ತೋರಿಸಿದ ಅಳತೆಗೆ ವ್ಯಾಪಾರಕ್ಕೆ ಕೊಡಲಾಗುತ್ತದೆ.
Mohan Real Estate Agencies
97424 34049

**ಮನೆ ಮಾರಾಟಕ್ಕಿದೆ**
ಸಿದ್ದಗಂಗಾ ಬಡಾವಣೆ, ಎ ಬ್ಲಾಕ್‌ನಲ್ಲಿ 30x33 ಅಡಿ ಅಳತೆ, ನೆಲಮಹಡಿ ಮತ್ತು 1ನೇ ಮಹಡಿ, 2 ಬೆಡ್ ರೂಂ ಇರುವ ಮನೆ ಮತ್ತು ಸಿಂಗಲ್ ರೂಂ ಮಾರಾಟಕ್ಕಿದೆ. ಸಂಪರ್ಕಿಸಿ :
94820 94979

**ರಿಸೆಪ್ಷನಿಸ್ಟ್ ಬೇಕಾಗಿದ್ದಾರೆ**
ಶಾರ್ವರಿ ಹೋಮಿಯೋಪತಿ ಚಿಕಿತ್ಸಾಲಯ ಎಂಸಿಸಿ 'ಎ' ಬ್ಲಾಕ್, ದಾವಣಗೆರೆ ಇಲ್ಲಿ ರಿಸೆಪ್ಷನಿಸ್ಟ್ ಕೆಲಸಕ್ಕೆ ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಕನಿಷ್ಠ ವಿದ್ಯಾರ್ಹತೆ : ಪಿಯುಸಿ
99025 93986

**ನಿವೇಶನ ಬೇಕಾಗಿರುತ್ತದೆ**
ದಾವಣಗೆರೆ ನಗರದ ಸುತ್ತಮುತ್ತ (ಇ-ಸ್ವತ್ತ / ಇ-ಆಸ್ತಿ ಆಗಿರುವ) 12 ಚದುರದಿಂದ 15 ನಿವೇಶನ ಕ್ರಯಕ್ಕೆ ಬೇಕಾಗಿರುತ್ತದೆ.
96867 41320

**WANTED**
Boys & Girls required for sales executive job at Food Mart Supermarket. Quli : PUC , Any Degree
98864 63531

**WANTED JOBS**
We are hiring telecallers females only. Basic Salary & Incentives. Quali : PUC and Any Degree. Location : Dvg. Walk In Interview 16.11.2024 to 22.11.2024
99001 57398, 90663 32625

**WANTED**
Require Candidate for data entry work with basic knowledge of tally and excel.
POOJA HARDWARES
Opp. Aruna Theatre, P.B. Road, Davangere.
81237 99830

**ಬೇಕಾಗಿದ್ದಾರೆ**
ಡಾಟಾ ಎಂಟ್ರಿ ಕೆಲಸಕ್ಕೆ ಕಂಪ್ಯೂಟರ್ ಬೇಸಿಕ್, ಟ್ಯಾಲಿ & ಎಕ್ಸೆಲ್ ಅನುಭವವಿರುವ ಅಭ್ಯರ್ಥಿಗಳು ಬೇಕಾಗಿದ್ದಾರೆ.
ಪೂಜಾ ಹಾರ್ಡ್‌ವೇರ್
ಅರುಣ ಟಾಕೀಸ್ ಎದುರು, ಪಿಬಿ ರಸ್ತೆ, ದಾವಣಗೆರೆ.
81237 99830

**ಕೆಲಸಕ್ಕೆ ಬೇಕಾಗಿದ್ದಾರೆ**
**ಎಸ್.ಆರ್. ಕನ್‌ಸ್ಟ್ರಕ್ಷನ್ಸ್**
ಯಾವುದೇ ಡಿಗ್ರಿ ಆಗಿರುವ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು ಮತ್ತು ಕಂಪ್ಯೂಟರ್ ಜ್ಞಾನವಿರುವ ಲೇಡಿಸ್ ಕೆಲಸಕ್ಕೆ ಬೇಕಾಗಿದ್ದಾರೆ.
ಸಮಯ : ಬೆ.: 10.00 ರಿಂದ ಸಂ. : 6.00
ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
76769 99539

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ. ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**ಸೈಟ್ ಮಾರಾಟಕ್ಕಿದೆ**
ಪಿ.ಜೆ. ಬಡಾವಣೆ, 8ನೇ ಮೇನ್, 8ನೇ ಕ್ರಾಸ್ # 402, ಅಳತೆ 22x100 ಅಡಿ, ಉತ್ತರಾಭಿ ಮುಖ
96117 94684
86187 07118

**ಬೇಕಾಗಿದ್ದಾರೆ**
ನಮ್ಮ ಅಂಗಡಿಯಲ್ಲಿ ಸೇಲ್ಸ್ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
ಆನಂದ ಹಾರ್ಡ್‌ವೇರ್ಸ್ & ಪೇಂಟ್ಸ್
ಮಂಡಿಪೇಟೆ, ದಾವಣಗೆರೆ.

**ಬಾಡಿಗೆಗೆ ಸಂಪರ್ಕಿಸಿ**
ಲಹರಿ ಆಟೋಮೋಟಿವ್ಸ್
# 856/17, ಸಬ್ ರಿಜಿಸ್ಟರ್ ಆಫೀಸ್ ಎದುರುಗಡೆ, ಪಿಬಿ ರಸ್ತೆ, ದಾವಣಗೆರೆ-2. ಕೆಳಗಿನ ಮಹಡಿ 1500 ಅಡಿಗಳು, 1ನೇ ಮಹಡಿ 3500 ಅಡಿಗಳು, ಖಾಲಿ ಜಾಗ 4400 ಚ.ಅ., ಸೈಟ್ ಸೈಜ್ 50x88
98444 20009, 90711 19996

**WANTED TEACHERS**
ANY DEGREE WITH EXCELLENT COMMUNI-CATION IN ENGLISH. DAVANAGERE
9964110736

**ಮನೆ ಬಾಡಿಗೆಗೆ ಇದೆ**
2BHK 2nd Floor Rs. 7000/- 3rd Main, 16th Cross, KTJ Nagara
90663 45346

**WANTED**
Kitchen Supervisor
• Hotel Manager
• Receptionist • Stewards
• Marketing Executive
SUBMIT YOUR CV :
97421 70194

**ರಕ್ತ ದಾನ ಶ್ರೇಷ್ಠ ದಾನ**

**ಮನೆ ಮಾರಾಟಕ್ಕಿದೆ**
# 356/10C ಸವಣೂರು ಪ್ಲಾಜಾ ಹಿಂಭಾಗ PB ರೋಡ್, ದಾವಣಗೆರೆ 60+55/2x40 = 230 ಅಡಿ ವಿಸ್ತೀರ್ಣದಲ್ಲಿ ಕಟ್ಟಿರುವ ಗ್ರೌಂಡ್ ಫ್ಲೋರ್ ಮನೆ ಮಾರಾಟಕ್ಕಿದೆ.
97422 61666, 94498 96502

**ಶ್ರೀ ಅಂಜನಾದ್ರಿ ಜ್ಯೋತಿಷ್ಯ ಕೇಂದ್ರ**
ಕನ್ನಡ, ತೆಲುಗು, ಹಿಂದಿ ಭಾಷೆಗಳಲ್ಲಿ ಭವಿಷ್ಯ ಮತ್ತು ಸ್ತ್ರೀ-ಪುರುಷ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಹೇಳುತ್ತಾರೆ.
ಪಂಡಿತ್ ಶ್ರೀ ಲಕ್ಷ್ಮಿಕಾಂತ್ ಗುರೂಜಿ
(ಆಂಧ್ರಪ್ರದೇಶ), ಲಾಯರ್ ರಸ್ತೆ, ದಾವಣಗೆರೆ.
9740064163

**WANTED**
Fluency in English with minimum 5 years of teaching experience.
B.A. B.Ed, in Histroy - 4
B.Sc B.Ed - 2
97435 16817, 97405 43160

**ಬೇಕಾಗಿದ್ದಾರೆ**
ಶಾಲೆಗೆ ಆಯಾ, ಜವಾನರು ಬೇಕಾಗಿದ್ದಾರೆ.
ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆ
ದೇವರಾಜ ಅರಸು ಬಡಾವಣೆ, ಸಿ ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆ, ದಾವಣಗೆರೆ.
99640 17729

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಶ್ರೀ ಸಾಯಿ ಫೈನಾನ್ಸ್ (ರಿ)**
ನಮ್ಮಲ್ಲಿ ವ್ಯಾಪಾರಿಗಳಿಗೆ ಫೈನಾನ್ಸ್ ನೀಡಲಾಗುವುದು (ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್, ಎಗ್‌ರೈಸ್ ಸೆಂಟರ್ ಇತ್ಯಾದಿಗಳಿಗೆ ಫೈನಾನ್ಸ್ ನೀಡಲಾಗುವುದು
ಶಿವಪ್ಪಯ್ಯ ಸರ್ಕಲ್, ದಾವಣಗೆರೆ..
96860 22969

**For Sale City corporation No.165, North facing 20x30 Vacant plot clear titles at Ashok Nagar, Eragunta Village for Rs.12,00,000/-**
9916310226 / 9620253180

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು, ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಆ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

**WANTED**
**DAVANGERE**
* Marketing Executive
* Ladies Accountant
* Godown Incharge
2 to 3 years experience
63620 23451, 97434 37003

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಕೆಲಸಕ್ಕೆ ಬೇಕಾಗಿದ್ದಾರೆ**
ಶ್ರೀ ಸಾಯಿ ಎಗ್ ಸೆಂಟರ್
ಶಿವಪ್ಪಯ್ಯ ಸರ್ಕಲ್, ದಾವಣಗೆರೆ. ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಉತ್ತೀರ್ಣ.
96860 22969

**ಸೈಟುಗಳು ಮಾರಾಟಕ್ಕಿವೆ**
ಪಂಚಾಯಿತಿ ಡೋರ್ ನಂಬರ್, ದೂಡಾ ಫೈನಲ್ ಅಪ್ರೂವಲ್ ಸೈಟ್, ಕಡಿಮೆ ದರದಲ್ಲಿ ಸಿಗುತ್ತವೆ. 1 ಅಡಿಗೆ 980 ರೂಪಾಯಿಗೆ ಸಿಗಲಿವೆ.
86183 43463
86187 28546

**ಕೆಲಸಕ್ಕೆ ಬೇಕಾಗಿದ್ದಾರೆ**
ಶಿವಸಂಗಮ ಚಿಟ್ಸ್ ಪ್ರೈ.ಲಿ. ಶಿವಸಂಗಮ ಫೈನಾನ್ಸ್ (ರಿ)
ದಾವಣಗೆರೆ ಶಾಖೆಯಲ್ಲಿ ಮಾರ್ಕೆಟಿಂಗ್ & ರಿಕವರಿ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಸ್ಥಳ : ಡಾ. ಬಿ.ಆರ್. ಶಿವಶಂಕರ ನಾಗರತ್ನಮ್ಮ ಸಂಕೀರ್ಣ, ಪಿ.ಜೆ. ಬಡಾವಣೆ, 4ನೇ ಮೇನ್, ರಾಮ್ ಅಂಡ್ ಕೋ ಹತ್ತಿರ, ದಾವಣಗೆರೆ.
73533 29440, 81972 20933

**ಜಮೀನು ಮಾರಾಟಕ್ಕಿದೆ**
ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲ್ಲೂಕು ದುಗ್ಗಾವತಿ ಗ್ರಾಮಕ್ಕೆ ಸೇರಿದ ಹೈದ್ರಾಬಾದ್ ಟು ಮಂಗಳೂರು ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ವಾಣಿಜ್ಯ ಉಪಯೋಗಕ್ಕೆ ಅನುಕೂಲವಾದ 2 ಎಕರೆ 90 ಸೆಂಟ್ಸ್ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ :
99024 90165

## ನಗರದ ಗ್ಲಾಸ್ ಹೌಸ್‌ನಲ್ಲಿ ಇಂದು ಸಾಂಸ್ಕೃತಿಕ ಕಾರ್ಯಕ್ರಮ

ದಾವಣಗೆರೆ ಜಿಲ್ಲಾಡಳಿತ ವತಿಯಿಂದ 69ನೇ ಕರ್ನಾಟಕ ರಾಜ್ಯೋತ್ಸವ ಪ್ರಯುಕ್ತ ಇಂದು ಮತ್ತು ನಾಳೆ ಸಂಜೆ 5.30ಕ್ಕೆ ಗಾಜಿನ ಮನೆಯಲ್ಲಿ ಸುವರ್ಣ ಸಂಭ್ರಮ ನಡೆಯಲಿದೆ. ಇಂದು ಯುಗಧರ್ಮ ರಾಮಣ್ಣ ಅವರಿಂದ ಜಾನಪದ ಗೀತೆಗಳು, ಪಂಡಿತ್ ರವೀಂದ್ರ ಅವರಿಂದ ಹಿಂದೂಸ್ತಾನಿ ಸಂಗೀತ, ಪಲ್ಲವಿ ಮತ್ತು ಸಂಗಡಿಗರಿಂದ ಮಹಿಳಾ ವೀರಗಾಸೆ ಜರುಗಲಿದೆ.

ನಾಳೆ ಭಾನುವಾರ ಮಹೇಶ್ ಕುಮಾರ್ ಮತ್ತು ತಂಡದವರಿಂದ ಚಂಡೆವಾದನ, ಬಸವ ಕಲಾ ಲೋಕ ಅವರಿಂದ ಸಂಗೀತ ಕಾರ್ಯಕ್ರಮ, ಪಂಡಿತ್ ಎಂ.ಎಸ್ ಪ್ರದೀಪ್ ಕುಮಾರ್, ಇವರಿಂದ ಸಿತಾರ್ ವಾದನ ನಡೆಯಲಿದೆ. ದಿನಾಂಕ 23 ರಂದು ರಾಮಚಂದ್ರ ಹಡಪದ ಇವರಿಂದ ಸಂಗೀತ ಕಾರ್ಯ ಕ್ರಮ, ಸಂಕರ್ಷಣ ನೃತ್ಯ ಶಾಲೆಯಿಂದ ನೃತ್ಯ ರೂಪಕ ಏರ್ಪಾಡಾಗಿದೆ. ಇದೇ ದಿನಾಂಕ 24 ರಂದು ರಮೇಶ್‌ನಾಥ್ ಕದ್ರಿ ಇವರಿಂದ ಸ್ಯಾಕ್ಸೊಫೋನ್ ವಾದನ, ನೂಪುರ ಕಲಾ ಸಂಸ್ಥೆಯವರಿಂದ ನೃತ್ಯ ರೂಪಕ ನಡೆಯಲಿದೆ.

## ಪಿಜೆ ಬಡಾವಣೆಯ ವಕ್ಫ್ ಆಸ್ತಿ ವಿವಾದ : ನಗರದಲ್ಲಿ ಇಂದು ಸಭೆ

ಪಿ.ಜೆ. ಬಡಾವಣೆಯ ಶ್ರೀರಾಮ ದೇವಸ್ಥಾನದ ಮುಂಭಾಗದಲ್ಲಿ ಇಂದು ಸಂಜೆ 6 ಗಂಟೆಗೆ ನಾಗರಿಕರ ಹಿತರಕ್ಷಣ ಸಮಿತಿ ವತಿಯಿಂದ ಪಿಜೆ ಬಡಾವಣೆಯ ವಕ್ಫ್ ಆಸ್ತಿಯ ವಿವಾದ ಹಾಗೂ ಪಿ.ಜೆ. ಬಡಾವಣೆಯ ಕುಂದು ಕೊರತೆ ಸಭೆ ಕರೆಯಲಾಗಿದೆ. ಈ ಸಭೆಯ ಉದ್ಘಾಟನೆಯನ್ನು ಪಾಲಿಕೆಯ ಮಹಾಪೌರ ಕೆ.ಚಮನ್ ಸಾಬ್ ಉದ್ಘಾಟಿಸಲಿದ್ದು, ಉಪ ಮಹಾಪೌರರಾದ ಸೋಗಿ ಶಾಂತ್ ಕುಮಾರ್, ದಾವಣಗೆರೆ-ಹರಿಹರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ತಹಶೀಲ್ದಾರ್ ಡಾ. ಎಂ.ಬಿ. ಅಶ್ವಥ್, ಪಾಲಿಕೆಯ ಉಪ ಆಯುಕ್ತರಾದ ಎಸ್.ಲಕ್ಷ್ಮಿ ಅವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸು ವರು. ಸಮಾರಂಭದ ಅಧ್ಯಕ್ಷತೆ ವಾರ್ಡ್ ಅಧ್ಯಕ್ಷ ಮಧು ಪವಾರ್ ವಹಿಸಿಕೊಳ್ಳಲಿದ್ದಾರೆ.

# ಗೋಪುರ, ನಾಡನ್ನು ಸುಭೀಕ್ಷಗೊಳಿಸುವಂತಹ ಅಭಿವೃದ್ಧಿಯ ಸಂಕೇತ




**ನಗರದ ಕೆ.ಆರ್. ಮಾರುಕಟ್ಟೆಯ ಶ್ರೀ ಸಾಕ್ಷಿ ವರಸಿದ್ದಿ ವಿನಾಯಕ ದೇವಸ್ಥಾನದ ಗೋಪುರಕ್ಕೆ ಕಳಸ ಪುನಃ ಸ್ಥಾಪನೆ ಕಾರ್ಯಕ್ರಮದಲ್ಲಿ ಆವರಗೊಳ್ಳದ ಶ್ರೀಗಳ ವಿಶ್ಲೇಷಣೆ**

ದಾವಣಗೆರೆ, ನ. 15- ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಶ್ರೀ ಸಾಕ್ಷಿ ವರಸಿದ್ದಿ ವಿನಾಯಕ ಸ್ವಾಮಿ ನೆಲೆ ನಿಂತು 34 ವರ್ಷಗಳಾಗಿವೆ. 34ನೇ ವರ್ಷದ ಸ್ವಾಮಿಯ ಸಂಕಲ್ಪ ಮತ್ತು ಇಚ್ಛೆಯ ಮೇರೆಗೆ ಇಂದು ಗೋಪುರಕ್ಕೆ ಪುನಃ ಕಳಸ ಸ್ಥಾಪನಾ ಅಂಗವಾಗಿ ಪೂಜಾ ಕಾರ್ಯಗಳು, ರುದ್ರಾಭಿಷೇಕ, ಹೋಮ, ಹವನಾದಿ ಧಾರ್ಮಿಕ ಕಾರ್ಯಕ್ರಮಗಳು ಅಚ್ಚುಕಟ್ಟಾಗಿ ನಡೆದಿವೆ ಎಂದು ಆವರಗೊಳ್ಳ ಪುರವರ್ಗ ಹಿರೇಮಠದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ನಗರದ ಕೆ.ಆರ್.ಮಾರುಕಟ್ಟೆಯಲ್ಲಿರುವ ಶ್ರೀ ಸಾಕ್ಷಿ ವರಸಿದ್ದಿ ವಿನಾಯಕ ಸ್ವಾಮಿ ಸೇವಾ ಸಮಿತಿಯಿಂದ ವಿನಾಯಕ ಸ್ವಾಮಿ ದೇವಸ್ಥಾನದ ಗೋಪುರದ ಪುನಃ ಸ್ಥಾಪನಾ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಎಷ್ಟೇ ಸಾಹುಕಾರ, ದೊಡ್ಡ ಮನುಷ್ಯ ಇದ್ದರೂ ಕೂಡಾ ತಮ್ಮ ಮನೆಗಳ ಮೇಲೆ ಕಳಸವನ್ನು ಇಡಲ್ಲ. ಏಕೆಂದರೆ ಅದರ ಸಾಮರ್ಥ್ಯವನ್ನು ಸಹಿಸಿಕೊಳ್ಳುವಂತಹ ಶಕ್ತಿ ಯಾವ ನರಮಾನವನಿಗೂ ಇರುವುದಿಲ್ಲ. ಅಂತಹ ಶಕ್ತಿ ಕಳಸದಲ್ಲಿದೆ. ದೇವಸ್ಥಾನದ ಮೇಲೆ ಏಕೆ ಕಳಸ ಸ್ಥಾಪನೆ ಮಾಡಬೇಕು. ಧಾರ್ಮಿಕ ನೆಲೆಗಟ್ಟುಗಳ ಕೇಂದ್ರ ಬಿಂದು ಸ್ಥಳವಾಗಿರುವ ದೇವಸ್ಥಾನದ ಗೋಪುರ ಗಳನ್ನು ಕಟ್ಟಬೇಕು. ಗೋಪುರ ಎಂದರೆ ಕೀರ್ತಿಯ ಸಂಕೇತ. ಆ ನಾಡನ್ನು ಸುಭೀಕ್ಷಗೊಳಿಸುವಂತಹ ಅಭಿವೃದ್ಧಿಯ ಸಂಕೇತ. ಗೋಪುರದಲ್ಲಿ ಶಿವ - ಪಾರ್ವತಿ ಸೇರಿದಂತೆ ಎಲ್ಲಾ ಪರಿವಾರದ ದೇವತೆಗಳನ್ನು ದೇವಸ್ಥಾನದ ಗೋಪುರದ ಚಿತ್ತಾರ ಮೂಡಿಸುತ್ತೇವೆ. ಆ ಎಲ್ಲಾ ದೈವತಾ ಅನುಗ್ರಹ ಸಾಕ್ಷಿಭೂತವಾಗಿ ಆ ಗೋಪುರದಲ್ಲಿ ಮಿಲನವಾಗುವಂತಹದ್ದಾಗುತ್ತದೆ. ಈ ಹಿನ್ನಲೆಯಲ್ಲಿಂದು ಸ್ವಾಮಿ ಗೋಪುರಕ್ಕೆ ಕಳಸವನ್ನು ಪುನಃ ಸ್ಥಾಪನೆ ಮಾಡಲಾಗುತ್ತಿದೆ ಎಂದರು.

ಕೇವಲ ಒಂದು ವರ್ಷವಲ್ಲ, ಯಾವಾಗಲೂ ಜೀವನ ಪರ್ಯಾಂತ ಈ ದೇವಸ್ಥಾನ ಇರುವ ತನಕವು ಈ ಕಳಸ ಇರುವ ತನಕವೂ ಯಾರು ಭಕ್ತರು ಬಂದು ಕಳಸಕ್ಕೆ ಕೈ ಮುಗಿತಾರೋ ಅವರೆಲ್ಲರಿಗೂ ಕೂಡಾ ಬ್ರಹ್ಮ, ವಿಷ್ಣು, ಮಹೇಶ್ವರರ ದರ್ಶನ ದಿವ್ಯ ಅನುಗ್ರಹವಾಗುವುದು. ದೇವತೆಗಳು ಅಡಕವಾಗಿರುವ ಈ ದೇವಸ್ಥಾನದ ಮೇಲಿರುವ ಕಳಸವನ್ನು ಯಾರು ದರ್ಶನ ಮಾಡುತ್ತಾರೋ ಅವರಿಗೆ ದೇವತೆಗಳ ಕಾರುಣ್ಯದ ಪ್ರಾಪ್ತಿಯಾಗುವುದು. ನಾಡಿನಲ್ಲಿ ರೈತರಿಗೆ ಉತ್ತಮ ಮಳೆ ಬೆಳೆಯಾಗಲಿ, ವರ್ತಕರಿಗೆ ವ್ಯಾಪಾರ ಅಭಿವೃದ್ಧಿಯಾಗಲಿ ಎಂದು ತಿಳಿಸಿದರು.

ಪುರೋಹಿತರಾದ ವೀರಯ್ಯ ಸ್ವಾಮಿ, ವಿನಾಯಕ ಸ್ವಾಮಿ, ನಿರಂಜನ ಸ್ವಾಮಿ, ರುದ್ರಪ್ರಸಾದ ಸ್ವಾಮಿ ಪೂಜಾ ಕಾರ್ಯಗಳನ್ನು ನೆರವೇರಿಸಿದರು.

ಭಕ್ತಿಸೇವೆಯನ್ನು ಲಿಂ. ಸಂಶಿ ವೀರಪ್ಪ, ಲಿಂ. ಸಂಶಿ ಕರಿಬಸಮ್ಮ ಸ್ಮರಣಾರ್ಥ ಸಂಶಿ ಶಂಭುಲಿಂಗಪ್ಪ ಪರಿವಾರದವರು ವಹಿಸಿಕೊಂಡಿದ್ದರು.

ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಅಧ್ಯಕ್ಷ ಐರಣಿ ಬಕ್ಕೇಶ್, ಉಪಾಧ್ಯಕ್ಷ ಹನುಮಂತಪ್ಪ, ಕಾರ್ಯದರ್ಶಿ ಬಾಳೆಎಲೆ ರುದ್ರೇಶ್, ರಾಜಣ್ಣ, ಬಾಬಣ್ಣ, ಕರಿಬಸಪ್ಪ, ಜನತಾವಾಣಿ ಪ್ರತಿನಿಧಿ ಜೆ.ಎಸ್.ವಿರುಪಾಕ್ಷಪ್ಪ, ಮುರುಗೇಶ, ಆರ್.ಬಿ.ರವಿಕುಮಾರ, ಲಂಬಿ ಮುರುಗೇಶ್, ಡಿಟಿಎನ್ ವೀರಭದ್ರಯ್ಯ, ಮಾಲತೇಶ್, ನಾಗರಾಜ್, ಶಿವಯೋಗಿ ಹತ್ತಿಕಾಳು ಸೇರಿದಂತೆ ಇತರರು ಭಾಗವಹಿಸಿದ್ದರು.

# 'ಬಿಲ್ಡ್‌ಮ್ಯಾಟ್' ಕಟ್ಟಡ ಸಾಮಗ್ರಿಗಳ ವಸ್ತುಪ್ರದರ್ಶನಕ್ಕೆ ಎಸ್ಸೆಸ್ ಚಾಲನೆ



ದಾವಣಗೆರೆ, ನ. 15- ಪೋರಂ ಆಫ್ ಪ್ರಾಕ್ಟೀಸಿಂಗ್ ಆರ್ಕಿಟೆಕ್ಟ್ ಸಿವಿಲ್ ಇಂಜಿನಿಯರ್ಸ್ ಮತ್ತು ಬೆಂಗಳೂರಿನ ಯುಎಸ್ ಕಮ್ಯುನಿಕೇಷನ್ ಸಂಯುಕ್ತಾಶ್ರಯದಲ್ಲಿ ನಗರದ ಬಾಲಕರ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಆಯೋಜಿಸಲಾಗಿರುವ 'ಬಿಲ್ಡ್ ಮ್ಯಾಟ್- ಎಕ್ಸ್‌ಪೋ' ಕಟ್ಟಡ ಸಾಮಗ್ರಿಗಳ ಇಂಟೀರಿಯರ್, ಎಕ್ಸ್‌ಟೀರಿಯರ್ ಗೃಹಾಲಂಕಾರ ಮತ್ತು ಫರ್ನಿಚರ್ಸ್ ವಸ್ತು ಪ್ರದರ್ಶನ ಮತ್ತು ಮಾರಾಟ ಕಾರ್ಯಕ್ರಮಕ್ಕೆ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಚಾಲನೆ ನೀಡಿದರು.

ಇಂದು ಆರಂಭಗೊಂಡ 'ಬಿಲ್ಡ್‌ಮ್ಯಾಟ್' ಪ್ರದರ್ಶನ ಮತ್ತು ಮಾರಾಟವು ನಾಡಿದ್ದು ದಿನಾಂಕ 17 ರವರೆಗೆ ನಡೆಯಲಿದ್ದು, ಪ್ರದರ್ಶನದಲ್ಲಿ 90 ಮಳಿಗೆಗಳಲ್ಲಿ ಆಧುನಿಕ ನವೀಕೃತ ಕಟ್ಟಡ ಸಾಮಗ್ರಿಗಳನ್ನು ಪ್ರದರ್ಶನ ಮತ್ತು ಮಾರಾಟಕ್ಕೆ ಇಡಲಾಗಿದೆ. ಒಂದೇ ಸೂರಿನಡಿ ಮನೆ ಸೇರಿದಂತೆ ಇತರೆ ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಪ್ಲೇವುಡ್, ಜಲ್ಲಿ ಕಲ್ಲು, ಬಣ್ಣ, ಮಾರ್ಬಲ್ಸ್, ಕಬ್ಬಿಣ, ಸಿಮೆಂಟ್, ಆತ್ಯಾಕರ್ಷಕ ಬಾಗಿಲು, ಕಿಟಕಿ, ಅಲ್ಯೂಮಿನಿಯಂ ಕಾಂಪೋಜಿಟ್ ಪ್ಯಾನೆಲ್, ಸೋಲಾರ್ ವಿದ್ಯುತ್ ಉಪಕರಣಗಳು, ಅತ್ಯಾಧುನಿಕ ರೂಫಿಂಗ್, ಟೈಲ್ಸ್ ಸೇರಿದಂತೆ ವಿವಿಧ ಸಾಮಗ್ರಿಗಳನ್ನು ಪ್ರದರ್ಶನಕ್ಕಿಡಲಾಗಿದೆ.

ಮನೆ ಕಟ್ಟಲು ಅಗತ್ಯ ಸಾಲ ಸೌಲಭ್ಯಗಳ ಬಗ್ಗೆ ಕೆಲವು ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳು ಸಾಲ ನೀಡಿಕೆ ಬಗ್ಗೆ ಮಾಹಿತಿ ನೀಡುವುದು ಕಂಡುಬಂತು.

ಉದ್ಘಾಟನಾ ಸಮಾರಂಭದಲ್ಲಿ ದೂಡಾ ಅಧ್ಯಕ್ಷ ದಿನೇಶ ಕೆ. ಶೆಟ್ಟಿ, ಎಫ್‌ಪಿಎಸಿಇ ಅಧ್ಯಕ್ಷ ಇ. ದೇವೇಂದ್ರಪ್ಪ, ಎಸಿಸಿಇ ದಾವಣಗೆರೆ ಶಾಖೆಯ ಛೇರ್ಮನ್ ವೆಂಕಟರಮಣರೆಡ್ಡಿ, ಐಸಿಐ ಛೇರ್ಮನ್ ಜಿ.ಎಂ ಲೋಹಿತಾಶ್ವ, ಪ್ರಕಾಶ್ ಮುಳೆ, ಜಿ.ಬಿ. ಸುರೇಶ್ ಕುಮಾರ್, ಯು.ಆರ್. ಕೊಟ್ರೇಶ್, ಎ.ಬಿ. ರವಿ, ಆನಂದ ಷಾ, ಸತೀಶ್, ರವೀಂದ್ರಬಾಬು ಮತ್ತಿತರರಿದ್ದರು.

ಸಿವಿಲ್ ಇಂಜಿನಿಯರ್ ಹೆಚ್.ವಿ. ಮಂಜುನಾಥಸ್ವಾಮಿ ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಸ್ಮಾರ್ಟ್ ಸಿಟಿ ದಾವಣಗೆರೆ ನಾಲ್ಕೂ ದಿಕ್ಕುಗಳಲ್ಲಿ ಶರವೇಗದಲ್ಲಿ ಬೆಳೆಯುತ್ತಿದೆ. ನಿವೇಶನಗಳ ದರ ಗಗನಕ್ಕೇರಿತ್ತಿದ್ದು, ಸಾಮಾನ್ಯ ಜನರಿಗೆ ಕಟ್ಟಡ ಕಟ್ಟಲು, ಸಾಧ್ಯವಾಗುತ್ತಿಲ್ಲ. ಕಾರಣ, ಬಹುಮಹಡಿ ಕಟ್ಟಡಗಳ ಅನಿವಾರ್ಯತೆ ಇದ್ದು, ಗಮನ ಹರಿಸಬೇಕು. ಅಲ್ಲದೇ, ಕಾನೂನು ತೊಡಕುಗಳನ್ನು ಪರಿಹರಿಸಿ ಬಹುಮಹಡಿ ಕಟ್ಟಡಗಳ ಪರವಾನಗಿ ಕೊಡಬೇಕು ಎಂದು ಒತ್ತಾಯಿಸಿದರು.

ಯು.ಎಸ್.ಕಮ್ಯುನಿಕೇಷನ್ ಮಾಲೀಕರಾದ ಎಸ್. ಎಂ.ಕೆ. ಉಮಾಪತಿ, ವ್ಯವಸ್ಥಾಪಕ ಕಲ್ಮೇಶ್ ತೋಟದ ಅವರು ಅತಿಥಿ ಗಣ್ಯರನ್ನು ಸ್ವಾಗತಿಸಿ, ಬೀಳ್ಕೊಟ್ಟರು.

## ಕದಳಿ ವೇದಿಕೆಯಿಂದ ಪ್ರಬಂಧ ಸ್ಪರ್ಧೆ

ದಾವಣಗೆರೆ, ನ. 15 - ಕದಳಿ ಮಹಿಳಾ ವೇದಿಕೆಯ ವಾರ್ಷಿಕೋತ್ಸವದ ಪ್ರಯುಕ್ತ, ದಾವಣಗೆರೆ ಜಿಲ್ಲೆಯ ಸಾರ್ವಜನಿಕ ಮಹಿಳೆಯರಿಗೆ ಹಾಗೂ ನಮ್ಮ ಕದಳಿ ಮಹಿಳಾ ವೇದಿಕೆಯ ಸದಸ್ಯರಿಗೆ ಪ್ರಬಂಧ ಸ್ಪರ್ಧೆ ನಡೆಯಲಿದೆ.

ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣ ವಿಷಯದ ಮೇಲೆ ಪ್ರಬಂಧ ಬರೆಯಲು ಆಸಕ್ತಿ ಇರುವವರು ಪುಟದ ಒಂದೇ ಮಗ್ಗುಲಲ್ಲಿ, ನಾಲ್ಕು ಪುಟಗಳಿಗೆ ಮೀರದಂತೆ ಬರೆದು ಗಾಯತ್ರಿ ವಸ್ತ್ರದ್, ಮನೆ ನಂಬರ್ 2002/3, ಎಂ.ಸಿ.ಸಿ.'ಎ' ಬ್ಲಾಕ್, ದಾವಣಗೆರೆ -4 9986983277 ಅಥವಾ ಮಮತಾ ನಾಗ ರಾಜ್, ಶ್ರೀಗಂಧ, 10ನೇ ಕ್ರಾಸ್, ಆಂಜನೇಯ ಬಡಾವಣೆ, 9964829122 ಇಲ್ಲಿಗೆ ಇದೇ ದಿನಾಂಕ 30ರೊಳಗೆ ಕಳುಹಿಸಬಹುದಾಗಿದೆ.

# ನಿರ್ಮಲ ತುಂಗಭದ್ರಾ ಅಭಿಯಾನಕ್ಕೆ ಎಸ್ಸೆಸ್ ಬೆಂಬಲ



ದಾವಣಗೆರೆ, ನ.15- ಹರಿಹರದ ಪಂಚಮಸಾಲಿ ಸಮಾಜದ ಜಗದ್ಗುರು ಶ್ರೀ ವಚನಾನಂದ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಹಮ್ಮಿಕೊಂಡಿರುವ ನಿರ್ಮಲ ತುಂಗಭದ್ರಾ ಅಭಿಯಾನಕ್ಕೆ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಬೆಂಬಲ ವ್ಯಕ್ತಪಡಿಸಿದ್ದಾರೆ.

ಇಂದು ಅಭಿಯಾನದ ಅಂಗವಾಗಿ ನಡೆದ ಪಾದಯಾತ್ರೆಗೆ ಚಾಲನೆ ನೀಡಿದ ಅವರು ಅಭಿಯಾನಕ್ಕೆ ಬೆಂಬಲ ವ್ಯಕ್ತಪಡಿಸಿ ಕಾಮಗಾರಿ ವೀಕ್ಷಿಸಿ ಹರ್ಷ ವ್ಯಕ್ತಪಡಿಸಿದರು.

ನಂತರ ಹರಿಹರದ ಪಂಚಮಸಾಲಿ ಮಠಕ್ಕೆ ಭೇಟಿ ನೀಡಿ ಶ್ರೀಗಳಿಂದ ಆಶೀರ್ವಾದ ಪಡೆದರು. ಈ ಸಂದರ್ಭದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಅಥಣಿ ವೀರಣ್ಣ, ಅಣಬೇರು ರಾಜಣ್ಣ, ಎಸ್.ಕೆ.ವೀರಣ್ಣ, ದೂಡಾ ಅಧ್ಯಕ್ಷ ದಿನೇಶ್ ಕೆ.ಶೆಟ್ಟಿ, ಹರ ಜಾತ್ರೆ ಅಧ್ಯಕ್ಷ ಪ್ರಕಾಶ್ ಪಾಟೀಲ್, ಜೊಳ್ಳಿ ಗುರು ಮತ್ತಿತರರಿದ್ದರು.

## ನಗರದಲ್ಲಿ ಇಂದು ರಾಜ್ಯ ಸ್ಟ್ರೆಂಥ್ ಲಿಫ್ಟಿಂಗ್ ಮತ್ತು ಇನ್‌ಕ್ಲೇನ್ ಬೆಂಚ್ ಪ್ರೆಸ್ ಚಾಂಪಿಯನ್‌ಶಿಪ್

ಕರ್ನಾಟಕ ರಾಜ್ಯ ಸ್ಟ್ರೆಂಥ್ ಲಿಫ್ಟಿಂಗ್ ಅಸೋಸಿಯೇಷನ್ ವತಿಯಿಂದ ಕರ್ನಾಟಕ ರಾಜ್ಯ ಸ್ಟ್ರೆಂಥ್ ಲಿಫ್ಟಿಂಗ್ ಮತ್ತು ಇನ್‌ಕ್ಲೇನ್ ಬೆಂಚ್ ಪ್ರೆಸ್ ಚಾಂಪಿಯನ್‌ಶಿಪ್-2024 ಉದ್ಘಾಟನಾ ಸಮಾರಂಭವು ಇಂದು ಬೆಳಿಗ್ಗೆ 11 ಗಂಟೆಗೆ ಶ್ರೀ ಸಿದ್ಧಿವಿನಾಯಕ ಸಾಂಸ್ಕೃತಿಕ ಸಂಘದ ಆವರಣದಲ್ಲಿ ನೆರವೇರಲಿದೆ.

ಶ್ರೀನಿವಾಸ ದಾಸಕರಿಯಪ್ಪ ಉದ್ಘಾಟನೆ ನೆರವೇರಿಸುವರು. ಚಮನ್‌ಸಾಬ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ದಿನೇಶ್ ಕೆ. ಶೆಟ್ಟಿ, ಕೃಷ್ಣ ಕೆಂಗೋ ಹೆಚ್. ಅವರು ಆಗಮಿಸುವರು.

ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಿಂದ ಪುರುಷ ಹಾಗೂ ಮಹಿಳೆಯರು ಮಾಸ್ಟರ್ಸ್, ಕಿರಿಯರು ಹಾಗೂ ವಿಕಲಚೇತನರ ವಿಭಾಗದಲ್ಲಿ ಸ್ಪರ್ಧೆಗಳು ಇಂದು ಮತ್ತು ನಾಳೆ ನಡೆಯಲಿದ್ದು, ಇಂದು ಬೆಳಿಗ್ಗೆ 8 ರಿಂದ 10 ಗಂಟೆಯ ವರೆಗೆ ದೇಹದ ತೂಕ ತಪಾಸಣೆ ಮಾಡಲಾಗುವುದು. ನಂತರ ಮಧ್ಯಾಹ್ನ 12 ರಿಂದ ಸ್ಪರ್ಧೆಗಳು ಆರಂಭವಾಗುವವು.

ನಾಳೆ ಭಾನುವಾರ ಸಂಜೆ 6 ಗಂಟೆಗೆ ನಡೆಯುವ ಸಮಾರೋಪ ಸಮಾರಂಭದಲ್ಲಿ ಜಿ.ಬಿ. ವಿನಯ್‌ಕುಮಾರ್ ಬಹುಮಾನ ವಿತರಣೆ ಮಾಡುವರು. ಕೆ.ಸಿ. ಲಿಂಗರಾಜು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಬಿ. ವೀರಣ್ಣ, ಪಂಚಣ್ಣ ಆಗಮಿಸುವರು.

## ನಗರದಲ್ಲಿ ನಾಳೆ ವಿಶ್ವ ಮಧುಮೇಹ ದಿನಾಚರಣೆ

ದಾವಣಗೆರೆ, ನ. 15- ನಗರದ ಆಲೂರು ಚಂದ್ರಶೇಖರಪ್ಪ ಮೆಮೋರಿಯಲ್ ಆಸ್ಪತ್ರೆ ಮತ್ತು ಟ್ರಸ್ಟ್ ವತಿಯಿಂದ ಆಲೂರು ಆಸ್ಪತ್ರೆಯಲ್ಲಿ ವಿಶ್ವ ಮಧುಮೇಹ ದಿನಾಚರಣೆ ಮಧುಮೇಹ ಮತ್ತು ಯೋಗಕ್ಷೇಮ ಕಾರ್ಯಕ್ರಮವು ನಾಡಿದ್ದು ದಿನಾಂಕ 17ರ ಭಾನುವಾರ ಬೆಳಿಗ್ಗೆ 8 ರಿಂದ 1 ಗಂಟೆಯವರೆಗೆ ನಡೆಯಲಿದೆ ಎಂದು ಸಕ್ಕರೆ ಕಾಯಿಲೆ ತಜ್ಞ ಡಾ. ಆಲೂರು ಮಂಜುನಾಥ್ ತಿಳಿಸಿದ್ದಾರೆ.

## ಸರೋಜ ನಾಗರಾಜ್ ಅವರಿಗೆ 'ಜಿಲ್ಲಾ ವನಿತಾ ಸಾಹಿತ್ಯ ಶ್ರೀ' ಪ್ರಶಸ್ತಿ

### 'ಜನತಾವಾಣಿ' ಸಹಯೋಗದ ಪ್ರಶಸ್ತಿ ಪ್ರದಾನ ಇಂದು



ದಾವಣಗೆರೆ ಜಿಲ್ಲಾ ವನಿತಾ ಸಾಹಿತ್ಯ ವೇದಿಕೆ ಹಾಗೂ 'ಜನತಾವಾಣಿ' ಸಹಯೋಗದಲ್ಲಿ ಇಂದು ಮಧ್ಯಾಹ್ನ 2.30 ಗಂಟೆಗೆ ರೋಟರಿ ಬಾಲಭವನದಲ್ಲಿ 'ಜಿಲ್ಲಾ ವನಿತಾ ಸಾಹಿತ್ಯ ಶ್ರೀ' ಪ್ರಶಸ್ತಿ ಪ್ರದಾನ ಹಾಗೂ ಕನ್ನಡ ರಾಜ್ಯೋತ್ಸವ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದೆ ಎಂದು ವನಿತಾ ಸಾಹಿತ್ಯ ವೇದಿಕೆ ಅಧ್ಯಕ್ಷರಾದ ಮಲ್ಲಮ್ಮ ನಾಗರಾಜ್ ತಿಳಿಸಿದರು.

ಹಿರಿಯ ಸಾಹಿತಿ ಪಾಂಡೋಮಟ್ಟಿಯ ಶ್ರೀಮತಿ ಸರೋಜ ನಾಗರಾಜ್ ಅವರಿಗೆ ಹೊನ್ನೇನಹಳ್ಳಿ ಹನುಮಕ್ಕ ನಂಜಪ್ಪ ಮೆಳ್ಳೇಕಟ್ಟೆ ಸ್ಮರಣಾರ್ಥ 'ದಾವಣಗೆರೆ ಜಿಲ್ಲಾ ವನಿತಾ ಸಾಹಿತ್ಯಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಗುವುದು.

ಮಧ್ಯಾಹ್ನ 2.30 ರಿಂದ 4 ರವರೆಗೆ ಶ್ರೀಮತಿ ಜಯಮ್ಮ ನೀಲಗುಂದ ಅವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆಯಲಿದೆ. ಪ್ರಶಸ್ತಿಯನ್ನು ಶ್ರೀಮತಿ ಜಯಶೀಲಾ ಷಡಾಕ್ಷರಪ್ಪ ಅವರು ಪ್ರದಾನ ಮಾಡಲಿದ್ದು, ಮುಖ್ಯ ಅತಿಥಿಗಳಾಗಿ ಶಿಕ್ಷಕಿ ಹಾಗೂ ಸಾಹಿತಿ ಶ್ರೀಮತಿ ದೀಪಾ ಕುಬುಸದ್, ವನಿತಾ ಸಮಾಜದ ಅಧ್ಯಕ್ಷರಾದ ಶ್ರೀಮತಿ ಪದ್ಮ ಪ್ರಕಾಶ್ ಉಪಸ್ಥಿತರಿರುವರು.

## ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ದೊಡ್ಡಬೂದಿಹಾಳು, ಚಿಕ್ಕಬೂದಿಹಾಳು, ದೇವರಹಟ್ಟಿ, ಬಿ. ಕಲ್ಪನಹಳ್ಳಿ, ಚಿತ್ತಾನಹಳ್ಳಿ, ಅಮೃತನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ನಗರದಲ್ಲಿ ಇಂದು ಮಕ್ಕಳ ದಿನಾಚರಣೆ

ಕರ್ನಾಟಕ ರಾಜ್ಯ ಬಾಲಭವನ ಸೊಸೈಟಿ (ಬೆಂಗಳೂರು), ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಬಾಲಭವನ ಸಮಿತಿ, ಕರ್ನಾಟಕ ವಿಜ್ಞಾನ ಪರಿಷತ್ (ದಾವಣಗೆರೆ) ಇವರ ಸಂಯುಕ್ತಾಶ್ರಯದಲ್ಲಿ ಇಂದು ಬೆಳಿಗ್ಗೆ 11.30 ಕ್ಕೆ ಜೆ.ಹೆಚ್.ಪಟೇಲ್ ಬಡಾವಣೆಯ ಜಿಲ್ಲಾ ಬಾಲಭವನದಲ್ಲಿ ಮಕ್ಕಳ ದಿನಾಚರಣೆ ಕಾರ್ಯಕ್ರಮ ನಡೆಯಲಿದೆ. ಜಿ.ಪಂ. ಸಿಇಓ ಡಾ. ಸುರೇಶ್ ಇಟ್ನಾಳ್ ಕಾರ್ಯಕ್ರಮ ಉದ್ಘಾಟಿಸುವರು. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕ ಕೆ.ಎಸ್. ರಾಜಾನಾಯ್ಕ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಡಿಡಿಪಿಐ ಜಿ. ಕೊಟ್ರೇಶ್, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಿಲ್ಲಾ ನಿರೂಪಣಾಧಿಕಾರಿ ಗುರುಪ್ರಸಾದ್, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಟಿ.ಎನ್. ಕವಿತ, ಕರ್ನಾಟಕ ವಿಜ್ಞಾನ ಪರಿಷತ್ ದಾವಣಗೆರೆ ಘಟಕದ ಕಾರ್ಯದರ್ಶಿ ಎಂ. ಗುರುಸಿದ್ಧಸ್ವಾಮಿ ಭಾಗವಹಿಸಲಿದ್ದಾರೆ.

## ಎಸ್.ಬಿ.ಸಿ. ಕಾಲೇಜಿನಲ್ಲಿ ಇಂದು 'ಕನ್ನಡೋತ್ಸವ' ಸಂಭ್ರಮಾಚರಣೆ

ಸುಶೀಲಮ್ಮ ಬಂಕಾಪುರದ ಚನ್ನಬಸಪ್ಪ ಪ್ರಥಮ ದರ್ಜೆ ಮಹಿಳಾ ಕಾಲೇಜು ಹಾಗೂ ಅಥಣಿ ಸ್ನಾತಕೋತ್ತರ ಕೇಂದ್ರದ ವತಿಯಿಂದ ಇಂದು ಮಧ್ಯಾಹ್ನ 12 ಗಂಟೆಗೆ ಕಾಲೇಜಿನ ಸಭಾಂಗಣದಲ್ಲಿ 69 ನೇ 'ಕನ್ನಡೋತ್ಸವ' ಸಂಭ್ರಮಾಚರಣೆ ಕಾರ್ಯಕ್ರಮ ನಡೆಯಲಿದೆ.


ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ ಅಧ್ಯಕ್ಷ ಬಿ.ಸಿ. ಶಿವಕುಮಾರ್ ಅಧ್ಯಕ್ಷತೆ ವಹಿಸುವರು. ಹಿರಿಯ ಪತ್ರಕರ್ತ ಬಾ.ಮ. ಬಸವರಾಜಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ದಾವಣಗೆರೆ ವಿವಿ ಕನ್ನಡ ಅಧ್ಯಯನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಭೀಮಾಶಂಕರ್ ಜೋಷಿ, ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಪ್ರೊ.ಎಂ.ಸಿ. ಗುರು, ಎಸ್.ಬಿ.ಸಿ. ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಚಾರ್ಯ ಡಾ. ಕೆ. ಷಣ್ಮುಖ ಭಾಗವಹಿಸಲಿದ್ದಾರೆ.

## ನಗರದಲ್ಲಿ ಇಂದು ಲಯನ್ಸ್ ಸಭೆ

ಲಯನ್ಸ್ ಕ್ಲಬ್ ಸಾಮಾನ್ಯ ಸಭೆ, ಉಪನ್ಯಾಸ, ಪ್ರಶಸ್ತಿ ಫಲಕ ವಿತರಣೆ, ಲಯನ್ಸ್ ಸ್ಟಿಕರ್ ಹಾಗೂ ಬ್ಯಾಡ್ಜ್ ವಿತರಣಾ ಕಾರ್ಯಕ್ರಮವು ಲಯನ್ಸ್ ಭವನದಲ್ಲಿ ಇಂದು ಸಂಜೆ 7.05ಕ್ಕೆ ನಡೆಯಲಿದೆ. ಲಯನ್ಸ್ ಕ್ಲಬ್ ಅಧ್ಯಕ್ಷ ಎಸ್.ಜಿ. ಉಳವಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಹಿರಿಯರ ಆರೋಗ್ಯ, ತಾಳ್ಮೆ, ಉತ್ಸಾಹ ಕುರಿತು ಹಿರಿಯ ಲಯನ್ಸ್ ಸದಸ್ಯ ಟಿ.ಎಂ. ಪಂಚಾಕ್ಷರಯ್ಯ ವಿಶೇಷ ಉಪನ್ಯಾಸ ನೀಡಲಿದ್ದಾರೆ ಎಂದು ಕಾರ್ಯದರ್ಶಿ ಸಿ. ಅಜಯ್ ನಾರಾಯಣ್ ತಿಳಿಸಿದ್ದಾರೆ.

# ಬುಡಕಟ್ಟು ಜನರ ಆರ್ಥಿಕ ಸಬಲೀಕರಣಕ್ಕಾಗಿ ಯೋಜನೆಗಳ ಸಮರ್ಪಕ ಬಳಕೆಗೆ ಸೂಚನೆ



**ಆದಿವಾಸಿ ಹೋರಾಟಗಾರ ಬಿರ್ಸಾ ಮುಂಡಾ ಅವರ ಜನ್ಮ ದಿನಾಚರಣೆ ಅಂಗವಾಗಿ ಜನ ಜಾತಿಯ ಗೌರವ್ ದಿವಸ್ ಕಾರ್ಯಕ್ರಮದಲ್ಲಿ ಲೋಕಸಭಾ ಸದಸ್ಯರಾದ ಡಾ. ಪ್ರಭಾ ಮಲ್ಲಿಕಾರ್ಜುನ್**

ದಾವಣಗೆರೆ, ನ. 15 - ರಾಷ್ಟ್ರದ ಸ್ವಾತಂತ್ರ್ಯಕ್ಕಾಗಿ ಹಾಗೂ ಬುಡಕಟ್ಟು ಜನಾಂಗದವರ ಏಳಿಗೆಗಾಗಿ ಹೋರಾಡಿದ ಧೀಮಂತ ವ್ಯಕ್ತಿ ಬಿರ್ಸಾ ಮುಂಡಾ ಅವರಾಗಿದ್ದು ಕೇಂದ್ರ ಸರ್ಕಾರ ಬುಡಕಟ್ಟು ಜನರ ಅಭಿವೃದ್ದಿಗಾಗಿ ಅನುಷ್ಠಾನ ಮಾಡುತ್ತಿರುವ ಯೋಜನೆಗಳನ್ನು ಸಮರ್ಪಕವಾಗಿ ಬಳಕೆ ಮಾಡಿಕೊಂಡು ಜಿಲ್ಲೆಯ ಜನರ ಅಭಿವೃದ್ದಿ ಮಾಡಲು ಕ್ರಮವಹಿಸಲಾಗುತ್ತದೆ ಎಂದು ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್ ತಿಳಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ನಡೆದ ಜನ ಜಾತಿಯ ಗೌರವ್ ದಿವಸ್ ಆಚರಣೆ ಸಮಾರಂಭದಲ್ಲಿ ಆದಿವಾಸಿ ಬಿರ್ಸಾ ಮುಂಡಾ ಅವರ ಜನ್ಮ ದಿನಾಚರಣೆಯಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು. ಆದಿವಾಸಿ ಹೋರಾಟಗಾರ ಬಿರ್ಸಾ ಮುಂಡಾ ಅವರ ಜನ್ಮ ದಿನಾಚರಣೆ ಅಂಗವಾಗಿ ಜನ ಜಾತಿಯ ಗೌರವ್ ದಿವಸ್ ಎಂದು ಪ್ರತಿ ವರ್ಷ ನ. 15 ರಂದು ಆಚರಿಸಲಾಗುತ್ತದೆ.

ಜನ ಜಾತಿಯ ಗೌರವ್ ದಿವಸದಂದು ದೇಶದ ಜನ ಜಾತಿಯ ಜನರ ಸಾಧನೆಗಳು, ಸಂಸ್ಕೃತಿಗಳು, ಐತಿಹ್ಯಗಳು ಮತ್ತು ಭಾರತೀಯ ಸ್ವಾತಂತ್ರ್ಯ ಹೋರಾಟದಲ್ಲಿ ಅವರು ನೀಡಿದ ಕೊಡುಗೆಗಳನ್ನು ಸ್ಮರಿಸಲಾಗುತ್ತದೆ ಎಂದು ಹೇಳಿದರು. ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯದ ಅಡಿಯಲ್ಲಿ ಕೇಂದ್ರ ಸರ್ಕಾರವು ಆದಿವಾಸಿಗಳ ಸಬಲೀಕರಣಕ್ಕಾಗಿ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆ ಹಾಗೂ ಧರ್ತಿ ಆಬಾ ಜನ ಜಾತಿಯ ಉತ್ಕರ್ಷ ಅಭಿಯಾನ ಕಾರ್ಯಕ್ರಮಗಳಡಿಯಲ್ಲಿ ಆದಿವಾಸಿಗಳಿಗೆ ಹಾಗೂ ಎಸ್‌ಟಿ ಜನರ ಸ್ವಸಹಾಯ ಗುಂಪುಗಳಿಗೆ ಜಿಲ್ಲಾ ಪಂಚಾಯತ್‌ನಿಂದ ಎನ್‌ಆರ್‌ಎಲ್‌ಎಂ ರಡಿ ಪ್ರಧಾನ ಮಂತ್ರಿ ವನಧನ್ ಯೋಜನೆಯಡಿ ಜಿಲ್ಲೆಯಲ್ಲಿನ 5 ವನಧನ್ ವಿಕಾಸ ಕೇಂದ್ರಗಳ ಸ್ವಸಹಾಯ ಸಂಘದ ಮಹಿಳಾ ಗುಂಪುಗಳಿಗೆ 37 ಲಕ್ಷದ ವೆಚ್ಚದಲ್ಲಿ 22 ವಿವಿಧ ಪರಿಕರಗಳನ್ನು ವಿತರಣೆ ಮಾಡಲಾಗಿದೆ. ಇದರಲ್ಲಿ ಸ್ವ ಉದ್ಯೋಗ ನೀಡುವ ಅಗರಬತ್ತಿ ತಯಾರಿಸುವ ಯಂತ್ರ, ಅಡಿಕೆ ಕತ್ತರಿಸುವ ಯಂತ್ರ, ಎಣ್ಣೆ ಗಾಣ, ಹಿಟ್ಟಿನ ಗಿರಣಿ, ಅಡಿಕೆ ತಟ್ಟೆ ಯಂತ್ರ, ರೊಟ್ಟಿ ಮಾಡುವ ಯಂತ್ರಗಳನ್ನು ವಿತರಣೆ ಮಾಡಲಾಗಿದೆ.

ವನಧನ್ ಯೋಜನೆ ಐದು ವರ್ಷಗಳ ಕಾರ್ಯಕ್ರಮವಾಗಿದ್ದು, ಈ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನ ಮಾಡಿ ಅತ್ಯುತ್ತಮ ಜಿಲ್ಲೆ ಎಂದು ಹೆಸರು ಗಳಿಸುವ ಮೂಲಕ ಕೇಂದ್ರದ ಹೆಚ್ಚಿನ ಅನುದಾನ ದಾವಣಗೆರೆಗೆ ಪಡೆದು ಕ್ಷೇತ್ರದಲ್ಲಿನ ಬುಡಕಟ್ಟು ಹಾಗೂ ಪ. ಪಂಗಡದ ಜನರ ಆರ್ಥಿಕಾಭಿವೃದ್ದಿ ಮತ್ತು ಇವರು ವಾಸಿಸುವ ಕಡೆ ಮೂಲಭೂತ ಸೌಕರ್ಯ, ಆಶ್ರಮ ಶಾಲೆಯಲ್ಲಿನ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ವಹಿಸಬೇಕೆಂದು ತಿಳಿಸಿ ಸ್ವ ಉದ್ಯೋಗ ಕೈಗೊಂಡ ಮಹಿಳೆಯರು ಮುಂದಿನ ದಿನಗಳಲ್ಲಿ ತಮ್ಮ ಆರ್ಥಿಕ ಅನುಕೂಲತೆಗಳ ಮತ್ತು ಅಭಿವೃದ್ದಿ ಕುರಿತು ಯಶೋಗಾಥೆಗಳನ್ನು ಇಲಾಖೆಯೊಂದಿಗೆ ಹಂಚಿಕೆ ಮಾಡಿಕೊಳ್ಳುವಂತಾಗಬೇಕೆಂದು ಆಶಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸುರೇಶ್ ಬಿ. ಇಟ್ನಾಳ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ್, ಮುಖ್ಯ ಯೋಜನಾಧಿಕಾರಿ ಮಲ್ಲಾನಾಯ್ಕ್, ಯೋಜನಾ ನಿರ್ದೇಶಕ ರೇಷ್ಮಕೌಸರ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜ್
ಪ್ರವೇಶ ಪ್ರಕಟಣೆ Hurry up...
ಕೆಲವೇ ಸೀಟುಗಳು ಮಾತ್ರ
1) DMLT - ಲ್ಯಾಬೋರೇಟರಿ ಟೆಕ್ನಾಲಜಿ
2) DHI - ಹೆಲ್ತ್ ಇನ್‌ಸ್ಪೆಕ್ಟರ್ 3) DOT - ಆಪ್ತಾಲ್ಮಿಕ್ ಟೆಕ್ನಾಲಜಿ
4) DOT & AT - ಆಪರೇಷನ್ ಥಿಯೇಟರ್ ಅನಸ್ತೇಶಿಯಾ ಟೆಕ್ನಾಲಜಿ
ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :
ಲುಂಬಿನಿ ಇನ್‌ಸ್ಟಿಟ್ಯೂಟ್ ಆಫ್ ಪ್ಯಾರಾ ಮೆಡಿಕಲ್ ಸೈನ್ಸ್ ಕಾಲೇಜ್
2ನೇ ಮುಖ್ಯ ರಸ್ತೆ, 9ನೇ ಅಡ್ಡ ರಸ್ತೆ, ಲತ ನರ್ಸಿಂಗ್ ಹೋಂ ಹತ್ತಿರ, AVK ಕಾಲೇಜ್ ರಸ್ತೆ, ಪಿಜೆ ಬಡಾವಣೆ, ದಾವಣಗೆರೆ-02
ಮೊ. : 70195 86789, ಫೋ. : 08192 460622

ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು






ಶ್ರೀ ಅನ್ನಪೂರ್ಣೇಶ್ವರಿ ಟ್ರಾನ್ಸ್‌ಪೋರ್ಟ್ ಮಾಲೀಕರಾದ
ಶ್ರೀ ಮಾರುತಿ ಎಂ.ಡಿ. ಶಾಮನೂರು
ಇವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.
ಶುಭ ಕೋರುವವರು
★ ಮಧು ವಿ. ಶಾಮನೂರು ★ ಮಂಜುನಾಥ ಪಾಮೇನಹಳ್ಳಿ
★ ನಾಗರಾಜ್ ಶಾಮನೂರು ★ ಮಾರುತಿ ದೊಗ್ಗಳ್ಳಿ
★ ಮಂಜುನಾಥ ಶಾಮನೂರು ★ ಶಿವಕುಮಾರ್ ರಾಣೇಬೆನ್ನೂರು
ಎಸ್.ಎಸ್.ಎಂ. ಟ್ರಾನ್ಸ್‌ಪೋರ್ಟ್, ದಾವಣಗೆರೆ.






# ಜನತಾವಾಣಿ ಕಚೇರಿಯಲ್ಲಿ 'ಎಜು ಏಷಿಯಾ' ವಿದ್ಯಾರ್ಥಿಗಳು

ದಾವಣಗೆರೆ, ನ.15- ಪತ್ರಿಕೆಗೆ 'ಜನತಾವಾಣಿ' ಎಂದು ಹೆಸರಿಟ್ಟ ಕಾರಣವೇನು? ಹಲವಾರು ಪತ್ರಿಕೆಗಳ ನಡುವೆಯೂ 'ಜನತಾವಾಣಿ' ಹೆಚ್ಚು ಜನಪ್ರಿಯವಾಗಲು ಕಾರಣವೇನು? ಪತ್ರಿಕೆಯಲ್ಲಿ ಬರುವ ಅಷ್ಟೆಲ್ಲಾ ವರದಿಗಳನ್ನು ಹೇಗೆ ಸಂಗ್ರಹಿಸುತ್ತೀರಿ?

ನಗರದ ಎಜು ಏಷಿಯಾ ಎಂ.ಎನ್.ಎಸ್. ಕಾಂಟಿನೆಂಟಲ್ ಶಾಲಾ ವಿದ್ಯಾರ್ಥಿಗಳು ಶುಕ್ರವಾರ 'ಜನತಾವಾಣಿ' ಕಾರ್ಯಾಲಯಕ್ಕೆ ಆಗಮಿಸಿ ಸಂಪಾದಕರು ಹಾಗೂ ವರದಿಗಾರರೊಂದಿಗೆ ಸಂವಾದ ನಡೆಸುತ್ತಿದ್ದಾಗ ಕೇಳಿದ ಪ್ರಶ್ನೆಗಳಿವು.

ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಾರ್ಯಾಲಯಕ್ಕೆ ಬಂದಿದ್ದರು. ಆದರೆ ಪ್ರತಿ ವಿದ್ಯಾರ್ಥಿಯ ಮನದಲ್ಲೂ ಪ್ರಶ್ನೆಗಳ ಗುಚ್ಚವೇ ಇತ್ತು. ಸಂಪಾದಕರಾದ ಎಂ.ಎಸ್. ವಿಕಾಸ್ ಮಕ್ಕಳೊಂದಿಗೆ ಆತ್ಮೀಯತೆಯಿಂದಲೇ ಬೆರೆತು ಉತ್ತರಿಸಿದರು.

ಸಂಪಾದಕರಾಗಿ ಸಮಾಜದಲ್ಲಿ ಏನು ಬದಲಾವಣೆ ತರಲು ಬಯಸುತ್ತೀರಿ? ಸರ್ಕಾರ ನಿಮ್ಮನ್ನು ಗುರುತಿಸಿ ಪ್ರಶಸ್ತಿ ನೀಡಿದೆಯೇ? ಪತ್ರಿಕೆ ಮುದ್ರಿಸುವುದು ಹೇಗೆ? ಒಂದು ಪತ್ರಿಕೆಗೆ ತಗಲುವ ವೆಚ್ಚವೆಷ್ಟು? ಎಷ್ಟು ಜನ ಕಾರ್ಯ ನಿರ್ವಹಿಸುತ್ತಿದ್ದೀರಿ? ಸುದ್ದಿಯ ಒತ್ತಡಗಳನ್ನು ಹೇಗೆ ನಿರ್ವಹಿಸುತ್ತೀರಿ? ಹೀಗೆ ಹಲವಾರು ಪ್ರಶ್ನೆಗಳಿಗೆ ಮಕ್ಕಳು ಉತ್ತರ ಕಂಡುಕೊಂಡರು.

ವರದಿಗಾರಿಕೆ ಹಾಗೂ ವರದಿ ಮಾಡುವಾಗಿನ ಸ್ಪಷ್ಟತೆ, ನಿಖರತೆ, ಒತ್ತಡ, ಪುಟ ವಿನ್ಯಾಸದ ಬಗ್ಗೆ, ವೆಬ್ ಸೈಟ್ ನಿರ್ವಹಣೆ ವಿಷಯಗಳ ಕುರಿತು ವರದಿಗಾರರ ಎಸ್.ಎ. ಶ್ರೀನಿವಾಸ್, ಕೆ.ಎನ್. ಮಲ್ಲಿಕಾರ್ಜುನ್ ಮೂರ್ತಿ, ಮಂಜುಳಾ ಟಿ.ಎನ್., ಶೀಲಾ ವೀರಭದ್ರಪ್ಪ ವಿವರಿಸಿದರು.

ಖರ್ಚು-ವೆಚ್ಚ ನಿರ್ವಹಣೆ ಬಗ್ಗೆ ಯಶೋಧ ಅಗಡಿಮಠ ಮಾಹಿತಿ ನೀಡಿದರು. ಟಿ.ಎಂ. ಚಂದ್ರಯ್ಯ ಹಾಗೂ ಸುರೇಶ್‌ಕುಮಾರ್ ಮತ್ತೊಮ್ಮೆ ಪತ್ರಿಕೆಗಳನ್ನು ಮುದ್ರಿಸಿಯೇ ವಿದ್ಯಾರ್ಥಿಗಳಿಗೆ ತೋರಿಸಿದರು. ಫೋಟೋ ಗ್ರಾಫರ್ ರಫೀಕ್ ಅಹ್ಮದ್ ಈ ಸಂದರ್ಭದಲ್ಲಿದ್ದರು.

ಶಾಲೆಯ ಪ್ರಾಂಶುಪಾಲರಾದ ವಾಣಿ ಗುಜ್ಜರ್, ಮುಖ್ಯೋಪಾಧ್ಯಾಯರಾದ ಗಾಯತ್ರಿ ಜಿ.ಡಿ., ವಿಜ್ಞಾನ ಶಿಕ್ಷಕರಾದ ಸಮೀರ್ ಅಹ್ಮದ್, ಕನ್ನಡ ಶಿಕ್ಷಕಿ ಯಲ್ಲಮ್ಮ ಜಿ.ಬಿ., ಮಂಜುಳಾ ಜಿ.ಎಸ್., ಮಜರ್ ಅಲಿ ಈ ಸಂದರ್ಭದಲ್ಲಿದ್ದರು.



## 43ನೇ ವಾರ್ಡ್ ಶಾಮನೂರಿನಲ್ಲಿ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ

ದಾವಣಗೆರೆ, ನ. 15- ನಗರ ಪಾಲಿಕೆ 43ನೇ ವಾರ್ಡಿನಲ್ಲಿ 92 ಲಕ್ಷ ರೂ.ಗಳ ವೆಚ್ಚದಲ್ಲಿ ದೇವರಬೆಳಕೆರೆ ಮುಖ್ಯ ರಸ್ತೆಯಿಂದ ತಿಮ್ಮಾರೆಡ್ಡಿ ಶಾಲೆಗೆ ಹೋಗುವ ರಸ್ತೆ ಹಾಗೂ ಡಾಲರ್ಸ್ ಕಾಲೋನಿ ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಸಂಸದರಾದ ಡಾ. ಪ್ರಭಾ ಮಲ್ಲಿಕಾರ್ಜುನ್, ಪಾಲಿಕೆ ಮಹಾಪೌರ ಕೆ. ಚಮನ್ ಸಾಬ್, ಪಾಲಿಕೆ ನಾಮನಿರ್ದೇಶಿತ ಸದಸ್ಯ ಕಲ್ಲಳ್ಳಿ ಕೆ.ಬಿ. ರುದ್ರೇಶ್ ಅವರುಗಳು ಗುದ್ದಲಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಉಪ ಮಹಾಪೌರ ಸೋಗಿ ಶಾಂತಕುಮಾರ್, ಪಾಲಿಕೆ ಸದಸ್ಯರುಗಳಾದ ಎ.ನಾಗರಾಜ್, ಗಡಿಗುಡಾಳ್ ಮಂಜುನಾಥ್, ಪಾಮೇನಹಳ್ಳಿ ನಾಗರಾಜ್, ಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕ, ಕಾಂಗ್ರೆಸ್ ಮುಖಂಡರಾದ ಹುಲ್ಲುಮನೆ ಗಣೇಶ್, ಬಿ.ಲೋಕೇಶ್, ಶಾಮನೂರು ಸಿದ್ದಣ್ಣ, ಮದಕರಿ ಹಳದಪ್ಪ ಮತ್ತಿತರರು ಉಪಸ್ಥಿತರಿದ್ದರು.

## ಭಾರತದ ಬೆಳವಣಿಗೆ ದರ ಶೇ. 7.2ರಷ್ಟಿರಲಿದೆ

ನವದೆಹಲಿ, ನ. 15 – 2024ರಲ್ಲಿ ಭಾರತದ ಬೆಳವಣಿಗೆ ದರ ಶೇ.7.2ರಷ್ಟಿರಲಿದೆ. ಆದರೆ, ಹಣದುಬ್ಬರದ ಕಾರಣದಿಂದಾಗಿ ರಿಸರ್ವ್ ಬ್ಯಾಂಕ್ ಈ ವರ್ಷ ಕಠಿಣ ಹಣಕಾಸು ನೀತಿ ಅನುಸರಿಸಬಹುದು ಎಂದು ಮೂಡೀಸ್ ರೇಟಿಂಗ್ಸ್ ತಿಳಿಸಿದೆ.

ಸದ್ಯ ಭಾರತ ಉತ್ತಮ ಸ್ಥಿತಿಯಲ್ಲಿದೆ. ಆದರೆ, ಚಿಲ್ಲರೆ ಹಣದುಬ್ಬರ ರಿಸರ್ವ್ ಬ್ಯಾಂಕ್ ಅಪೇಕ್ಷಿತ ಮಟ್ಟಕ್ಕೆ ಬರಬೇಕಿದೆ. ಮುಂಬರುವ ದಿನಗಳಲ್ಲಿ ಉತ್ತಮ ಇಳುವರಿ ಹಾಗೂ ಉತ್ತಮ ಬಿತ್ತನೆ ಕಾರಣದಿಂದಾಗಿ ಆಹಾರ ವಸ್ತುಗಳ ಬೆಲೆ ಇಳಿಕೆಯಾಗಬಹುದು ಎಂದು ಮೂಡೀಸ್ ಹೇಳಿದೆ.

ಚಿಲ್ಲರೆ ಹಣದುಬ್ಬರ 14 ತಿಂಗಳಲ್ಲೇ ಅತಿ ಹೆಚ್ಚಿನ ಶೇ.6.21ಕ್ಕೆ ತಲುಪಿತ್ತು. ಇದು ರಿಸರ್ವ್ ಬ್ಯಾಂಕ್ ಅಪೇಕ್ಷಿತ ಮಟ್ಟಕ್ಕಿಂತ ಹೆಚ್ಚಾಗಿದೆ.

## ದತ್ತು ರಜೆಯಲ್ಲಿ ಭೇದವೇಕೆ ? ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ಪ್ರಶ್ನೆ

ನವದೆಹಲಿ, ನ. 15 – ಮೂರು ತಿಂಗಳ ಒಳಗಿನ ಮಕ್ಕಳನ್ನು ದತ್ತು ತೆಗೆದುಕೊಂಡಾಗ ಮಾತ್ರ ಮಾತೃತ್ವ ರಜೆ ನೀಡುವ ನಿಯಮವನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ. ಈ ಬಗ್ಗೆ ಉತ್ತರಿಸುವಂತೆ ಕೇಂದ್ರ ಸರ್ಕಾರಕ್ಕೆ ನ್ಯಾಯಾಲಯ ತಿಳಿಸಿದೆ.

ಮಾತೃತ್ವ ನೆರವು ಕಾಯ್ದೆ 1961ರ ಅನ್ವಯ ಮೂರು ತಿಂಗಳ ಒಳಗಿನ ಮಕ್ಕಳನ್ನು ದತ್ತು ತೆಗೆದುಕೊಂಡವರಿಗೆ ಮಾತ್ರ 12 ವಾರಗಳ ಮಾತೃತ್ವ ರಜೆ ಸಿಗುತ್ತದೆ.

ಸರ್ಕಾರ ರೂಪಿಸಿರುವ ಕಾಯ್ದೆ ಸಾಮಾಜಿಕ ಕಲ್ಯಾಣ ಉದ್ದೇಶದ್ದಾಗಿದೆ. ಇದರಲ್ಲಿ ಮೂರು ತಿಂಗಳ ವಯೋಮಿತಿ ಹೇರುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪರ್ದಿವಾಲಾ ಹಾಗೂ ಪಂಕಜ್ ಮಿತ್ತಲ್ ಅವರನ್ನು ಒಳಗೊಂಡ ಪೀಠ ಹೇಳಿದೆ.

**ಬೇಕಾಗಿದ್ದಾರೆ**

**ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ (ಫುಲ್ ಟೈಂ)**

**ಸೂಕ್ತ ಪರಿಚಯದೊಂದಿಗೆ ಸಂಪರ್ಕಿಸಿ :**

**ಫೋ. : 96861 95329**

## ಇಂದು ಅಯ್ಯಪ್ಪ ಸ್ವಾಮಿ ಮಂಡಲ ಪೂಜೆ



**ದಾವಣಗೆರೆ :** ಎಂ.ಸಿ.ಸಿ. 'ಬಿ' ಬ್ಲಾಕ್‌ನ ಬಿ.ಐ.ಇ.ಟಿ. ಕಾಲೇಜ್ ರಸ್ತೆಯ ಶರಣಂ ಅಯ್ಯಪ್ಪ ಸ್ವಾಮಿ ದೇವಸ್ಥಾನ ಸಮಿತಿ ವತಿಯಿಂದ ಇಂದು ಸಂಜೆ 5 ಗಂಟೆಗೆ ಅಯ್ಯಪ್ಪ ಸ್ವಾಮಿಯ ಮಂಡಲ ಪೂಜೆ, ಗಣಪತಿ ಹೋಮ, ಪೂರ್ಣ ವ್ರತ, ಮಂತ್ರ ಪುಷ್ಪ, ಮಡಿ ಪೂಜೆ, ಮಹಾಮಂಗಳಾರತಿ, ಮತ್ತು ತೀರ್ಥ ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯಲಿದೆ.

## ಮಧ್ಯಪ್ರದೇಶ ಜಿಲ್ಲಾಧಿಕಾರಿ ವಿರುದ್ಧ ಅತ್ಯಾಚಾರ ಪ್ರಕರಣ

ರಾಜಘರ್, ನ. 15 – ಮಧ್ಯ ಪ್ರದೇಶ ಭೂಪಾಲದ ಜಿಲ್ಲಾಧಿಕಾರಿಯೊಬ್ಬರ ವಿರುದ್ಧ ಸರ್ಕಾರಿ ಉದ್ಯೋಗಿಯೊಬ್ಬರು ಅತ್ಯಾಚಾರ ಪ್ರಕರಣ ದಾಖಲಿಸಿದ್ದಾರೆ.

47 ವರ್ಷದ ರಾಜೇಶ್ ಸೊರ್ಟೆ 2022ರಲ್ಲಿ ತಹಶೀಲ್ದಾರರಾಗಿದ್ದಾಗ ಸಂಬಂಧ ಬೆಳೆಸಿದ್ದರು. ನಂತರ ಲೈಂಗಿಕ ಹಲ್ಲೆ ನಡೆಸಿದ್ದಾರೆ ಎಂದು ಮಹಿಳಾ ಉದ್ಯೋಗಿ ದೂರಿನಲ್ಲಿ ತಿಳಿಸಿದ್ದಾರೆ. ದೂರನ್ನು ಸಮರ್ಥಿಸಲು ಮಹಿಳೆ ವಿಡಿಯೋ ಒಂದನ್ನು ಪೊಲೀಸರಿಗೆ ನೀಡಿದ್ದಾರೆ. ಆರೋಪಿ ಸೊರ್ಟೆ ಬಂಧನಕ್ಕಾಗಿ ಪೊಲೀಸರು ತಂಡವೊಂದನ್ನು ರಚಿಸಿದ್ದಾರೆ.

## ಲಂಕಾ ಚುನಾವಣೆ: ಎನ್.ಪಿ.ಪಿ.ಗೆ ಬಹುಮತ

ಕೊಲಂಬೊ, ನ. 15 – ಶ್ರೀಲಂಕಾ ಸಂಸತ್ತಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷ ಅನುರ ಕುಮಾರ್ ಡಿಸ್ಸನಾಯಕೆ ಅವರ ನ್ಯಾಷನಲ್ ಪೀಪಲ್ಸ್ ಪಾರ್ಟಿಯು ಮೂರನೇ ಎರಡರಷ್ಟು ಬಹುಮತ ಪಡೆದಿದೆ. ಚುನಾವಣೆ ನಡೆದ 225 ಕ್ಷೇತ್ರಗಳ ಪೈಕಿ 159ರಲ್ಲಿ ಎನ್.ಪಿ.ಪಿ. ಗೆಲುವು ಸಾಧಿಸಿದೆ. ಶ್ರೀಲಂಕಾದ ಸಮಗಿ ಜನ ಬಲವೆಗಯ ಪಕ್ಷವು 40 ಸ್ಥಾನ ಪಡೆದಿದೆ. ಗುರುವಾರ ನಡೆದ ಚುನಾವಣೆಯಲ್ಲಿ 2010ರ ನಂತರ ಅತಿ ಕಡಿಮೆ ಮತದಾನವಾಗಿತ್ತು.







KA/SK/DVG-028/2024-2026. O/P @ B.V. Nagar P.O. **JANATHAVANI -** Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas